ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಮೇ-೨೦೧೩ ಸಂಚಿಕೆ-೧೦



ಜನಪದ ವಿಚಾರದಲ್ಲಿ

ಮೇ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೩
ಸಂಪುಟ - ೧೩
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಕಟ್ಟುವೆವು ನಾವು

ಕಟ್ಟುವೆವು ನಾವು ಹೊಸ ನಾಡೊಂದನು,-ರಸದ
ಬೀಡೊಂದನು.

ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು !

ನಮ್ಮೆದೆಯ ಕನಸುಗಳೆ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆವ ಕೈಗಿಹುದಿದೋ ಕಣಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ !

ಜಾತಿಮತಭೇದಗಳ ಕಂದಕವು ಸುತ್ತಲೂ,
ದುರ್ಭೇದ್ಯವೆನೆ ಕೋಟೆಕೊತ್ತಲಗಳು;
ರೂಢಿರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕ್ಕೆ !

ನಾವು ಹಿಂದೆಗೆವೆವೇ? ವೀರ ತರುಣರು ನಾವು !
ಒಂದೆ ನೆಗೆತಕೆ ನೆಗೆವೆವೋ ಕಂದಕವನು,
ಕುಟ್ಟಿ ಪುಡಿಮಾಡುವೆವು ಕೋಟೆಗಳನು,
ಎದೆಯ ಮೆಟ್ಟಿ ಮುರಿಯುವೆವಸುರರಟ್ಟೆಗಳನು !

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,
ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ !

ಎಡರುಗಳ ಕಡಲುಗಳನೀಸಿ ಬರುವೆವು, ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡ
ಹೊಕ್ಕು ಹೊರಡುವೆವೆಲ್ಲ ತೊಡಕುಗಳ ಒಡಕುಗಳ
ಬಿಡಿಸಿ, ಇಡಿಗೊಳಿಸಿ ಕಟ್ಟುವೆವು ನಾಡ !

– ಡಾ. ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ಲೋಕತಂತ್ರ ವ್ಯಕ್ತಿಯ ಮತದ ಮೇಲೆ ನಿಂತಿರುವುದರಿಂದ ಮೂಲದಲ್ಲೇ ದೋಷ ಕಂಡು ಬರುತ್ತದೆ. ಇದರಿಂದಾಗಿ ಮಿಕ್ಕೆಲ್ಲ ಗಂಭೀರವಾದ ದೋಷಗಳು ಹುಟ್ಟಿಕೊಳ್ಳುತ್ತವೆ. ನಾವು ಈ ಸ್ಥಿತಿಯನ್ನು ಪರೀಕ್ಷಿಸಿದ್ದೇವೆ. ಸಮಾಜದ ಪರಮಾಣ್ವೀಕರಣವೇ ಈ ತರಹೆಯ ರಾಜಕೀಯ ವ್ಯವಸ್ಥೆಗೆ ಕಾರಣ ಎಂಬುದನ್ನೂ ನೋಡಿದ್ದೇವೆ. ಇದರಿಂದ ಈ ವ್ಯವಸ್ಥೆ ತಪ್ಪು ಆಧಾರದ ಮೇಲೆ ನಿಂತಿದೆ ಎಂಬುದಾಗಲಿ, ರಾಜ್ಯ ವ್ಯಕ್ತಿಗಳ ಗಣಿತದ ಸಹಕಾರವಾಗುವುದಿಲ್ಲ ಎಂಬ ಅಂಶವಾಗಲಿ ಬದಲಾಯಿಸುವುದಿಲ್ಲ. ವ್ಯಕ್ತಿಗತ ಮತದಾರರು ಕೂಡಿ ಜನತೆ, ರಾಷ್ಟ್ರ, ಸಮುದಾಯದ ಸಮೀಕರಣವಾಗಬಲ್ಲದು.

ಸಂಸತ್ತಿನ ಲೋಕತಂತ್ರದ ಸಮರ್ಥಕರು, ಬಹುಸಂಖ್ಯಾತ ಜನತೆಯನ್ನು ಪ್ರತಿನಿಧಿಸದೆ ಹೋದರೂ, ಬಹುಸಂಖ್ಯಾತ ಮತದಾರರನ್ನು ಇದು ಪ್ರತಿನಿಧಿಸುತ್ತದೆ ಎಂದು ವಾದಿಸುತ್ತಾರೆ. ಮೊದಲನೆಯದಾಗಿ, ಅದು ಸುಳ್ಳು, ಹೆಚ್ಚು ಸಂದರ್ಭಗಳಲ್ಲಿ ಸಾರ್ವಜನಿಕರು ವಯಸ್ಕಮತಾಧಿಕಾರ ಪಡೆದು ಚುನಾಯಿಸುವ ಸರಕಾರಗಳಲ್ಲಿ ಸಾಧಾರವಾಗಿ ಅಲ್ಪ ಮತದಿಂದ ಆರಿಸಿದ ಸರಕಾರಗಳೇ ಹೆಚ್ಚಿಗೆ ಕಾಣಬರುತ್ತವೆ, ಅಂದರೆ ಕಡಿಮೆ ಜನ ಮತದಾರರನ್ನು ಇವು ಪ್ರತಿನಿಧಿಸುತ್ತವೆ. ಎರಡಕ್ಕಿಂತ ಹೆಚ್ಚು ಪಕ್ಷಗಳಿರುವ ಕಡೆಗಳಲ್ಲೆಲ್ಲ ಇದೇ ಆಗುತ್ತದೆ, ಎರಡು ಪಕ್ಷಗಳ ವ್ಯವಸ್ಥೆಯಲ್ಲೂ ಸಾವಿರದ ಒಂಬೈನೂರ ಐವತ್ತೇಳರ ಸಾರ್ವತ್ರಿಕ ಚುನಾವಣೆಗಳಲ್ಲಿ, ಅನೇಕ ರಾಜ್ಯ ಏಳು ರಾಜ್ಯಗಳಲ್ಲಿ ಅಲ್ಪ ಮತದ ಸರಕಾರ ರಚಿತವಾಗಿತ್ತು. ಈ ರೀತಿಯ ಅಲ್ಪ ಮತದ ಸರಕಾರ ರಚಿತವಾಗಿತ್ತು. ಈ ರೀತಿಯ ಅಲ್ಪ ಮತದ ರಾಜ್ಯಗಳು, ಬಿಹಾರ (ಕಾಂಗ್ರೆಸ್:೪೪.೪೭%) ಬೊಂಬಾಯಿ (ಕಾಂಗ್ರೆಸ್ ೪೮.೬೬%); ಕೇರಳ (ಸಾಮ್ಯವಾದಿ ; ೩೭.೪೮%) ಮದ್ರಾಸ್ (ಕಾಂಗ್ರೆಸ್ ೪೬.೫೨%) ಒರಿಸ್ಸಾ (ಕಾಂಗ್ರೆಸ್ : ೪೦.೦೧%) ಉತ್ತರ ಪ್ರದೇಶ (ಕಾಂಗ್ರೆಸ್:೪೬.೨೯%) ಪಶ್ಚಿಮ ಬಂಗಾಳ(ಕಾಂಗ್ರೆಸ್ : ೪೦.೨೦%) ಒಳಗೆ ರಚಿತವಾಗಿದ್ದವು.

ಈ ದೇಶದಲ್ಲಿ ಹೀಗೆ ನಡೆಯುತ್ತಲೇ ಇದೆ. ಅನೇಕ ಪಕ್ಷಗಳ ಪದ್ಧತಿಯಲ್ಲಿ ಹೀಗೆಲ್ಲ ಆಗುವುದು ಅನಿವಾರ್ಯ ಎಂದು ಹೇಳಿ ಆತ್ಮತೃಪ್ತಿಯಿಂದ ಸಂಸತ್ತಿನ ಲೋಕತಂತ್ರದಲ್ಲಿರುವ ಅತಿ ಸ್ಪಷ್ಟವಾದ ದೋಷಗಳನ್ನು ದೂರ ಮಾಡಲು ಪ್ರಯತ್ನಿಸದೆ ಕುಳಿತುಕೊಳ್ಳುವುದು ಸರಿಯಲ್ಲ. ಲೋಕತಂತ್ರವನ್ನು ಸಮ್ಮಾನಿಸುವ ಪ್ರತಿಯೊಬ್ಬನೂ ಲೋಕತಂತ್ರದ ಶ್ರೇಷ್ಠ ತರವಾದ ರೂಪವನ್ನು ಹುಡುಕಲು ಪ್ರಯತ್ನಿಸಲೇಬೇಕು. ಹೆಚ್ಚು ಚುನಾವಣಾ ಕ್ಷೇತ್ರಗಳು ಅನುಪಾತಕ್ಕೆ ತಕ್ಕಷ್ಟು ಪ್ರತಿನಿಧಿತ್ವ, ವಿಕಲ್ಪದ ಮತದಾನ ಇವಕ್ಕೆಲ್ಲ ಸಾಕಷ್ಟು ಸಮ್ಮತಿ ಸಿಕ್ಕರೂ ಇವುಗಳಿಂದ ನಾವು ಹೆಚ್ಚಾಗಿ ಮುಂದುವರಿಯಲು ಆಗುವುದಿಲ್ಲ.

– ಜೇಪಿ.

ಜನತೆಗಾಗಿ ಚುನಾವಣೆಯೋ, ಚುನಾವಣೆಗಾಗಿ ಜನತೆಯೋ?

– ಸುರೇಂದ್ರ ಕೌಲಗಿ

ಒಂದು ಉತ್ತಮ ಮಟ್ಟದ ರೇಜರ್ ಬ್ಲೇಡ್ ತಯಾರಿಸಲು ಬರದಿದ್ದರೂ ಕಸದಿಂದ ಸ್ವಾದಿಷ್ಟವಾದ ತಿಂಡಿಗಳನ್ನು ಮಾಡುವುದರಲ್ಲಿ ನಾವು ಪರಿಣಿತರು.

- ಶ್ರೀಲಾಲ್ ಶುಕ್ಲ (ದರ್ಬಾರೀರಾಗದಲ್ಲಿ)

ಬರುವ ಮೇ ೫-೨೦೧೩ ರಂದು ಕರ್ನಾಟಕ ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಮುಂದಿನ ವರ್ಷ ರಾಷ್ಟ್ರ ಮಟ್ಟದ ಚುನಾವಣೆ ನಡೆಯಲಿದೆ. ಒಂದರ ಹಿಂದೆ ಒಂದಾಗಿ ಮಹಾ ಚುನಾವಣೆಗಳು ನಡೆಯುವಂಥ ಈ ಸನ್ನಿವೇಶದಲ್ಲಿ ಒಂದು ಪ್ರಶ್ನೆ ಕಾಡುತ್ತದೆ. ಜನತೆಗಾಗಿ ಚುನಾವಣೆಯೋ ಚುನಾವಣೆಗಾಗಿ ಜನತೆಯೋ ಎಂಬುದಾಗಿ. ಮತಹಾಕುವ ದಿನ ಯಾರಿಗೆ ತಮ್ಮ ಮತವನ್ನು ಹಾಕಬೇಕೆಂಬ ಪ್ರಶ್ನೆ ಎದುರಾಗುತ್ತದೆ. ಓರ್ವ ವಿದ್ಯಾರ್ಥಿಗೆ ವಾರ್ಷಿಕ ಪರೀಕ್ಷೆ ಎದುರಾದಂತೆ. ಮತ ಚಲಾಯಿಸಬೇಕಾದುದೇನೋ ಮೂಲಭೂತ ಕರ್ತವ್ಯ. ಮತದ ಚಲಾವಣೆಯ ಪರಿಣಾಮವೂ ವ್ಯಾಪಕ, ಅಪಾರ ಮತ್ತು ಗಂಭೀರ. ಲಘು ಮನಸ್ಸಿನಿಂದ ಮತ ಚಲಾಯಿಸುವಂತಿಲ್ಲ ಗಂಭೀರವಾಗಿ ಮತ ಚಲಾಯಿಸಬೇಕು. ಆದರೆ ಯಾರಿಗೆ ಮತ ಹಾಕಬೇಕೆಂಬುದರ ಬಗ್ಗೆ ಪೂರ್ವಾಪರ ಚಿಂತನೆಗೆ ಕಾಲಾವಕಾಶವೇ ಇರುವುದಿಲ್ಲ. ಸಂವಿಧಾನದತ್ತವಾಗಿ ಐದು ವರ್ಷಗಳಿಗೊಮ್ಮೆ ಚುನಾವಣೆ ಬರುತ್ತದೆ. ಒಂದು ಸಲ ಒಂದು ಚುನಾವಣೆಯಲ್ಲಿ ಮತದಾರರು ಮತ ಚಲಾಯಿಸಿ ಬಿಟ್ಟರೆ ಇನ್ನು ೫ ವರ್ಷ ದೇಶದ ಚಿಂತೆಯಾಗಲಿ, ತಾನು ಚಲಾಯಿಸಿದ ಮತದಾನದ ಪರಿಣಾಮ ಏನಾಯಿತು ಎಂಬುದರ ಬಗ್ಗೆಯಾಗಲೀ ಆಲೋಚನೆಯನ್ನೇ ಮಾಡುವುದಿಲ್ಲ. ೫ ವರ್ಷಗಳವರೆಗೆ ಕುಂಭಕರ್ಣ ನಿದ್ರೆಗೆ ಸಮಾನವಾದ ನಿದ್ರೆಮಾಡುತ್ತಾರೆ. ಚುನಾವಣೆ ಬಂದ ಸಂದರ್ಭದಲ್ಲಿ ದಡಬಡಾಯಿಸಿ ಎದ್ದೇಳುತ್ತಾರೆ. ಗಾಢವಾದ ನಿದ್ರೆಯ ಗುಂಗಿನಲ್ಲಿ ಬಂದಿರುವ ಚುನಾವಣೆಯಲ್ಲಿ ಯಾರಿಗೆ ಮತ ಹಾಕಬೇಕೆಂಬುದು ಅವರಿಗೆ ತಿಳಿಯದಾಗುತ್ತದೆ. ೫ ವರ್ಷದ ನಂತರ ಇನ್ನೊಂದು ಚುನಾವಣೆ ಬರುವ ವೇಳೆಗೆ ಅಧಿಕಾರಸ್ಥ ಪಕ್ಷವು ಯಾವ ಅಡೆತಡೆಯಿಲ್ಲದೆ ಕುದುರೆಯು ತನ್ನದೇ ಮೈದಾನವು ತನ್ನದೇ ಎಂಬ ರೀತಿಯಲ್ಲಿ ಆಡಳಿತ ನಡೆಸಿ ದೇಶವನ್ನು ಸ್ವರ್ಗವನ್ನಾಗಿಯೋ ನರಕವನ್ನಾಗಿಯೋ ಮಾಡಿಬಿಟ್ಟಿರುತ್ತದೆ. ಸರಿಪಡಿಸಲರದಂಥ ವಿಕೋಪದ ಪರಿಸ್ಥಿತಿಗೆ ತಲುಪಿರುತ್ತದೆ. ಆಡಳಿತ ನಡೆಸಲು ಸಾಮರ್ಥ್ಯವಿಲ್ಲದವರನ್ನು ಸಮರ್ಥರೆಂದು ಭಾವಿಸಿ ಅವರಿಗೆ ಅಧಿಕಾರದ ಚುಕ್ಕಾಣಿ ಕೊಡುತ್ತೇವೆ. ನೀತಿಹೀನರು, ಭ್ರಷ್ಟರು,

ಕೋಮುವಾದಿಗಳು, ಜಾತಿವಾದಿಗಳು, ಕೋಟ್ಯಾಧಿಪತಿಗಳನ್ನು ಆಯ್ಕೆಮಾಡಿ ಅವರನ್ನು ಯೋಗ್ಯರನ್ನಾಗಿ ಮಾಡುವ ಪ್ರಯತ್ನ ಮಾಡುತ್ತೇವೆ. ಈಗ ಅಂಥದೇ ಸನ್ನಿವೇಶ ಉಂಟಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಡಿ.ಎಂ.ಕೆ, ತೃಣಮೂಲ ಕಾಂಗ್ರೆಸ್, ತೆಲಗುದೇಶದಂಥ ತನ್ನದೇ ಆದ ಪ್ರಬಲ ಪ್ರಾದೇಶಿಕ ರಾಜಕೀಯ ಪಕ್ಷ ಇಲ್ಲವಾಗಿದೆ. ಇತ್ತೀಚಿಗೆ ರಚಿತವಾದ ಪ್ರಾದೇಶಿಕ ಪಕ್ಷ ಮತಗಳೆಲ್ಲವೂ ಹಂಚಿ ಮಣ್ಣು ಪಾಲಾಗುವಂತೆ ಮಾಡುವುದರಲ್ಲಿ ಮಾತ್ರ ಯಶಸ್ವಿಯಾಗಲಿದೆ. ಇನ್ನುಳಿದ ರಾಷ್ಟ್ರೀಯ ಪಕ್ಷಗಳೆಂದು ಕರೆಯಲ್ಪಡುವ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಪಕ್ಷಗಳ ಆಡಳಿತವನ್ನು ಅನುಭವಿಸಿಯಾಗಿದೆ. ರಾಜ್ಯ ಮಟ್ಟದಲ್ಲಿ ಅವುಗಳನ್ನು ಅಧಿಕಾರಕ್ಕೆ ತರಬೇಕೆಂದರೆ ರಾಷ್ಟ್ರಮಟ್ಟದಲ್ಲಿ ಅವುಗಳಿಗೆ ಅಧಿಕಾರ ದೊರೆಯುವುದರಲ್ಲಿ ಸಂಶಯವಿದೆ. ಹೀಗಾಗಿ ರಾಜ್ಯಮಟ್ಟದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಪಕ್ಷ ಯಾವ ರೀತಿ ಸಮರ್ಥನೀಯವಾಗಿ ಅಧಿಕಾರ ನಡೆಸುತ್ತದೆ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಅಲ್ಲದೇ ರಾಷ್ಟ್ರೀಯ ಪಕ್ಷಗಳೆಂದೆನಿಸಿಕೊಂಡಿರುವ ಪಕ್ಷಗಳು ಕೋಮುವಾದಿಗಳಾಗಿವೆ ಹೊರತು ನಿಜವಾಗಿಯೂ ರಾಷ್ಟ್ರ ಹಿತಚಿಂತನೆಯ ಧರ್ಮ ನಿರಪೇಕ್ಷ ಪಕ್ಷಗಳಾಗಿಲ್ಲ. ಅಲ್ಲದೇ ಅವು ಅನೇಕ ಸಲ ಚುನಾವಣೆಯ ಮೇಲೆ ಕಣ್ಣಿಟ್ಟು ಪ್ರಾದೇಶಿಕ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತವೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಚುನಾವಣೆಯು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುತ್ತದೆ ಎಂದು ಹೇಳಲಾಗುತ್ತದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಚುನಾವಣೆ ಮೇಲೆ ಚುನಾವಣೆ ನಡೆದವೇ ಹೊರತು, ನಿಜವಾದ ಪ್ರಜಾಪ್ರಭುತ್ವದ ಬೇರು ದೇಶದ ನೆಲದಲ್ಲಿ ಆಳವಾಗಿ ಇಳಿಯಲ್ಲೇ ಇಲ್ಲ. ಒಂದೊಂದು ಚುನಾವಣೆಯು ಆಡಳಿತವನ್ನು ಕೇಂದ್ರೀಕರಿಸುವುದರಲ್ಲಿ ಮತ್ತು ಪುಂಖಾನುಪುಂಖವಾಗಿ ಸರಕಾರಿ ಮಂತ್ರಿಗಳನ್ನು ಸೃಷ್ಟಿಸಿವೆ ಹೊರತು ಸೂಕ್ತ ನಾಯಕತ್ವವನ್ನಲ್ಲ. ಪ್ರಜಾಪ್ರಭುತ್ವದ ನಿಜವಾದ ಪ್ರಭುವನ್ನಾಗಿ ಮತದಾರರನ್ನೆ ಮಾಡಲೇ ಇಲ್ಲ. ಅಧಿಕಾರದಲ್ಲಿ ಇರುವವರು ದೇಶದ ಯಜಮಾನರಾದರೆ, ಮತದಾನ ಮಾಡಿ ಆಯ್ಕೆ ಮಾಡಿದವನು ಪ್ರತಿನಿಧಿಗಳ ಆಳಾದ. ರಾಜ್ಯವನ್ನು ಆಳಬೇಕಾದ ಕೈ ತನ್ನ ಭವಿಷ್ಯದ ಮೇಲೆಯೇ ಕಲ್ಲು ಹಾಕುವ ಕೆಲಸವನ್ನು ಮಾಡುವಂತಾಯಿತು. ಮತದಾರ ತನ್ನ ನೆಲೆಯಲ್ಲಿಯೇ ಪರತಂತ್ರನಾದ. ಜನರಿಂದ ಜನರಿಗಾಗಿ ಪ್ರಜಾಪ್ರಭುತ್ವವೆಂದು ಹೇಳುತ್ತಾರಾದರೂ ವಾಸ್ತವವಾಗಿ ಅದು ರಾಜಕಾರಣಿಗಳಿಂದ ರಾಜಕಾರಣಿಗೋಸ್ಕರವೆಂದಾಗಲೀ ಇಲ್ಲವೇ ಅಧಿಕಾರಿಗಳಿಂದ ಅಧಿಕಾರಿಗಳಗೋಸ್ಕರವೆಂದಾಗಲೀ ಆಗುತ್ತದೆ. ಪ್ರಜಾಪ್ರಭುತ್ವದ ಈ ದೇಶದಲ್ಲಿ ಪ್ರಜೆ ಸೊನ್ನೆಯಾಗಿದ್ದಾನೆ. ಇಂಥ ಪರಿಸ್ಥಿತಿಯಲ್ಲಿ ಬಂದಿರುವ ಚುನಾವಣೆಯಲ್ಲಿ ಯಾವ ವ್ಯಕ್ತಿಗೆ ಅಥವಾ ಯಾವ ಪಕ್ಷಕ್ಕೆ ಮತ ನೀಡಬೇಕೆಂಬುದು ಒಂದು ಯಕ್ಷ ಪ್ರಶ್ನೆಯಾದರೆ ಅದರಲ್ಲೇನು ಆಶ್ಚರ್ಯ? ಆದ್ದರಿಂದಲೇ ಜನತೆಗಾಗಿ ಚುನಾವಣೆಯೋ ಚುನಾವಣೆಗಾಗಿ ಜನತೆಯೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬೀಜ–ವೃಕ್ಷ ನ್ಯಾಯದಂತೆ ಬಿಡಿಸಲಾರದ ಸಮಸ್ಯೆಯಾಗುತ್ತದೆ. ಮತದಾನ ಮಾಡುವುದೆಂದರೆ ಗರಗಸವನ್ನು

ಹಿಂದಕ್ಕೂ-ಮುಂದಕ್ಕೂ ಓಡಾಡಿಸಿದಂತೆ. ಗರಗಸ ಮುಂದಕ್ಕೆ ಹೋಗುವಾಗಲೂ ವಸ್ತುವನ್ನು ಕುಯ್ಯುತ್ತದೆ ಹಿಂದಕ್ಕೆ ಬರುವಾಗಲೂ ಕುಯ್ಯುತ್ತದೆ. ಅದೇ ರೀತಿ ನಮ್ಮ ದೇಶದ ರಾಜಕೀಯ ಪಕ್ಷಗಳು ಮತ್ತು ಅವು ನಿಲ್ಲಿಸಿದ ಉಮೇದುವಾರರನ್ನು ನೋಡಿದರೆ ಮತ ಚಲಾವಣೆ ಗರಗಸದ ಮಾತಾಗುತ್ತದೆ. ಇಂಥ ನಕಾರತ್ಮಕ ಚುನಾವಣೆ ಬಗೆಗಿನ ಧೋರಣೆಯನ್ನು ತಪ್ಪಿಸಲೆಂದೇ ಮತ ಪತ್ರದಲ್ಲಿ "ಯಾವ ಅಭ್ಯರ್ಥಿಯು ಒಪ್ಪಿಗೆಯಿಲ್ಲವಾದ್ದರಿಂದ ಮತ ಚಲಾಯಿಸುವುದಿಲ್ಲ" ಎಂಬ ಅಭಿಪ್ರಾಯ ತಿಳಿಸಲು ಅವಕಾಶ ಮಾಡಿಕೊಡಬೇಕೆಂಬ ಕೂಗು ಕೇಳಿಬರುತ್ತದೆ. ಇದಕ್ಕೂ ಮುಂದೆ ಹೋಗಿ ಜೆ.ಪಿ ಯವರು ಅಯೋಗ್ಯ ಚುನಾಯಿತ ಜನತಾ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರ ಮತದಾರರಿಗೆ ಕೂಡಬೇಕೆಂದು ಹೇಳಿದ್ದರು. ಆ ಬೇಡಿಕೆ ಇಂದಿನ ಸನ್ನಿವೇಶದಲ್ಲೂ ವಾಸ್ತವಿಕವಾಗಿದೆ. ಓರ್ವ ರಾಜಕೀಯ ಚಿಂತಕ ಹೇಳಿರುವಂತೆ ೨೦ನೇ ಶತಮಾನದ ಮಧ್ಯಕಾಲದಿಂದ ಪ್ರಜಾಸತ್ತಾತ್ಮಕ ಸರ್ಕಾರಗಳು ಅಂತಿಮ ದುರಿತವನ್ನು ತಲುಪಿವೆ. ಆ ದುರಿತ ಪ್ರಜಾಪ್ರಭುತ್ವದ ಅಳಿವು ಅಥವಾ ಉಳಿವನ್ನು ನಿರ್ಧರಿಸುತ್ತದೆ. ಆದ್ದರಿಂದ ಭಾರತದ ಪ್ರಜಾಪ್ರಭುತ್ವದ ಮೇಲೆ ವಿಶೇಷ ಹೊಣೆಗಾರಿಕೆಯಿದೆ. ಆದರೆ ಜನತೆ ಮತ್ತು ರಾಜಕೀಯ ಪಕ್ಷಗಳು ಈ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅಸಮರ್ಥವಾಗಿವೆ. ದುರಂತವೆಂದರೆ ಆ ಅಗತ್ಯವಾದ ಸಾಮರ್ಥ್ಯವನ್ನು ಬೆಳಸಿಕೊಳ್ಳಲು ಜನತೆ ಮತ್ತು ಪಕ್ಷಗಳು ಪ್ರಯತ್ನಿಸುತ್ತಿಲ್ಲ. ಚುನಾವಣಾ ಕಾಲದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಜನತೆಯ ಮುಂದೆ ಪ್ರನಾಳಿಕೆಗಳನ್ನು ಮಂಡಿಸುತ್ತವೆ. ಆ ಪ್ರನಾಳಿಕೆಗಳು ಮತಯಾಚನೆಯ ತಂತ್ರಗಾರಿಕೆ ಆಗಿರುತ್ತವೆ ಹೊರತು ನಿಜವಾದ ರಾಷ್ಟ್ರ ನಿರ್ಮಾಣದ ನೀತಿ ನಿರ್ಧಾರಕ ವಾಗಿರುವುದಿಲ್ಲ. ಎಲ್ಲ ರಾಜಕೀಯ ಪಕ್ಷಗಳ ಪ್ರನಾಳಿಕೆಗಳನ್ನು ರಾಷ್ಟ್ರ ನಿರ್ಮಾಣದ ಹಾಗೂ ಸಮಾಜ ನಿರ್ಮಾಣದ ವೈಜ್ಞಾನಿಕ ಓರೆಗಲ್ಲಿನ ಮೇಲೆ ಪರೀಕ್ಷಿಸಬೇಕಾಗಿದೆ. ವಿದೇಶಾಂಗ ನೀತಿಯಿಂದ ಹಿಡಿದು ಗಗನ ನೌಕೆ ಹಾರಿಬಿಡುವವರೆಗೆ ಮತ್ತು ರಕ್ಷಣಾ ವ್ಯವಸ್ಥೆಗೆ ಹಣ ಖರ್ಚು ಮಾಡುವವರೆಗಿನ ವಿಷಯಗಳ ಬಗ್ಗೆ ಪ್ರನಾಳಿಕೆಯಲ್ಲಿಯ ನೀತಿಯನ್ನೂ ಪರಿಕ್ಷಿಸಿ ನೋಡಬೇಕಿದೆ. ಅಂಥ ಕೆಲಸವನ್ನು ಯಾವುದಾದರೂ ಯೋಗ್ಯವಾದ ಪಕ್ಷಾತೀತ ರಾಷ್ಟ್ರೀಯ ಸಂಸ್ಥೆಯೊಂದು ಮಾಡಿ ಜನತೆಯ ಮುಂದೆ ಇಡುವ ಕೆಲಸ ಆಗಬೇಕಿದೆ. ಇದುವರೆಗೆ ಅಂಥ ಪ್ರಯತ್ನ ನಡೆದಂತೆ ತೋರುತ್ತಿಲ್ಲ.

ಮಹಾತ್ಮಾ ಗಾಂಧೀಯವರು ಸ್ವಾತಂತ್ರ್ಯ ಆಂದೋಲನ ಹೊಂದಿದ್ದು ಕೇವಲ ಬ್ರಿಟಿಷ್ ಸರ್ಕಾರ ಓಡಿಸುವುದಕ್ಕೆ ಮೀಸಲಾಗಿರಲಿಲ್ಲ. ಬ್ರಿಟಿಷ್ ಸರ್ಕಾರವನ್ನು ಓಡಿಸುವುದರ ಜೊತೆಗೆ ಪಾಶ್ಚಿಮಾತ್ಯ ಮಾದರಿಯ ಪ್ರಜಾಪ್ರಭುತ್ವವನ್ನು, ಪಾಶ್ಚಿಮಾತ್ಯ ಸಂಸ್ಕೃತಿಯನ್ನು, ಪಾಶ್ಚಿಮಾತ್ಯ ಶೈಕ್ಷಣಿಕ ಪದ್ಧತಿಯನ್ನು ಹೊಡೆದು ಓಡಿಸುವ ಉದ್ದೇಶ ಇಟ್ಟುಕೊಂಡಿದ್ದರು, ಪ್ರಜಾಪ್ರಭುತ್ವವೆಂಬ ವ್ಯವಸ್ಥೆ ಪೌರ್ವಾತ್ಯ ಮೂಲದಲ್ಲ. ಪಾಶ್ಚಿಮಾತ್ಯ ಮೂಲದ್ದು. ಆ ವ್ಯವಸ್ಥೆಯನ್ನು ನಮ್ಮ ದೇಶಕ್ಕೆ ಆಮದು

ಮಾಡಿಕೊಳ್ಳಲಾಗಿದೆ. ಇಂದಿನ ಹೊಸ ಆರ್ಥಿಕ ನೀತಿಯ ಕಾರಣದಿಂದಾಗಿ ಭಾರತಕ್ಕೆ ಬರುವ ವಿದೇಶಿ ಕಂಪನಿಗಳ ವ್ಯವಹಾರದ ಆಗು ಹೋಗುಗಳನ್ನು ಪರೀಕ್ಷಿಸಿ ಅವುಗಳ ಭಾರತದಲ್ಲಿಯ ಇರುವಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಪಶ್ಚಿಮದಿಂದ ಪಡೆಯಲಾದ ಪ್ರಜಾಪ್ರಭುತ್ವದ ಬಗ್ಗೆ ಏಕೆ ವಿಮರ್ಶೆ ನಡೆಯುತ್ತಿಲ್ಲ? ಭಾರತದ ಹಿತಕ್ಕೆ ವಿರುದ್ಧವಾದ ವಿದೇಶಿ ಕಂಪನಿಗಳನ್ನು ಓಡಿಸಬೇಕೆಂದು ಹೇಳುವ ನಾವು ಅನೇಕ ದೋಷಗಳಿಂದ ಕೂಡಿದ ಪಾಶ್ಚಿಮಾತ್ಯ ಮಾದರಿಯ ಪ್ರಜಾಪ್ರಭುತ್ವವನ್ನು ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಬೇಕೆಂಬ ಪ್ರಯತ್ನವನ್ನು ಏಕೆ ಮಾಡುತ್ತಿಲ್ಲ. ಇಚ್ಚೆಯನ್ನು ಏಕೆ ವ್ಯಕ್ತಪಡಿಸುತ್ತಿಲ್ಲ. ಗಾಂಧೀಜಿ ಬಯಸಿದ್ದು ಇಂಗ್ಲೆಂಡ್ ಮಾದರಿಯ ಸಂಸದೀಯ ಪ್ರಜಾರಾಜ್ಯವನ್ನಲ್ಲ. ಪ್ರತಿಯೊಬ್ಬ ಭಾರತೀಯನ ಸ್ವರಾಜ್ಯ ಮತ್ತು ಗ್ರಾಮಗಳಿಂದ ಕೊಡಿದ ಗ್ರಾಮರಾಜ್ಯ. ಆದರೆ ದುರ್ದೈವ ವಶಾತ್ ಭಾರತ ಅನುಸರಿಸಿದ್ದು ಪಾಶ್ಚಿಮಾತ್ಯ ಮಾದರಿಯನ್ನೇ ಹೊರತು, ಪೌರ್ವಾತ್ಯ ಮಾದರಿಯನ್ನಲ್ಲ. ಆದ್ದರಿಂದ ಇಂದು ದೇಶವನ್ನು ಆಳುತ್ತಿರುವ ಎಲ್ಲ ರಾಜಕೀಯ ಪಕ್ಷಗಳು ಪಶ್ಚಿಮ ದೇಶದ ಆಡಳಿತ ಪದ್ಧತಿ, ಸಂಸ್ಕೃತಿ, ಶಿಕ್ಷಣ ಇತ್ಯಾದಿ ವಿಷಯಗಳನ್ನೆ ಅನುಸರಿಸುತ್ತಿವೆ. ಪಶ್ಚಿಮ ದೇಶಗಳು ಯಾವ ಪ್ರಕಾರದ ಎಲ್ಲ ಬಗೆಯ ವಿನಾಶದ ಅಭಿವೃದ್ಧಿ ನೀತಿಯನ್ನು ಅನುಸರಿಸುತ್ತಿವೆಯೋ ಅಂಥದೇ ಶನಿಸಂತಾನದ ಅಭಿವೃದ್ಧಿ ನೀತಿಯನ್ನು ನಮ್ಮ ಮುಖಂಡರೂ ಅನುಸರಿಸುತ್ತಾರೆ. ಪಾಶ್ಚಿಮಾತ್ಯತನದ ಡಾ॥ ಮನಮೋಹನ್ ಸಿಂಗ್, ಧೂರ್ತತನದ ಅರ್ಥ ಮಂತ್ರಿ ಪಿ.ಚಿದಂಬರಂ, ಸ್ವರಾಜ್ಯ ಭಾವನೆಯಿಲ್ಲದ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾರಂಥ ರಾಜಕಾರಣಿಗಳ ಕೈಯಲ್ಲಿ ಸಿಕ್ಕ ಭಾರತ ದೇಶ ನರಳುತ್ತಿದೆ.

ಇಂಥವರ ನೇತೃತ್ವದಲ್ಲಿ ರಾಜ್ಯ ಮತ್ತು ರಾಷ್ಟ್ರದಲ್ಲಿ ನಡೆಯುವ ಚುನಾವಣೆಯಲ್ಲಿ ಮತದಾರ ಒಂದು ಸರಕು ಮಾದರಿಯಾಗಿದ್ದಾನೆಯೇ ಹೊರತು ಸ್ವಂತ ವಿಚಾರವಿರುವ ಸ್ವಾಭಿಮಾನದ ಸ್ವರಾಜ್ಯ ಬಯಸುವ ಮತದಾರನಾಗಿಲ್ಲ. ಆದ್ದರಿಂದ ಈಗ ಬಂದಿರುವ ಚುನಾವಣೆ, ಜನತೆಗಾಗಿಯೋ ಅಥವಾ ಜನತೆಗಾಗಿ ಚುನಾವಣೆಯೋ ಎಂಬ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹುಡುಕಬೇಕಿದೆ. ಪ್ರಜಾಪ್ರಭುತ್ವ ನಿರಂತರ ಅಭಿವೃದ್ಧಿ ಶೀಲ ಪ್ರಕ್ರಿಯೆ ಉಳ್ಳದ್ದು ಪ್ರಜಾಪ್ರಭುತ್ವದ ಮೂಲ ದ್ರವ್ಯವಾದ ಮತದಾರ ಎಲ್ಲ ರೀತಿಯಲ್ಲಿ ಬೆಳೆಯಬೇಕಾಗುದುದು ಅಗತ್ಯ. ಏಕೆಂದರೆ ದೇಶದ ಎಲ್ಲ ಜನರಿಂದ ಅತ್ಯುತ್ತಮವಾದದ್ದನ್ನು ಸಮಾಜ ಬಯಸುತ್ತದೆ. ಪ್ರಜಾಪ್ರಭುತ್ವದ ತಳಹದಿ ಅದು. ಮಾನವನ ಗುಣಸ್ವಭಾವದ ಸಾಮರ್ಥ್ಯದಲ್ಲಿ ನಂಬಿಕೆ ಇಟ್ಟಿರುವುದೆ ಆಗಿದೆ. ಮಾನವನ ಬುದ್ಧಿವಂತಿಕೆಯಲ್ಲಿ ಮತ್ತು ಸಮಗ್ರ ಸಮೂಹದ ಒಟ್ಟು ಗೂಡಿದ ಸಹಕಾರತ್ವದ ಅನುಭವ. ಪ್ರಜಾಪ್ರಭುತ್ವದ ಅತ್ಯಂತ ಶ್ರೇಷ್ಠ ಗುಣವೇನೆಂದರೆ ಮನುಷ್ಯನ ಮನಸ್ಸನ್ನು ಸ್ವತಂತ್ರಗೊಳಿಸುವುದು. ತನ್ಮೂಲಕ ಪ್ರಯೋಗಶೀಲರಾಗುವುದಕ್ಕೆ ಪ್ರೋತ್ಸಾಹಿಸವುದು. ಪ್ರಯೋಗಶೀಲತ್ವವಿಲ್ಲದೆ ಮನುಷ್ಯರು ಬದಲಾಗುವ ಜಗತ್ತಿನೊಂದಿಗೆ ಹೊಂದಿಕೊಳ್ಳಲಾರರು. ಆದ್ದರಿಂದ

ಪ್ರಜಾಪ್ರಭುತ್ವವೆನ್ನುವುದು ರಾಜಕೀಯ ಪ್ರಮೇಯಕ್ಕಿಂತ ಸರಕಾರದ ಆಡಳಿತಕ್ಕಿಂತ, ಒಂದು ಸಮಾಜಿಕ ವ್ಯವಸ್ಥೆಗಿಂತ ಹಿರಿದಾದುದು. ಜನರ ಸರ್ವತಂತ್ರ ಸ್ವತಂತ್ರ ಬುದ್ಧಿಮತ್ತೆ ಮತ್ತು ಕ್ರೀಯಾಶೀಲತೆಯನ್ನು ಐಕ್ಯವಾಗಿಸಿ ಹಾಗೂ ಸಮನ್ವಯಗೊಳಿಸುವುದಾಗಿದೆ. ಈ ವಿಷಯದಲ್ಲಿ ದಬಾವಣೆ ಅತ್ಯಂತ ಕಡಿಮೆಯಿರುತ್ತದೆ. ಅಂಥ ಒಂದು ಜೀವನ ಇಡೀ ಮಾನವ ಕುಲಕ್ಕೆ ಒಳ್ಳೆಯದಾಗಿರುತ್ತದೆ. ಇಂತಹ ವಿಚಾರಗಳು ಸಾಕಾರಗೊಳ್ಳಬೇಕಾದರೆ ಈಗ ಬಂದಿರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತ್ತು ೨೦೧೪ರಲ್ಲಿ ಬರಲಿರುವ ಮಹಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೆ ಮತ ಚಲಾಯಿಸಬೇಕೆಂಬ ಪ್ರಶ್ನೆ ಬಗೆಹರಿಯದ್ದಾಗಿದೆ. ದೇಶ ಮುಂದುವರಿಯಲು ಸುಭದ್ರರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಬೇಕೆ ಬೇಕು ಆದರೆ ಇಂದಿರುವ ರಾಜಕೀಯ ಪರಿಸ್ಥಿತಿಯಲ್ಲಿ ಇದು ಕಷ್ಟ ಸಾಧ್ಯವೆನಿಸುತ್ತದೆ. ಅನೇಕ ಪ್ರಜಾಪ್ರಭುತ್ವಗಳ ಅನುಭವದಿಂದ ರೂಪಿತವಾದ ಅವನತಿಯ ಸಿದ್ಧಾಂತದ (Law of Degradation) ಪ್ರಕಾರ ಪ್ರಜಾಪ್ರಭುತ್ವ ಪದ್ಧತಿ ಅವನತಿಯತ್ತ ಸಾಗುತ್ತಲೇ ಹೋಗುತ್ತದೇನೊ ಎಂಬ ಚಿಂತೆಯಿದೆ. ಒಬ್ಬ ರಾಜಕೀಯ ಬುದ್ಧಿಜೀವಿ ಹೇಳಿರುವಂತೆ ಇಂದು ನಮಗೆ ಬೇಕಿರುವುದು ಎಲೆಕ್ಷನ್ ಅಲ್ಲ ರೆವಲೂಷನ್. ಆ ಕ್ರಾಂತಿ ಇಡೀ ಸಮಾಜ ವ್ಯವಸ್ಥೆಯನ್ನು, ಆಡಳಿತ ವ್ಯವಸ್ಥೆಯನ್ನು, ಆರ್ಥಿಕ ವ್ಯವಸ್ಥೆಯನ್ನು, ಶಿಕ್ಷಣ ವ್ಯವಸ್ಥೆಯನ್ನು, ಕೈಗಾರಿಕಾ ವ್ಯವಸ್ಥೆಯನ್ನು ಬದಲಾಯಿಸವುದೇ ಆಗಿದೆ. ಇಂಥ ಬದಲಾವಣೆ ತರಲು ಇಂದಿನ ಯಾವ ರಾಜಕೀಯ ಪಕ್ಷಗಳೂ ಸಮರ್ಥವಾಗಿಲ್ಲ. ಅವು ಸಮಾಜ ಕಟ್ಟುವ ಬದಲಾಗಿ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿವೆ. ಆದ್ದರಿಂದ ಈ ಸಲದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬರದಂಥ ಸ್ಥಿತಿ ಉಂಟಾಗಿ ಮುಂದಿನ ರಾಜ್ಯ ವ್ಯವಸ್ಥೆ ಹೇಗಿರಬೇಕೆಂಬುದರ ಬಗ್ಗೆ ಬಲವಾದ ಚಿಂತನಾ ಕ್ರಾಂತಿ ಇಡೀ ದೇಶದಲ್ಲಿ ನಡೆಯುವಂತಾಗಬೇಕೆಂದೂ, ತತ್‌ಪರಿಣಾಮವಾಗಿ ಹಾಲಾಹಲದ ನಂತರ ಅಮೃತ ದೊರೆತಂತೆ, ಸರ್ವರ ಏಳಿಗೆ ಯಾಗುವಂತೆ ಒಂದು ಸುಂದರವಾದ ಸರ್ವೋದಯ ಸಮಾಜದ ರಚನೆಗೆ ದಾರಿಯಾಗಲೆಂದೂ ಹಾರೈಸಬೇಕಿದೆ.

* * *

ನಮಗೆ ಪಾರ್ಲಿಮೆಂಟ್ ಏಕೆ ಬೇಕು?

– ಡಾ // ಎಂ. ಮನೀಷಾ

ಇತ್ತೀಚಿಗೆ ಸಂಸದಿಯ ಅನುಪಯುಕ್ತತೆಯ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ ಅವುಗಳಲ್ಲಿ ಅನೇಕ ಪ್ರಶ್ನೆಗಳು ಹುಟ್ಟಿಕೊಂಡಿವೆ ಆದರೆ ಅವುಗಳಿಗೆ ಉತ್ತರ ಸಿಕ್ಕಿಲ್ಲ. ಸಂಸದಿಯ ಕಾರ್ಯಕಲಾಪಗಳಲ್ಲಿ ಎಮ್.ಪಿ ಗಳು ಏಕೆ ವ್ಯವಸ್ಥಿತವಾಗಿ ಬಾಗವಹಿಸುತ್ತಿಲ್ಲ? ಪಾರ್ಲಿಮೆಂಟಿನ ಕಾರ್ಯಕಲಾಪಗಳನ್ನು ಏಕೆ ಪದೆ ಪದೆ ಅಡ್ಡಿಪಡಿಸುತ್ತಾರೆ. ಪಾರ್ಲಿಮೆಂಟಿನ ಅನುಪಯುಕ್ತತೆಯ ಕಾರಣದಿಂದಾಗಿ ಚರ್ಚೆಗೊಸ್ಕರ ಬೇರೆ ಯಾವುದಾದರು ವೇದಿಕೆ ನಿರ್ಮಾಣವಾಗಿದೆಯೆ ಒಂದು ವೇಳೆ ಹೌದೆಂದಾದರೆ ಅವು ಯಾವವು ಮತ್ತು ಅವು ನ್ಯಾಯಬದ್ಧ ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನು ರೂಪಿಸಲು ಸಮರ್ಥವಾಗಿವೆಯೆ.

ಸಾಮಾನ್ಯವಾಗಿ ಎಮ್.ಪಿ.ಗಳು ಸಂಸದೀಯ ಕೆಲಸದಲ್ಲಿ ಎಳ್ಳಷ್ಟೂ ಅಭಿರುಚಿ ಇರಿಸಿಕೊಂಡಿಲ್ಲ ಈ ಬಗ್ಗೆ ಎಮ್.ಪಿ.ಗಳ ಧೋರಣೆ ಕುರಿತು ಅವರನ್ನು ದೂಷಿಸುವುದು ಸರ್ವೇಸಾಮಾನ್ಯವಾಗಿದೆ. ಇಂತಹ ಅಭಿಪ್ರಾಯ ಪಾರ್ಲಿಮೆಂಟು ಒಂದು ಅದಕ್ಷ ಸಂಸ್ಥೆ ಎಂಬ ಭಾವನೆ ಮೂಡಲು ಕಾರಣವಾಗಿರಬಹುದು. ಅಂತಹ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪಿಲ್ಲವಾಗಿರಬಹುದು. ಆದರೆ ಸಂಸದಿಯ ಕಾರ್ಯ ಹೆಚ್ಚು ಫಲಶೃತವಾಗಿಲ್ಲದೆ ಇರುವುದಕ್ಕೆ ಕಾರಣಗಳತ್ತ ಗಮನ ಹರಿಸಬೇಕಾದದ್ದು ಅಗತ್ಯ. ಎಲ್ಲಾ ಮಾನವರಂತೆ ಎಮ್.ಪಿಗಳು ಸಹ ತಮಗೆ ಯಾವುದು ಲಾಭದಾಯಕವೊ ಅದನ್ನೆ ಕೈಗೆತ್ತಿಕೊಳ್ಳುತ್ತಾರೆ.

ಕಳೆದ ೬೫ವರ್ಷಗಳಲ್ಲಿ ಪಾರ್ಲಿಮೆಂಟು ನಡೆದು ಬಂದ ರೀತಿಯಿಂದಾಗಿ ಕೆಲವು ವಿಶಿಷ್ಟ ಗುಣಲಕ್ಷಣಗಳು ಹೊರ ಹೊಮ್ಮಿವೆ. ಅವುಗಳಲ್ಲಿ ಒಂದು ಗುಣಲಕ್ಷಣವೇನೆಂದರೆ ಚುನಾವಣೆಗಳಿಗೆ ಕೊಟ್ಟ ವಿಶೇಷ ಮಹತ್ವ. ಚುನಾವಣೆ ಎಂದರೆ ಒಂದು ಸಂಭ್ರಮ. ಆದ್ದರಿಂದ ಪಾರ್ಲಿಮೆಂಟನ್ನು ಸೇರಿ ಇತರ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳು ಅಲ್ಲಿಗೆ ಆಯ್ಕೆಯಾಗಿ ಬರುವ ಪ್ರಾತಿನಿಧ್ಯತೆಯ ಸುತ್ತ ರೂಪಗೊಳ್ಳಲ್ಪಟ್ಟಿವೆ. ಸ್ಪಷ್ಟವಾಗಿ ಹೇಳುವುದಾದರೆ ಅವು ಚುನಾವಣಾ ಪ್ರಕ್ರಿಯೆಯ ತುಮುಲಕ್ಕೆ ಒಳಗಾಗಿವೆ. ಚುನಾವಣೆಗಳ ಅಂತಿಮಗುರಿ ಒಂದು ಸರ್ವೇಸಾಮಾನ್ಯ ಉದ್ದೇಶವನ್ನು ಈಡೇರಿಸುವುದಾಗಿದೆ. ಅದರ ಅರ್ಥ ಸರ್ವೇಸಾಮಾನ್ಯ ಗುರಿ ಚುನಾವಣೆಯ ಅಧೀನವಾಗಿದೆ. ಇದರ ಅರ್ಥ ಚುನಾವಣೆ ಎಂಬ ಸಾಧನ ಗುರಿಗಿಂತಲೂ ಹೆಚ್ಚು ಪ್ರಮುಖವಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳು, ಎಂತಹವೆ ಬಣ್ಣದ್ದಾಗಿರಲಿ ಅವು ತಾವು ನಿಲ್ಲಿಸುವ ಉಮೇದುವಾರರ ಜನಪ್ರಿಯತೆಯ ಬಗ್ಗೆ ಹೆಚ್ಚು ಒತ್ತು ಕೊಡುತ್ತವೆ. ಚುನಾವಣಾ ಫಲಿತಾಂಶದ ಮೇಲೆಯೆ ಅವುಗಳ ದೃಷ್ಟಿ ಇರುವುದರಿಂದ ಅವರ ಯೋಗ್ಯತೆಯನ್ನು ಗಮನಿಸುವುದಿಲ್ಲ. ಪಕ್ಷದ ಯೋಗ್ಯ ಕಾರ್ಯಕರ್ತರಿಗೆ

ಟಿಕೇಟ್‌ಗಳನ್ನು ಕೊಡುವುದಿಲ್ಲ. ಇದಕ್ಕೆ ಉದಾ:– ದೇವೇಶ್ ಕಪೂರ್ ಮತ್ತು ಪ್ರತಾಪ ಬಾನು ಮೆಹತಾ. ಈ ಕೆಲ ಸಂದರ್ಭಗಳನ್ನು ಬಿಟ್ಟರೆ ಮಹತ್ವದ ಮಸೂದೆಗಳ ಮೇಲೆ ಮತ ಚಲಾಯಿಸುವಾಗ ಎಂ.ಪಿಗಳ ಗೈರು ಹಾಜರಿ ಮುಜಗರದ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ. ಪಕ್ಷದ ಸಚೇತರಕರಿಗೆ ಎಮ್.ಪಿಗಳ ಹಾಜರಾತಿಯ ಬಗ್ಗೆ ಯಾವ ಮಾರ್ಗದರ್ಶನವು ಇರುವುದಿಲ್ಲ. ಸಮರ್ಥವಾಗಿ ಸಂಸದೀಯ ಕರ್ತವ್ಯಗಳನ್ನು ನಿರ್ವಹಿಸದೆ ಇರುವುದಕ್ಕಾಗಿ ಯಾವ ದಂಡವೂ ಇರುವುದಿಲ್ಲ. ಹೀಗೆ ಪಾರ್ಲಿಮೆಂಟ್ ಕೆಲಸವನ್ನು ಸಮರ್ಥವಾಗಿ ಮಾಡುವುದಕ್ಕಾಗಲಿ ಮಾಡದೆ ಇರುವುದಕ್ಕಾಗಲಿ ಯಾವುದೆ ರೀತಿಯ ಪ್ರೋತ್ಸಾಹ ಇಲ್ಲವೆ ದಂಡದ ಕ್ರಮ ಇರುವುದಿಲ್ಲ. ಸಂಸದೀಯ ಕೆಲಸಕ್ಕೆ ರಾಜಕೀಯ ಪಕ್ಷಗಳು ಮಹತ್ವವನ್ನು ಕೊಡುವುದಿಲ್ಲ ಎಂಬುದು ರಾಜಕೀಯ ಪಕ್ಷಗಳಲ್ಲಿ ಎಮ್.ಪಿಗಳಿಗೆ ಕೆಲಸದ ಹಂಚಿಕೆ ವಿಷಯವಾಗಿ ಯಾವ ಕ್ರಮವು ಇರುವುದಿಲ್ಲ ಎಂದು ಗೊತ್ತಾಗುತ್ತದೆ.

ಉದಾ:– ಬೇರೆ ಬೇರೆ ವಿಷಯಗಳ ಬಗ್ಗೆ ಪ್ರಶ್ನೆಕೇಳುವುದು ಅಥವಾ ಸೊನ್ನೆಯ ಅವಧಿಯಲ್ಲಿ ಹೊಸ ವಿಷಯಗಳನ್ನು ಎತ್ತುವುದು ಇತ್ಯಾದಿ. ಪಾರ್ಲಿಮೆಂಟಿನ ಚರ್ಚೆಯಲ್ಲಿ ಭಾಗವಹಿಸುವ ಅಥವಾ ಬಿಡುವ ಸ್ವಾತಂತ್ರ್ಯವು ಎಮ್.ಪಿಗಳಿಗೆ ಇದೆ. ಯಾರು ಚರ್ಚೆಯಲ್ಲಿ ಭಾಗವಹಿಸಲು ಇಷ್ಟಪಡುತ್ತಾರೊ ಅಂತಹ ಎಮ್.ಪಿಗಳಿಗೆ ಅಗತ್ಯವಾದ ನೆರವುಕೊಡುವ ವ್ಯವಸ್ಥೆ ರಾಜಕೀಯ ಪಕ್ಷಗಳಲ್ಲಿ ಇರುವುದಿಲ್ಲ ಈ ವಿಷಯದಲ್ಲಿ ಎಮ್.ಪಿಗಳು ಸ್ವತಂತ್ರ್ಯವಾಗಿರುತ್ತಾರೆ.

ಲೋಕಸಭಾ ಕಾರ್ಯಾಲಯ ಹೊಸದಾಗಿ ಆಯ್ಕೆಯಾಗಿ ಬಂದ ತನ್ನ ಸದಸ್ಯರಿಗೆ ಸಂಸದೀಯ ನಿಯಮಗಳನ್ನು ತಿಳಿಹೇಳುವ ಬಗ್ಗೆ ಕಾರ್ಯಗಾರವನ್ನು ಏರ್ಪಡಿಸುತ್ತದೆಯಾದರೂ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳವುದಿಲ್ಲ.

೨ ಪ್ರಕಾರದ ಲೋಕಸಭಾ ಸದಸ್ಯರು ಗರಿಷ್ಠ ಪ್ರಮಾಣದಲ್ಲಿ ಸಂಸದೀಯ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಮೊದಲನೆಯ ಪ್ರಕಾರ ಯಾರು ರಾಷ್ಟ್ರೀಯ ನಾಯಕರಾಗಿರೊ ಸದಸ್ಯರು ಚರ್ಚೆಯ ಕಾಲದಲ್ಲಿ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಅನುಭವಿ ರಾಷ್ಟ್ರ ನಾಯಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಆ ಅಭಿಪ್ರಾಯಗಳು ಮಾಧ್ಯಮದಲ್ಲಿ ಪ್ರಚಾರ ಗಿಟ್ಟಿಸುತ್ತವೆ. ಅಲ್ಲದೆ ಅವರ ಅಭಿಪ್ರಾಯಗಳು ಸಾರ್ವಜನಿಕ ಚರ್ಚೆಗೂ ಗ್ರಾಸವಾಗುತ್ತವೆ. ಹಾಗಾಗಿ ಮಧ್ಯಮ ಹಂತದ ನಾಯಕರಿಗೆ ತಮ್ಮ ಗುರುತನ್ನು ಮೂಡಿಸಲಿಕ್ಕೆ ಸಾಧ್ಯವಾಗದಷ್ಟು ಕಡಿಮೆ ಕಾಲಾವಕಾಶ ಸಿಗುತ್ತದೆ. ಪಾರ್ಲಿಮೆಂಟಿನ ಅಧಿವೇಶನಗಳ ಸಂಖ್ಯೆಯೂ ಕಡಿಮೆಯಾಗುತ್ತದೆ ಎಮ್.ಪಿ.ಗಳು ತಮ್ಮ ಅಸ್ತಿತ್ವವನ್ನು ತೋರಿಸಲು ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಮಾಡುತ್ತಾರೆ. ಅಥವಾ ಘೋಷಣೆಗಳನ್ನು ಕೂಗುತ್ತಾರೆ. ಹೀಗೆ ಮಾಡುವುದರಿಂದ ಚುನಾವಣೆಯಲ್ಲಿ ಪುನಃ ಆರಿಸಿ ಬರುವುದಕ್ಕೆ ಆದೆಷ್ಟು ಕಾರಣವಾಗುತ್ತದೆ ಎಂಬುದು ಪ್ರೇರಕವಾಗಿರುತ್ತದೆ.

ಭಾರತದಂತಹ ಬಹುಮುಖ ಸಾಂಸ್ಕೃತಿಕ ಸಮಾಜದಲ್ಲಿ ಸರಕಾರಕ್ಕೆ ವಿರೋಧ ಎಂಬುದು ಬೇರೆ ಬೇರೆ ಮೂಲಗಳಿಂದ ಬರುತ್ತದೆ. ಆದ್ದರಿಂದ ವೈವಿಧ್ಯಮಯ ವಿರೋಧವನ್ನು ಸಂಘಟನಾತ್ಮಕವಾಗಿ ಲೋಕಸಭೆಯಲ್ಲಿ ಮಂಡಿಸುವ ಹೊಣೆ ಹೊತ್ತ

ವಿರೋಧ ಪಕ್ಷ ಎಂಬ ಸಂಘಟನೆ ಸ್ಥಾಪಿತವಾದಾಗಿನಿಂದಲೂ ಸರಕಾರವನ್ನು ಟೀಕಿಸುವುದೇ ತನ್ನ ರಣನೀತಿಯನ್ನಾಗಿ ಮಾಡಿಕೊಂಡಿದೆ. ಈ ಟೀಕೆಯನ್ನು ಮಾಡುವ ಉದ್ದೇಶ ಸರಕಾರದ ಆಡಳಿತವನ್ನು ವಿಮರ್ಶೆಗೆ ಒಳಪಡಿಸುವುದಾಗಿರದೆ ದೇಶದ ಜನಮಾನಸದಲ್ಲಿ ತಾವು ಹೇಗೆ ಮನೆಮಾಡಿಕೊಳ್ಳಬೇಕೆಂಬುದೇ ಆಗಿದೆ. ಈ ಉದ್ದೇಶಕ್ಕಾಗಿ ಅದು ಅಳವಡಿಸಿಕೊಂಡ ಕಾರ್ಯತಂತ್ರ ಕಾಲ ಕಳೆದಂತೆ ಬದಲಾಗುತ್ತಾ ಬಂದಿದೆ. ೧೯೫೦ ರ ದಶಕದಲ್ಲಿ ನಡೆಯುತ್ತಿದ್ದ ಬಿಸಿ, ಬಿಸಿ ಚರ್ಚೆಯಿಂದ ಘೋಷಣೆ ಕೂಗುವುದುರಿಂದ ಹಿಡಿದು ಸಭಾತ್ಯಾಗ ಮಾಡುವುದು, ಸಭಾಂಗಣದ ಮಧ್ಯದಲ್ಲಿ ಧುಮುಕುವುದು, ಸಂಪೂರ್ಣ ಸಭಾತ್ಯಾಗ ಮಾಡುವುದು ಇತ್ಯಾದಿಗಳಿಂದ ಎಷ್ಟು ಸಾರ್ವಜನಿಕ ಗಮನವನ್ನು ಸೆಳೆಯಲಾಯಿತು ಎಂಬುದು ನಿರ್ಧಾರಿತವಾಗುತ್ತದೆ. ಆಂಡ್ರೆ ಬೆಟ್ಟಲಿ ಎಂಬ ಪ್ರಸಿದ್ಧ ಸಮಾಜ ಶಾಸ್ತ್ರಜ್ಞ ಹೇಳಿರುವಂತೆ "ಸಂಸದೀಯ ಚರ್ಚೆಯಲ್ಲಿ ನಾಗರಿಕತೆ ಎಂಬುದು ಕಣ್ಮರೆಯಾಗಿದೆ. ಅಡತಡೆ ಉಂಟುಮಾಡುವುದು ಹೆಚ್ಚಾಗಿದೆ. ಅನೇಕ ಜನರು ಏಕಕಾಲದಲ್ಲಿ ಮಾತನಾಡುವುದು ಒಂದು ನಿತ್ಯಕರ್ಮವಾಗಿದೆ. ಲೋಕಸಭೆಯ ಪ್ರಾಂಗಣದ ಮಧ್ಯ ಧುಮುಕುವುದು ಸಾಮಾನ್ಯ ದೃಶ್ಯವಾಗಿದೆ. ಶಿಸ್ತು ಕಾಪಾಡುವ ಕೆಲಸ ಸ್ಪೀಕರಿಗೆ ಕಷ್ಟದಾಯಕವಾಗಿದೆ. ಪದೆ ಪದೆ ಸಭೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಸದಸ್ಯರು ವಿವಾದಗಳಿಗಾಗಿ ಬಹಳಷ್ಟು ಸಮಯವನ್ನು ವ್ಯಯಿಸುತ್ತಾರೆ. ಇದೊಂದು ಅಂತ್ಯವಿಲ್ಲದ ಮತ್ತು ಫಲವಿಲ್ಲದ ಕ್ರಿಯೆಯಾಗಿ ಕಾಣುತ್ತದೆ"

ಧೀರ್ಘಾವಧಿಯ ರಚನಾತ್ಮಕ ಪರ್ಯಾಯಗಳನ್ನು ಸೃಷ್ಟಿಸಬೇಕೆಂಬ ವಿಷಯ ವಿರೋಧ ಪಕ್ಷಗಳ ಅಜೆಂಡಾದಿಂದ ಕಣ್ಮರೆಯಾಗಿದೆ ಬಿ.ಜೆ.ಪಿ ಯಂತಹ ಪಕ್ಷಗಳು ಶಿವಸೇನಾ ಅಥವಾ ಬಿ.ಜೆ.ಡಿ ಯಂತಹ ಪ್ರಾದೇಶಿಕ ಪಕ್ಷಗಳು ಕೂಡಾ ಇದೆ ಪ್ರಕಾರದ ನೀತಿಯನ್ನು ಅನುಸರಿಸಿವೆ. ೧೫ನೆಯ ಲೋಕಸಭೆಯಲ್ಲಿ ವಿರೋಧ ಪಕ್ಷಕ್ಕೆ ಸರಕಾರವನ್ನು ಟೀಕಿಸಲು ಬಹಳಷ್ಟು ಅವಕಾಶಗಳು ದೊರೆತ್ತಿದ್ದವು. ಆದರೆ ವಿರೋಧ ಪಕ್ಷಗಳು ಚರ್ಚೆಮಾಡದೆ ಗದ್ದಲ ಎಬ್ಬಿಸುವುದನ್ನೆ ಅಭ್ಯಾಸ ಮಾಡಿದವು. ೨೦೧೦-೧೧ರಲ್ಲಿ ೪೧೭ ಗಂಟೆಗಳು ಗಲಾಟೆಯ ಕಾರಣದಿಂದಾಗಿ ವ್ಯರ್ಥವಾಗಿ ಹೋದವು. ಅದೇ ವರ್ಷ ೧೮% ಮಸೂದೆಗಳು ಕೇವಲ ೫ ನಿಮಿಷಗಳಲ್ಲಿ ಅಂಗೀಕಾರವಾದವು. ೨೦೧೨ರ ಚಳಿಗಾಲದ ಅಧಿವೇಶನದಲ್ಲಿ ಪಾರ್ಲಿಮೆಂಟ್ ನಿಗದಿಯಾದ ಸಮಯದಲ್ಲಿ ಕೇವಲ ಶೇ ೫೬ರಷ್ಟು ಸಮಯವನ್ನು ಉಪಯೋಗಿಸಿಕೊಂಡಿತ್ತು. ನೂರಾರು ಗಂಟೆಗಳನ್ನು ಕಳೆದುಕೊಂಡಿತ್ತು. ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಕಾರ್ಯಕ್ರಮವನ್ನು ಕೇವಲ ೪ದಿನ ಮಾತ್ರ ನಡೆಸಿತ್ತು. ಈ ಸಂದರ್ಭ ರಾಜ್ಯಸಭೆಯ ಅಧ್ಯಕ್ಷರಾದ ಹಮೀದ್ ಅನ್ಸಾರಿ ಸಭೆಯ ಕಾರ್ಯಕಲಾಪಗಳಿಂದ ಅವನ್ನು ತೆಗೆದು ಹಾಕುವಂತೆ ಸೂಚಿಸಿದ ಸಂದರ್ಭದಲ್ಲಿ ಮುಖ್ಯವಾದ ಪ್ರಶ್ನೆಗಳಲ್ಲಿ ೪೯ ಮತ್ತು ರಾಜ್ಯಸಭೆಯಲ್ಲಿ ಇದ್ದ ೩೦೦ ಪ್ರಶ್ನೆಗಳಲ್ಲಿ ೪೩ ಮಾತ್ರ ಮೌಖಿಕವಾಗಿ ಉತ್ತರಿಸಲ್ಪಟ್ಟವು.

ಪಾರ್ಲಿಮೆಂಟನಲ್ಲಿ ನಡೆದ ಚರ್ಚೆಯ ಗುಣಮಟ್ಟವನ್ನು ವಿಮರ್ಶಿಸಿದರೆ ಆ ಭಾಷಣಗಳೆಲ್ಲವೂ ಚುನಾವಣೆಗಳಲ್ಲಿಯ ಯಶಸ್ಸನ್ನು ಗುರಿಯಾಗಿಟ್ಟುಕೊಂಡಿದ್ದವು.

ಚರ್ಚೆ ಎಲ್ಲವೂ ಪಕ್ಷದ ಆಧಾರದ ಮೇಲೆ ನಡೆದವು ಮತ್ತು ಸರಕಾರವನ್ನು ಟೀಕಿಸುವಂತಹವಾಗಿದ್ದವು.

ಇಲ್ಲಿ ಗಮನಿಸಲಾರದೆ ಹೋದ ಸಂಗತಿ ಏನೆಂದರೆ ಇಡೀ ಚರ್ಚೆಯ ಅವಧಿಯಲ್ಲಿ ವಿರೋಧ ಪಕ್ಷದ ಹಿರಿಯ ನಾಯಕರು ಪ್ರಚಾರಭರಿತ ಸಭಾತ್ಯಾಗಗಳನ್ನು ಮಾಡಿದರೆ, ಮಧ್ಯಮ ದರ್ಜೆಯ ನಾಯಕತ್ವದ ಎಂ.ಪಿ.ಗಳು ಸಂವಿಧಾನದತ್ತವಾದ ಅವಕಾಶಗಳನ್ನು ಅಂದರೆ ಸಂಕ್ಷಿಪ್ತ ಅವಧಿಯ ಚರ್ಚೆ, ಶೂನ್ಯವೇಳೆ ಚರ್ಚೆ, ಸಂಸದೀಯ ಮತ್ತು ಅಸಂಸದೀಯ ಕ್ರಮಗಳನ್ನು ಅವರು ಯಾವ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೊ ಆ ಕ್ಷೇತ್ರದಲ್ಲಿ ಚುನಾವಣೆಯನ್ನು ಗೆಲ್ಲುವ ತಂತ್ರಗಾರಿಕೆಯನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ನಂಬುತ್ತಾರೆ. ಒಂದು ಸರ್ವೆಮಾಡಿದರೆ ೧೪ನೇ ಲೋಕಸಭೆ ತನ್ನ ಸಮಯದ ಶೇ.೨೦ ರಷ್ಟು ಸಮಯವನ್ನು ಶಾಸಕೀಯ ವಿಷಯಗಳ ಬಗ್ಗೆ ಚರ್ಚೆಯಲ್ಲಿ ಕಳೆಯಿತು.

ಪಾರ್ಲಿಮೆಂಟಿನಲ್ಲಿಯ ಚರ್ಚೆಯ ಅಪೂರ್ಣತೆ ಮಾಧ್ಯಮದಂತಹ ಸಂಸ್ಥೆಗಳಿಗೆ ಪಾರ್ಲಿಮೆಂಟಿಗೆ ಸಿಗಬೇಕಾದ ಅವಕಾಶ ಅವುಗಳಿಗೆ ದೊರಕುವಂತಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪತ್ರಿಕಾ ಮಾಧ್ಯಮಕ್ಕೆ ಸಂಸದೀಯ ನಡಾವಳಿಕೆ ಸುದ್ದಿಯ ಮೂಲವಾಗಿತ್ತು. ಬಹುತೇಕ ಎಲ್ಲಾ ಸುದ್ದಿಯ ಮೂಲ ಪಾರ್ಲಿಮೆಂಟನಲ್ಲಿ ಎಂ.ಪಿಗಳು ಮಾಡಿದ ಭಾಷಣಗಳ ಸುತ್ತ ಕೇಂದ್ರೀಕೃತವಾಗಿರುತ್ತಿತ್ತು. ಪತ್ರಿಕಾ ಮಾಧ್ಯಮ ಪಾರ್ಲಿಮೆಂಟಿನ ಇನ್ನೊಂದು ಅಂಗವಾಗಿ ಅಂದರೆ ರಾಷ್ಟ್ರೀಯ ಚರ್ಚೆಯ ವೇದಿಕೆಯಾಗಿ ಕೆಲಸಮಾಡುತ್ತಿತ್ತು.

ಇತ್ತೀಚೆಗೆ ಮಾಧ್ಯಮ ಸಂಸದೀಯ ಕಾರ್ಯಕಲಾಪಗಳನ್ನು ವರದಿ ಮಾಡುವುದನ್ನು ಕಡಿಮೆ ಮಾಡಿದೆ. ಬದಲಿಗೆ ಸಂಸತ್ತಿನ ಒಳಗೆ ಮತ್ತು ಹೊರಗೆ ಸರಕಾರ ಬಹಿರಂಗಪಡಿಸಿದ ಸಾರ್ವಜನಿಕ ನೀತಿ ಕುರಿತಾಗಿ ಬರೆಯುತ್ತವೆ. ಸಂಸತ್ತಿಗೆ ಸಂಬಂಧಿಸಿದಂತೆ ಪತ್ರಿಕೆಗಳ ವರದಿ ಅಲ್ಲಿಯ ಕಾರ್ಯಕಲಾಪಗಳಲ್ಲಿ ಅಡ್ಡಿ, ಸಮಯದ ನಷ್ಟ, ಹಾಗೂ ಖಜಾನೆಗಾದ ಖರ್ಚು, ಇತ್ಯಾದಿಗಳ ಬಗ್ಗೆ ಇರುತ್ತದೆ. ಅನೇಕ ಸಲ ವಿವಿಧ ರಾಜಕೀಯ ಪಕ್ಷಗಳ ನಾಯಕರು ದೂರದರ್ಶನದಲ್ಲಿ ಯಾವ ವಿಷಯವನ್ನು ಕುರಿತು ಸಮಗ್ರವಾಗಿ ಪಾರ್ಲಿಮೆಂಟಿನಲ್ಲಿ ಚರ್ಚಿಸಬಹುದಾಗಿತ್ತೊ ಆ ವಿಷಯಗಳನ್ನು ಕುರಿತೇ ಚರ್ಚೆ ಮಾಡುತ್ತಾರೆ. ಖಾಸಗಿ ಕ್ಷೇತ್ರದಲ್ಲಿ ಇರುವ ಮಾಧ್ಯಮಗಳು ಈ ವಿಷಯದಲ್ಲಿ ವಾಣಿಜ್ಯ ದೃಷ್ಟಿಯನ್ನು ಇಟ್ಟುಕೊಂಡಿರುತ್ತವೆ. ದೇಶದ ಜನತೆಯಲ್ಲಿ ಮತ್ತು ವಿದ್ವಜ್ಜನರಲ್ಲಿ ಸಂಸದೀಯ ಚರ್ಚೆಯ ಗುಣಮಟ್ಟ ಕಳೆಪೆಯಾಗಿರುವ ಬಗ್ಗೆ ಚಿಂತೆ ಇದೆ. ಪಾರ್ಲಿಮೆಂಟನ್ನು 'ಮಾತನಾಡುವ ಅಂಗಡಿ' ಟಾಕ್ ಶಾಪ್ ಎಂದು ಜನ ಭಾವಿಸುವುದಾದರೆ ಭಾರತೀಯ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಹಾನಿಕರ.

(ಅನು – ಸುಕೌ : ಸಾಭಾರ – ಜನತಾ)

* * *

ತಲೆಕೆಳಗಾದ ಸರಕಾರದ ರಚನೆಗೆ ನಿಮ್ಮ ಓಟೋ?

– ಜಯಪ್ರಕಾಶ್ ನಾರಾಯಣ್

ಭಾರತ ರಾಜ್ಯಾಂಗ ಸಭೆ ಜನತೆಯ ಹೆಸರಿನಲ್ಲಿ ತೀರ್ಮಾನಿಸಿತು:
ಅ) ಭಾರತವನ್ನು ಸಾರ್ವಭೌಮ ಪ್ರಜಾತಂತ್ರಾತ್ಮಕ ಗಣರಾಜ್ಯವಾಗಿ ಮಾಡಲು;
ಆ) ತನ್ನ ಸಮಸ್ತ ಪ್ರಜೆಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು; ವಿಚಾರ, ಉಚ್ಚಾರ, ಶ್ರದ್ಧಾಭಕ್ತಿ, ಪೂಜಾ ಸ್ವಾತಂತ್ರ್ಯಗಳನ್ನು; ಗೌರವ, ಅವಕಾಶಗಳ ಸಮಾನತೆಯನ್ನು ಒದಗಿಸಿ ಕೊಡಲು ;
ಇ) ವ್ಯಕ್ತಿಯ ಮರ್ಯಾದೆ, ರಾಷ್ಟ್ರದ ಏಕತೆಗಳನ್ನು ಭದ್ರಪಡಿಸುತ್ತ ಪ್ರಜೆಗಳಲ್ಲಿ ಭ್ರಾತೃತ್ವವನ್ನು ಬೆಳೆಸಲು.

ಈ ಧ್ಯೇಯ-ಉದ್ದೇಶಗಳು ಕಲೆತು ಒಂದು ಸ್ಫೂರ್ತಿದಾಯಕ ಉತ್ತೇಜಕ ಚಿತ್ರವಾಗುತ್ತದೆ ಪ್ರಜಾತಂತ್ರದ್ದು. ಆ ಚಿತ್ರ ವಾಸ್ತವವಾಗಿ ರೂಪುಗೊಳ್ಳುವಂತೆ ಮಾಡಲು ನೆರವಾಗಲೆಂದು ಆ ಸಭೆ ಈಗಿನ ರಾಜ್ಯಾಂಗ ಶಾಸನವನ್ನು ಮಾಡಿತು. ಆಗಾಗ ತಿದ್ದುಪಡಿಯಾಗಿ ಈಗ ಸ್ವಾತಂತ್ರ್ಯ ಪ್ರಜಾತಂತ್ರಗಳಿಗೆ ಒಂದು ಭದ್ರವಾದ ಕೋಟೆಯಾಗಿದೆ ಅದು.

ನೆರೆಹೊರೆಯ ದೇಶಗಳನೇಕ ಯಾವುದೋ ಒಂದು ಬಗೆಯ ಸರ್ವಾಧಿಕಾರಿತ್ವವನ್ನು ಒಪ್ಪಿಕೊಂಡಿವೆ. ಇವುಗಳ ನಡುವೆ ಇದ್ದೂ ಕೂಡ ಈ ದೇಶದ ಜನ ಬುದ್ಧಿಪೂರ್ವಕ ಪ್ರಜಾತಂತ್ರದ ಜೀವನ ವಿಧಾನವನ್ನು ಆರಿಸಿಕೊಂಡಿರುವುದು ನ್ಯಾಯವಾಗಿಯೂ ಹೆಮ್ಮೆಯ ವಿಷಯ. ಹಾಗೆ ಮಾಡಿದುದು ನಮ್ಮ ಜನರ ಸಾಂಸ್ಕೃತಿಕ, ಆಧ್ಯಾತ್ಮಿಕ, ಪ್ರೌಢಿಮೆಗೆ ಸಾಕ್ಷಿ.

ಇಷ್ಟೆಲ್ಲವನ್ನೂ ಒಪ್ಪಿಕೊಂಡರೂ ನಮಗೆ ಆಗಿರುವ ಹತ್ತು ವರ್ಷದ ಪ್ರಜಾತಂತ್ರಾನುಭವವನ್ನು ಪರಿಶೀಲಿಸುವುದು ಒಳಿತು. ಏಷ್ಯಾ, ಆಫ್ರಿಕಾಗಳ, ಇತರ ದೇಶಗಳ ಅನುಭವ, ಪಾಶ್ಚಾತ್ಯ ದೇಶಗಳ ಪ್ರೌಢ ಪ್ರಜಾತಂತ್ರಗಳ ಅನುಭವ, ಇವುಗಳೊಂದಿಗೆ ಹೋಲಿಸಿ ನೋಡಿಕೊಳ್ಳುವುದು ಒಳಿತು.

ನಮ್ಮ ರಾಜ್ಯಾಂಗದಂತೆ ಈ ಹತ್ತುವರ್ಷ ನಡೆಸಿದುದರಿಂದ ನಮಗೆ ತಿಳಿದು ಬಂದ, ಎದ್ದು ಕಾಣುವ ಸಂಗತಿ ಎಂದರೆ ಈ ದೇಶದ ಜನ, ಇಪ್ಪತ್ತು ಚುನಾವಣೆಗಳಲ್ಲಿ ಭಾಗವಹಿಸಿದ್ದಾರೆ, ನಿಜ. ಆ ಕ್ಷಣಿಕ ಸಂಬಂಧ ಒಂದನ್ನು ಬಿಟ್ಟರೆ ಪ್ರಜಾತಂತ್ರದ ವ್ಯವಹಾರಕ್ಕೂ ಅವರಿಗೂ ಬೇರೆ ಯಾವ ಸಂಬಂಧವೂ ಇಲ್ಲ. ಹಳ್ಳಿಗಳ ಕಡೆ ಸಾಮಾನ್ಯ ಜನರೂ ಕೂಡ ಹೇಳುವ ಮಾತು ಸಾಧಾರಣವಾಗಿ ಕೇಳಿಬರುತ್ತದೆ-ಸ್ವಾರಾಜ್ಯವೇನೋ ಬಂತು, ಆದರೆ ನಮಗೆ ಬರಲಿಲ್ಲ. ಬ್ರಿಟಿಷರ ಕಾಲದಲ್ಲಿ ಹೇಗಿತ್ತೋ ಆಡಳಿತ ಈಗಲೂ ಹಾಗೇ ಇದೆ, ಆಗ ಎಂಥವರು ಆಳುತ್ತಿದ್ದರೋ ಈಗಲೂ ಅಂಥವರೇ ಎಂದು

ಗೊಣಗುತ್ತಾರೆ. ಸ್ಥಳೀಯ ವಿಷಯಗಳಲ್ಲೂ ಸಹ ಅವರಿಗೆ ಕಿಂಚಿತ್ತೂ ಅಧಿಕಾರವಿಲ್ಲ. ತೀರಾ ಕನಿಷ್ಠ ದರ್ಜೆಯ ನೌಕರನೂ ಅವರಿಗೆ ಜವಾಬದಾರನಲ್ಲ. ತದ್ವಿರುದ್ಧವಾಗಿ, ಅವರ ಮೇಲೆಯೆ ಅಧಿಕಾರ ನಡೆಸುತ್ತಾನೆ, ಹಿಂದಿನ ಹಾಗೆಯೇ ಲಂಚದ ಕಳ್ಳ ದುಡ್ಡನ್ನೂ ಕಸಿದುಕೊಳ್ಳುತ್ತಾನೆ. ಸ್ವರಾಜ್ಯ ಬಂದುದರ ಅನುಭವ ಜನರಿಗೆ ಆಗಿಲ್ಲ. ಈ ಸತ್ಯವನ್ನೂ ನಾವು ಎದುರಿಸಲೇಬೇಕು. ವಿದ್ಯಾವಂತ ಮಧ್ಯಮವರ್ಗದ ತೀರಾ ಚಿಕ್ಕ ವರ್ಗ, ಅದರಲ್ಲೂ ನೇರಾವಾಗಿ ರಾಜಕೀಯದಲ್ಲಿ ಓಡಾಡುವವರು ಮಾತ್ರ, ಪ್ರಜಾತಂತ್ರದ ವ್ಯವಹಾರದಲ್ಲಿ ತೊಡಗಿದ್ದಾರೆ.

ಈ ಪರಿಸ್ಥಿತಿಯ ಪರಿಣಾಮವಾಗಿ ನಮ್ಮ ಪ್ರಜಾತಂತ್ರ ಬಹಳ ಇಕ್ಕಟ್ಟಿನ ತಳಹದಿಯ ಮೇಲೆ ನಿಂತಿದೆ. ಕೆಳಗೆ ಶಿಖರ, ಮೇಲೆ ಬುಡ, ಹೀಗೆ ತಲೆಕೆಳಗೆ ನಿಂತ ಗೋಪುರದ ಹಾಗೆ ಇದೆ. ವಯಸ್ಕನಾದ ಪ್ರತಿಯೊಬ್ಬ ಭಾರತೀಯನಿಗೂ ವೋಟಿನ ಅಧಿಕಾರ ಇದೆ ಎಂದ ಮಾತ್ರಕ್ಕೆ ಗೋಪುರದ ತಳ ವಿಸ್ತಾರವಾಗದು. ಒಬ್ಬರಿಗೊಬ್ಬರು ಸಂಬಂಧವಿಲ್ಲದ ಕೋಟ್ಯಂತರ ಬಿಡಿ ಬಿಡಿ ವ್ಯಕ್ತಿಗಳು ಮರಳಿನ ರಾಶಿ ಇದ್ದಂತೆ. ಯಾವುದಕ್ಕೆ ತಾನೆ ತಳಹದಿಯಾದೀತು ಮರಳಿನ ರಾಶಿ? ಮಣ್ಣಿನ ಕಣಗಳನ್ನು ಇಟ್ಟಿಗೆಯಾಗಿ ಜೋಡಿಸಿದರೆ, ಗಟ್ಟಿಯಾಗಿ ಅಚ್ಚಿನಲ್ಲಿ ಹಾಕಿ ತೆಗೆದರೆ, ಅದರಿಂದ ತಳಹದಿ ಹಾಕಬಹುದು. ಆದ್ದರಿಂದ ನಮ್ಮ ಪ್ರಜಾತಂತ್ರ ದೃಢ-ಸ್ಥಿರ ಆಗಬೇಕಾದರೆ, ಅದರ ತಳಹದಿಯನ್ನು ವಿಸ್ತರಿಸಿ ಮೇಲಿನ ಕಟ್ಟಡವನ್ನು ಕೆಳಗಿನ ತಳಹದಿಗೆ ಸರಿಯಾಗಿ ಕೂಡಿಸಬೇಕು ಎಂಬುದು ಸ್ಪಷ್ಟ. ತಳಹದಿ ಗಟ್ಟಿಯಾಗಿದ್ದರೆ ಎಂಥ ಸಾಹಸಿ ಬಂದರೂ ಪ್ರಜಾತಂತ್ರದ ಕಟ್ಟಡ ಕುಸಿದು ಬಿದ್ದೀತೆಂಬ ಭಯವಿಲ್ಲ. ನಮ್ಮ ದೇಶ ಐತಿಹಾಸಿಕ ಅವಶೇಷಗಳ ಬೀಡು. ಕಟ್ಟಡ ನೆಲಸಮ ಹೋದರೂ ಸಾಕು. ಮೊದಲು ಕೆಳಕ್ಕೆ ಉರುಳುವುದು ಮೇಲಿನ ಮಾಳಿಗೆ. ಆಮೇಲೆ ಗೋಡೆಗಳು. ಮೊದಲು ಮಹಡಿ. ಆಮೇಲೆ ಕೆಳಗಿನ ಅಂತಸ್ತು. ತಳಹದಿಯ ಕಲ್ಲುಗಳು ಸಾವಿರಾರು ವರ್ಷವಾದರೂ ಯಥಾರೀತಿ ಭದ್ರವಾಗಿಯೆ ಇರುತ್ತವೆ. ಎಂಥ ಮಹೋನ್ನತವಾದ ಕಟ್ಟಡವೇ ಆಗಲಿ ದೃಢಸ್ಥಿರ ಆಗಿರಬೇಕೆಂದರೆ ತಳಹದಿಯೂ ಕೆಳಗಿನ ಕಟ್ಟಡಗಳೂ ಭದ್ರವಾಗಿರಬೇಕು.

ಏಷ್ಯಾ ಆಫ್ರಿಕಾಗಳ ಕೆಲವು ದೇಶಗಳಿಗೆ ಪಾಶ್ಚಾತ್ಯ ಪ್ರಜಾತಂತ್ರದ ಹೊರಗಿನ ರೂಪವನ್ನು ಮಾತ್ರ ತಂದಿಟ್ಟಿದ್ದರು. ಎಂದರೆ, ವಯಸ್ಕಮತದಾನ, ಹಲವು ಪಕ್ಷ-ಪ್ರತಿಪಕ್ಷಗಳು ಆರಿಸಿದ ಶಾಸನಸಭೆ, ಅದಕ್ಕೆ ಉತ್ತರವಾದಿಯಾದ ಸರಕಾರ. ಭಾರತದಲ್ಲಿರುವ ಹಾಗೇ ಬಿಡಿಬಿಡಿಯಾದ ಮತದಾತರು ಕೆಳಗಡೆ-ಮರಳಿನರಾಶಿ. ಆ ಮರಳಿನ ರಾಶಿಯ ತಳಹದಿಯ ಮೇಲೆ ಎತ್ತರವಾದ ಮಹಡಿಗಳ ಮೇಲಿನ ಅಂತಸ್ತಿನಲ್ಲಿ ಸರಕಾರ. ಅಂಥ ಪರಿಸ್ಥಿತಿಯಲ್ಲಿ, ತಮಗೆ ಮತಧಿಕಾರ ಇದ್ದರೂ ಆ ರೀತಿಯ ಪ್ರಜಾತಂತ್ರದಲ್ಲಿ ತಮ್ಮ ಆಗು-ಹೋಗು ಏನೂ ಇಲ್ಲ. ಹೀಗೆ ತಲೆಕೆಳಗೆ ನಿಂತ ಪ್ರಜಾತಂತ್ರದ ಗೋಪುರ ಸ್ವಲ್ಪ ಅಲ್ಲಾಡಿಸಿದರೆ ಸಾಕು-ಉರುಳಿಬಿಡುತ್ತದೆ. ಅಸಂಘಟಿತರಾದ ಬಿಡಿಬಿಡಿ ಮತದಾರರು ಅಥವಾ ಮರಳಿನ ರಾಶಿಯ ಕಣಗಳು ಸುಮ್ಮನೆ ನೋಡುತ್ತ ನಿಲ್ಲಬೇಕಾಗುತ್ತದೆ ಎಂದು ಜನಕ್ಕೆ ಎನಿಸುವುದು ಸಹಜ. ಹೀಗೆ ಕೆಳಗುರುಳಿದ ಪ್ರಜಾತಂತ್ರ ಭ್ರಷ್ಟವೂ ಅಸಮರ್ಥವೂ ಅಗಿದ್ದು ಆಹಾರ ಮತ್ತು ನಿರುದ್ಯೋಗಗಳಂಥ ಜೀವಾಳದ ಸಮಸ್ಯೆಗಳನ್ನು ಬಿಡಿಸಲಾರದೆ ಹೋಗಿದ್ದರೆ, ಜನ

ಅವರ ಪತನವನ್ನು ಸ್ವಾಗತಿಸಲೂಬಹುದು. ಪ್ರಜಾತಂತ್ರವಾದಿ ವಿಚಾರವಂತರನ್ನು ಹುರಿದುಂಬಿಸುವುದು ಪ್ರಜಾತಂತ್ರದ ತಾತ್ವಿಕಗುಣಗಳಲ್ಲ; ಸಮಾಜಕಲ್ಯಾಣಕ್ಕಾಗಿ ತಾವು ವಹಿಸಬೇಕಾದ ಪಾತ್ರ, ತಮಗಿರುವ ಲಾಭ ನಷ್ಟಗಳ ಅರಿವು, ಇವೇ ಎಲ್ಲಾ ಕಡೆಯಲ್ಲೂ ಪ್ರಜಾತಂತ್ರದ ಸಂಸ್ಥೆ–ವಿಧಾನಗಳ ಬಗ್ಗೆ ಜನತೆಯ ಮನೋಧರ್ಮವನ್ನು ನಿರ್ಧರಿಸುವಂಥವು.

ಏಷ್ಯ, ಆಫ್ರಿಕಾಗಳಲ್ಲದೆ ಬೇರೆ ಖಂಡಗಳಲ್ಲೂ ಎಷ್ಟೋ ದೇಶಗಳಿವೆಯಲ್ಲ ಅವುಗಳ ಅನುಭವದ ಲಾಭ ಪಡೆಯದಿರುವುದು ಮೂರ್ಖತನ. ನಮ್ಮ ಪ್ರಜಾತಂತ್ರ ಬುಡಮೇಲಾಗುವಂಥ ಭಯ ನಾಳೆಯ ಇಲ್ಲ. ನಿಜವೆ. ಆದರೆ ಉಳಿದೆಲ್ಲಾ ಕಡೆ ಯಾವ ಲೋಪದೋಷಗಳು ಪ್ರಜಾತಂತ್ರವನ್ನು ಮಣ್ಣು ಮುಕ್ಕಿಸಿದವೋ ಅವು ಇಲ್ಲೂ ಇವೆ ಎಂಬುದನ್ನು ಮರೆಯಲಾಗದು. ಸಾಕು, ಆ ವಿಪತ್ತು ಬೇಗನೆ ಬಂದೀತು ಎನಿಸುತ್ತದೆ.

ಪಶ್ಚಿಮದ ವಿಕಸಿತ ಪ್ರಬುದ್ಧ ಪ್ರಜಾತಂತ್ರಗಳು ನಮ್ಮಷ್ಟು ಶಿರೋಭಾರದಿಂದ ಕುಗ್ಗಿಲ್ಲ, ಒಳಕಟ್ಟಡಗಳ ವಿಸ್ತಾರವಾದ ಆಧಾರ ಕೇವಲ ಕೆಲವರ ಕೈಯಲ್ಲೇ ಇವೆ. ವಿಜ್ಞಾನ, ಯಂತ್ರ ತಂತ್ರಶಾಸ್ತ್ರ, ಸಮ್ಮಿಶ್ರ ಆರ್ಥಿಕ ವ್ಯವಸ್ಥೆಗಳ ಈ ಕಾಲದಲ್ಲಿ ಹೆಚ್ಚಾಗಿ ತೀರ ಸ್ವಲ್ಪ ಜನರ ಕೆಲಸ ಆಗುತ್ತಿದೆ. ಸರಕಾರಿ ಅಧಿಕಾರಿಗಳಾಗಲಿ ಖಾಸಗಿ ಜನರಾಗಲಿ, ಅಂತೂ ಕೆಲವೊಂದು ಕೈಗಳಲ್ಲೇ ರಾಜಕೀಯ–ಆರ್ಥಿಕ ಬಲದ ಕೇಂದ್ರೀಕರಣ ಬೆಳೆಯುತ್ತಿರುವುದರ ಪರಿಣಾಮವಾಗಿ ಬಹು ಬೇಗನೆ ಪ್ರಜಾತಂತ್ರ ಬರೀ ರೂಪ ಆದೀತೇ ವಿನಾ ಒಳಗೆ ತಿರುಳು ಉಳಿಯದು.

ಪಾಶ್ಚಾತ್ಯ ಪ್ರಜಾತಂತ್ರ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಂಡೀತು. ಆದರೆ ಪಾಶ್ಚಾತ್ಯರ ಪ್ರಜಾತಂತ್ರದ ಸಮ್ಮತಿಯ ಸರಕಾರ ಅಥವಾ ಶಾಂತಿಯಿಂದ ಸರಕಾರವನ್ನು ಬದಲಾಯಿಸುವ ಅವಕಾಶವನ್ನು ಜನತಗೆ ನೀಡುವ ರಾಜಕೀಯ ಪದ್ಧತಿ ನಮಗೆ ಸಾಲದು. ಪಾಶ್ಚಾತ್ಯರ ಅನುಭವವನ್ನು ಗಮನಿಸಿ ನಾವು ಇನ್ನೂ ಮುಂಬರಿದು ಹೆಚ್ಚು ತೃಪ್ತಿಕರವಾದ ಪ್ರಜಾತಂತ್ರವನ್ನು ಸಾಧಿಸಬೇಕು. ಸಮ್ಮತಿಯ ಸರಕಾರಕ್ಕೆ ಮುಂದಿನ ಹೆಜ್ಜೆ ಜನರು ಆಡಳಿತದಲ್ಲಿ ಭಾಗವಹಿಸುವ ಸರಕಾರ ಅಥವಾ ಪ್ರಜಾಚಾಲಿತ ರಾಜ್ಯತಂತ್ರ. ದಿಲ್ಲಿಯಲ್ಲೋ ರಾಜ್ಯಗಳ ರಾಜಧಾನಿಗಳಲ್ಲೋ ಸರಕಾರ ನಡೆಯುವುದಾದರೆ ಕೋಟ್ಯಂತರ ಜನ ಭಾರತೀಯ ಮತದಾತರು ಆಡಳಿತದಲ್ಲಿ ಭಾಗವಹಿಸಲಾರರು. ಇದು ಸ್ಪಷ್ಟ. ಆಡಳಿತದಲ್ಲಿ ಜನರು ಪ್ರತ್ಯಕ್ಷವಾಗಿ ಪಾಲುಗೊಳ್ಳಬೇಕು ಎಂದರೆ ಸರಕಾರ ಆದಷ್ಟು ಅವರ ಹತ್ತಿರಕ್ಕೆ ಬರಬೇಕು. ಹೀಗೆ ಆಗಬೇಕಾದರೆ ರಾಜಕೀಯ ಆರ್ಥಿಕ ವ್ಯವಸ್ಥೆಗಳಲ್ಲಿ ಸಂಪೂರ್ಣ ವಿಕೇಂದ್ರೀಕರಣವಾಗಬೇಕು.

ಪಶ್ಚಿಮದಲ್ಲಿ ಬಹಳ ಬಲವಾದ ಆರೋಗ್ಯದಾಯಕವಾದ ಸ್ಥಳೀಯ ಸ್ವರಾಜ್ಯದ ಪದ್ಧತಿ ಒಂದು ಇದೆ. ಇದೇನೋ ಸ್ವಾಗತಾರ್ಹವೇ. ಆದರೆ ಬರೀ ಸ್ಥಳೀಯ ಸ್ವರಾಜ್ಯದಿಂದ ನಾನು ರೂಪಿಸಿಕೊಂಡ ಪ್ರತ್ಯಕ್ಷ ಪ್ರಜಾಪ್ರಭುತ್ವದ ಅವಶ್ಯಕತೆಗಳು ಪೂರ್ತಿಯಾಗುವುದಿಲ್ಲ. ಪಶ್ಚಿಮದಲ್ಲಿ ಸಾಕಷ್ಟು ಸ್ಥಳೀಯ ಸ್ವರಾಜ್ಯವಿದ್ದರೂ ಕೇಂದ್ರ ಸರಕಾರವೇ ಸರ್ವಶಕ್ತಿ ಸಂಪನ್ನ. ಪ್ರಜೆಯೇ ಪ್ರತ್ಯಕ್ಷವಾಗಿ ಭಾಗವಹಿಸುವ ಪ್ರಜಾತಂತ್ರವಾಗಬೇಕೆಂಬ ನನ್ನ ವಿಚಾರಕ್ಕೆ ಇದು ಬಹಳ ದೂರ.

ನನ್ನ ಮನಸ್ಸಿನಲ್ಲಿರುವುದು ಗಾಂಧೀ ಪದೇ ಪದೇ ಹೇಳುತ್ತಿದ್ದ ಮಾತು : ಕೆಳಗಿನ ಹಂತದಲ್ಲೂ ಕೆಲಸವೂ ಕಡಿಮೆಯಾಗಬೇಕು, ಅಧಿಕಾರವೂ ಕಡಿಮೆಯಾಗಬೇಕು. ತಲೆಕೆಳಗು ಗೋಪುರದ ಚಿತ್ರವನ್ನು ನೋಡೋಣ. ಈಗಿನ ಪ್ರಜಾತಂತ್ರದ ಮೇಲಿನ ಹಂತಗಳ ವಿಸ್ತಾರವನ್ನು ಕಡಿದುಹಾಕಿ, ಮೇಲಿನ ಹಂತಗಳ ಬಹುಭಾಗವನ್ನು ನೆಲದ ಮಟ್ಟಕ್ಕೆ ಇಳಿಸಬೇಕು. ಆಗ ನಿಜವಾಗಿಯೂ ಗೋಪುರವಾದೀತು. ಪ್ರಜಾತಂತ್ರ–ಕೆಳಗಡೆ ಅಗಲ, ಮೇಲೆ ಕಿರಿದು. ಅಂಥ ಪದ್ಧತಿಯಲ್ಲಿ ಪ್ರತಿಯೊಂದು ಮಟ್ಟದಲ್ಲೂ ಜನರಿಗೆ ಆ ಮಟ್ಟದ ವ್ಯವಹಾರ ಸಮಸ್ತವನ್ನು ನಡಸುವ ಪೂರ್ಣ ಅವಕಾಶ ಸಿಗುತ್ತದೆ. ಇಂಥ ಪ್ರಜಾತಂತ್ರ ಪದ್ಧತಿಯಲ್ಲಿ ಜನರಿಗೆ ಲಾಭ–ನಷ್ಟಗಳ ಸಂಬಂಧವೂ ಇರುತ್ತದೆ, ತಮಗೇ ಸ್ವಯಂ ಸ್ವರಾಜ್ಯದ ಅನುಭವವೂ ಆಗುತ್ತದೆ.

ಪಾಶ್ಚಾತ್ಯ ರೀತಿಯ ಪ್ರಜಾತಂತ್ರವನ್ನು ಹೊಡೆದುರುಳಿಸುವಾಗ ಪ್ರತಿಯೊಬ್ಬ ಸರ್ವಾಧಿಕಾರಿಯು ಹಳ್ಳಿಗಳಿಂದ ಹಂತ ಹಂತವಾಗಿ ಮೇಲೇರಿಬರುವ 'ಜನತೆಯ ನಿಜವಾದ ಪ್ರಜಾತಂತ್ರ' ದಲ್ಲಿ ತನ್ನ ವಿಶ್ವಾಸವನ್ನು ಸಾರಿ ಹೇಳುತ್ತಾನೆ. ಬಲು ವಿಚಿತ್ರ. ಇತ್ತೀಚಿನ ಹೊಸ ಉದಾಹರಣೆಯೆಂದರೆ ನೇಪಾಳದ ದೊರೆ ಮಹೇಂದ್ರರದು. ಕೆಲವು ವೇಳೆ ಈ ಘೋಷಣೆ ಪ್ರಾಮಾಣಿಕ, ಕೆಲವು ವೇಳೆ ಜನರನ್ನು ಮೋಸಗೊಳಿಸುವ ತಂತ್ರ. ಅದು ಹೇಗಾದರೂ ಇರಲಿ, ಹೀಗೆ ಡಂಗೂರ ಸಾರಿಸುವುದೇಕೋ? ಕಾರಣ ಸ್ಪಷ್ಟ. ಅನುಕೂಲವಾದ ಆಯುಧ ಎಂಬುದಲ್ಲ. ಪಶ್ಚಿಮದ ರೂಪಮಾತ್ರದ ಪ್ರಜಾತಂತ್ರದಲ್ಲಿ ಒಳಕಟ್ಟಡಗಳು ಇಲ್ಲದಿದ್ದರೆ ಒಂದೇ ಏಟಿಗೆ ಉರುಳಿಬಿಡುತ್ತದೆ. ಸರ್ವಾಧಿಕಾರಿಗಳು ಯಾವಾಗಲೂ ಮೂಲಭೂತ ಪ್ರಜಾತಂತ್ರದ ಮಾತನ್ನೆ ಪಶ್ಚಿಮದ ಪದ್ಧತಿಯಲ್ಲಿದ್ದಂತೆ. ಜನ ರಾಜಕಾರಣಿಗಳ ಆಟದ ಬೊಂಬೆಗಳಾಗುವುದಿಲ್ಲ ಎಂಬುದು ಅವರಿಗೆ ತಿಳಿಯುತ್ತದೆ. ಅದರಿಂದ ಜನರು ಸರ್ವಾಧಿಕಾರಿಗಳಿಗೆ ಬೆಂಬಲ ಕೊಡುತ್ತಾರೆ. ಪ್ರಜಾತಂತ್ರದ ಬಗ್ಗೆ ಪ್ರಾಮಾಣಿಕವಾಗಿಯೆ ಮಾತಾನಾಡುವ ಸರ್ವಾಧಿಕಾರಿಗಳು ತಾವು ಹೇಳುವ ಹೊಸ ಪ್ರಜಾತಂತ್ರವನ್ನು ಕಟ್ಟಲು ದೃಢಪ್ರಯತ್ನ ಮಾಡಿಯಾರು ಎಂದು ನಿರೀಕ್ಷಿಸಲೂ ಬಹುದು. ಅರಬ್ ಗಣರಾಜ್ಯದ ರಾಷ್ಟ್ರೀಯ ನೇಪಾಳದವರೆಗೆ ಇರುವ ಸರ್ವಾಧಿಕಾರಿಗಳು ತಮ್ಮ ಮಾತಿನಂತೆ ನಡೆದು ಜನತೆಗೆ, ಜನತೆಯ ಪ್ರಜಾತಂತ್ರಿಕ ಸಂಸ್ಥೆಗಳಿಗೆ ಎಲ್ಲ ಅಧಿಕಾರವನ್ನು ಬಿಟ್ಟುಕೊಡ್ಡುತ್ತಾರೋ ಏನೋ ಕಾದು ನೋಡಬೇಕು. ಅರಬ್ ಗಣರಾಜ್ಯದ ರಾಷ್ಟ್ರೀಯ ಸಂಘ, ಪಾಕಿಸ್ತಾನದ ಮೂಲ–ಪ್ರಜಾತಂತ್ರ ಈ ದಾರಿಯಲ್ಲಿ ಒಂದು ಹೆಜ್ಜೆ ಇರಬಹುದು. ಆದರೂ ಈ ದೇಶಗಳು ಯಾವ ಬಗೆಯ ಪ್ರಜಾತಂತ್ರಕ್ಕೂ ಹತ್ತಿರ ಬಂದಿಲ್ಲ. ಆದರೆ ಇತ್ತ 'ಪ್ರಜಾತಂತ್ರ ನಾಶವಾಯಿತು' ಎಂಬ ಕೂಗು, ಅತ್ತ 'ಪ್ರಜಾತಂತ್ರ ಚಿರಾಯುವಾಗಲಿ' ಎಂಬ ಘೋಷಣೆ ಎರಡೂ ಒಟ್ಟಿಗೆ ಕೇಳಿಬರುವ ಈ ಸನ್ನವೇಶ ವಿಚಿತ್ರವೇ.

ರಾಜಕೀಯ, ಆರ್ಥಿಕ ವಿಕೇಂದ್ರೀಕರಣ ಹಾಗೂ ಸರಕಾರದ ಕೆಳಗಿನ ಹಂತಗಳ ದೃಢೀಕರಣಗಳನ್ನು ಕಂಡು ಈ ವಿಧಾನದಿಂದ ರಾಷ್ಟ್ರೀಯತೆ ಸಡಿಲವಾಗಿ ಕೇಂದ್ರದ ಶಕ್ತಿ ಸಾಮರ್ಥ್ಯ, ಒಗ್ಗಟ್ಟುಗಳು ಬಲಹೀನವಾಗಬಹುದೆಂದು ತೋರುತ್ತದೆ. ದೇಶದಲ್ಲಿ ಒಡಕು ಬೇಕಾದಷ್ಟು ಇದೆ. ಸ್ಥಳೀಯ ಭಾಷೀಯ ಅಭಿಮಾನಿಗಳು ಪ್ರಕೋಪಗಳು ಇರುವುದು ಇದಕ್ಕೆ ಸಾಕಷ್ಟು ಪುಷ್ಟಿ ಕೊಡುತ್ತಿದೆ. ಆದರೆ ಹೆಚ್ಚು

ಸೂಕ್ಷ್ಮವಾಗಿ ಪರೀಕ್ಷಿಸಿದರೆ ಇಂದಿಗಿಂತ ಹೆಚ್ಚು ದೃಢವಾದ ರಾಷ್ಟ್ರವಾದೇವು, ಭಾರತದಲ್ಲಿರುವ ಭಿನ್ನ ಭಿನ್ನ ಗುಂಪುಗಳು ಇನ್ನೂ ಹೆಚ್ಚು ಸುಖವಾಗಿ ಕೂಡಿ ಬಾಳಿಯಾವು- ತಮ್ಮ ತಮ್ಮ ವ್ಯವಹಾರಗಳನ್ನು ತಾವೇ ಸಾದ್ಯವಿದ್ದಷ್ಟು ನಡೆಸಲು, ತಮ್ಮ ತಮ್ಮ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡು ಬೆಳೆಸಿಕೊಳ್ಳಲು ಅವಕಾಶ–ಸ್ವಾತಂತ್ರ್ಯ ಸಿಕ್ಕರೆ. ಅನೇಕ ಕಾರ್ಯಗಳನ್ನು ಅತಿಯಾಗಿ ಕೇಂದ್ರೀಕರಸಿಕೊಂಡ ಸರ್ವಶಕ್ತ ಕೇಂದ್ರ ಹೊರಗೆ ಕಾಣಿಸಲು ಮಾತ್ರ ಶಕ್ತಿಶಾಲಿ. ಅಂತರಂಗದಲ್ಲಿ ವಿಶೇಷ ಬಾಧೆ–ಬಂಧನ. ಯಾವಾಗ ಮುರಿದುಬಿದ್ದೀತೋ ಎಂಬ ಅಪಾಯ ಸದಾ ಇರುತ್ತದೆ. ಇಂಥ 'ಬಲಶಾಲಿ' ಕೇಂದ್ರ ಕ್ರಮೇಣ ಪ್ರಜಾತಂತ್ರಕ್ಕೆ ತಿಲಾಂಜಲಿ ಕೊಟ್ಟು ಸರ್ವಾಯತನವಾಗಬೇಕಾಗುತ್ತದೆ. ಭಾರತದಲ್ಲಿ ಏಕೈಕ ರಾಜ್ಯವಿರಬೇಕು ಎಂದು ಪ್ರತಿಪಾದಿಸುವವರು ಫ್ಯಾಸಿಸ್ಟ್ ಮನೋವೃತ್ತಿಯವರೆಂಬುದಕ್ಕೆ ಕಾರಣವಿಲ್ಲದಿಲ್ಲ.

ಅಧಿಕಾರದ ವಿಕೇಂದ್ರೀಕರಣ, ತನ್ನ ಕೇಂದ್ರದ ಕಾರ್ಯಕಲಾಪಗಳನ್ನು ನಡೆಸಲು ಎಷ್ಟೋ ಅಷ್ಟೇ ಅಧಿಕಾರ ಕೇಂದ್ರಕ್ಕೆ, ಉಳಿದೆಲ್ಲ ಅಧಿಕಾರವೂ ಕೆಳಗಿನ ಹಂತಗಳಿಗೆ–ಹೀಗೆಂದರೆ ಕೇಂದ್ರ ದುರ್ಬಲವಾಗುತ್ತದೆ ಎಂದೇನಲ್ಲ. ಅದೆಲ್ಲವೂ ಯೋಗ್ಯತೆಯ ವಿಷಯ. ಪ್ರತಿಯೊಂದು ಹಂತದಲ್ಲೂ ಚುನಾಯಿತ ಅಧಿಕಾರಿಗಳು ತಮಗೆ ಯೋಗ್ಯತೆ ಇದ್ದುದ್ದು ಎಲ್ಲವನ್ನು ಮಾಡುತ್ತಾರೆ. ಪ್ರತಿಯೊಂದು ಹಂತದಲ್ಲೂ ತಮ್ಮ ಯೋಗ್ಯತೆಗೆ ಮೀರಿದ ಕೆಲಸಗಳಿವೆ ಎಂದು ಅರಿತು, ಅದೇ ಹಂತದ ಇತರ ಅಧಿಕಾರಿಗಳೊಡನೆ ಕಲೆತು ತಮಗಿಂತ ಮೇಲಿನ ಹಂತದ ಅಧಿಕಾರವನ್ನು ರಚಿಸುತ್ತವೆ. ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳಬಹುದು: ಈ ಕಾಲದಲ್ಲಿ ಅತ್ಯಂತ ಬಲಿಷ್ಠ ರಾಷ್ಟ್ರಗಳಿಗೂ ಜನಾಂಗಗಳಿಗೂ ಕೂಡ ತಾವು ನಿರ್ವಹಿಸಲಾರದ ಕೆಲಸ ಇದೆ ಎನಿಸುತ್ತಿದೆ. ಅದ್ದರಿಂದ ಜಾಗತಿಕ ಜನತಾ ಸಂಘ ಆಗಬೇಕು ಎಂಬ ಅಭಿಪ್ರಾಯ ಬೆಳೆಯುತ್ತಿದೆ. ಈ ವ್ಯವಸ್ಥೆಯಲ್ಲಿ ಕೆಳಗಿನ ಹಂತಗಳಲ್ಲಿ ಏನೇನನ್ನು ಮಾಡಲು ಸಾಧ್ಯವಿಲ್ಲವೋ ಅದನ್ನೆಲ್ಲ ದಕ್ಷತೆಯಿಂದ ಬೇಗ ಮಾಡಲು ಕೇಂದ್ರಕ್ಕೆ ಎಲ್ಲ ಅಧಿಕಾರವನ್ನೂ ಅವಕಾಶವನ್ನೂ ಕೊಡುವುದು ಕೆಳಗಿನ ಹಂತಗಳವರೆಗೆ ಹಿತಕರ. ಆದ್ದರಿಂದ ಈ ಯೋಗ್ಯತೆಯ ಮಾತೇ ಕೇಂದ್ರಕ್ಕೆ ಬಲದ ಭರವಸೆ ಕೊಡುತ್ತದೆ. ಸಂರಕ್ಷಣೆ, ವಿದೇಶ ವ್ಯವಹಾರ, ಅಂತರ್‌ರಾಜ್ಯ ಸಂಬಂಧ, ನಾಣ್ಯ ಚಲಾವಣೆ, ಆಮದು ರಫ್ತುಗಳ ನಿಯಂತ್ರಣ, ರಾಷ್ಟ್ರೀಯ ಐಕ್ಯತೆಯ ರಕ್ಷಣೆ ಇತ್ಯಾದಿಗಳು ಕೇಂದ್ರದ ಯೋಗ್ಯತೆಗೆ ಮಾತ್ರವೇ ಸಂಬಂಧಿಸಿದವು. ಹೆಚ್ಚು ಆಡಳಿತ ವಿಷಯಗಳು ಇಲ್ಲದ ಮಾತ್ರಕ್ಕೆ ದುರ್ಬಲವೆ? ಇಂಥ ಸರಕಾರ ನಿಜವಾಗಿಯೂ ಬಲಿಷ್ಠ, ಶಕ್ತಿ–ಅಧಿಕಾರಗಳ ತೋರಿಕೆ ತೋರಿಸಬಹುದೇ ವಿನಾ ವಾಸ್ತವವಾಗಿ ಬಲಹೀನ, ಮಂದಗಾಮಿ, ಪರಿಣಾಮಹೀನ, ಬರೀ ಸ್ಥೂಲ ಆಗಿರುತ್ತದೆ.

ಕೇಂದ್ರ ಸರಕಾರದ ಕೈಯಲ್ಲಿ ಎಷ್ಟು ವಿಷಯಗಳಿವೆ ಎಂಬ ಪಟ್ಟಿಯಿಂದಲ್ಲ ರಾಷ್ಟ್ರೀಯ ಐಕಮತ್ಯ, ಬಲ ಬರುವುದು; ಭಾವೈಕ್ಯತೆ, ಸಾಮಾನ್ಯ ಅನುಭವ–ಆಕಾಂಕ್ಷೆಗಳು, ರಾಷ್ಟ್ರೀಯ ನೀತಿ–ಚಾರಿತ್ರ್ಯ, ಪರಸ್ಪರ ಶುಭಾಶಯ, ಪರಸ್ಪರ ದಾಕ್ಷಿಣ್ಯ, ಮುಖ್ಯವಾಗಿ ರಾಷ್ಟ್ರ ನಾಯಕರ ವಿಶಾಲ ಹೃದಯ ಮುಂತಾದ ಅಗೋಚರ ಅಂಶಗಳಿಂದ.

ಭ್ರಷ್ಟಾಚಾರ ನಿಯಂತ್ರಿಸುವ ಕಾಲ ಬಂದಿದೆ

ಭ್ರಷ್ಟಾಚಾರ ವಿರೋಧಿ ರಾಜಕೀಯ ಕಾರ್ಯಕರ್ತರಾದ ಅರವಿಂದ್ ಕೇಜ್ರಿವಾಲ್ ಮತ್ತು ಅವರ ಸಹಕಾರ್ಯಕರ್ತರು ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುವ ಭರಾಟೆಯಲ್ಲಿದ್ದಾರೆ. ಅವರು ಅತ್ಯಂತ ಸ್ಫೋಟಕ ವಿಷಯವನ್ನು ಅನಾವರಣಗೊಳಿಸಿದ್ದಾರೆ. ಅಂಥದ್ದನ್ನು ಇದುವರೆಗೆ ಮಾಡಿರಲಿಲ್ಲ. ಅದು ಕಪ್ಪು ಹಣ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಗಳ, ಕಂಪನಿಗಳ ಹಾಗೂ ಒಂದು ಬಹುರಾಷ್ಟ್ರೀಯ ಬ್ಯಾಂಕ್ ಹೆಸರನ್ನು ಬಹಿರಂಗ ಪಡಿಸಲಾದ ಅಪಾಧನೆ ಫ್ರಾನ್ಸ್ ಸರ್ಕಾರವು ಭಾರತ ಸರ್ಕಾಕ್ಕೆ ೨೦೧೧ ಜೂನ್ ಮಾಹೆಯಲ್ಲಿ ಕಳುಹಿಸಿದ ಒಂದು ಕಾಮ್ ಫ್ಯಾಕ್ಟ್ ಡಿಸ್ಕನಲ್ಲಿ ಬಹಿರಂಗಗೊಳಿಸಲಾದ ಮಾಹಿತಿಯಿದೆ. ಸುಮಾರು ೭೦೦ ಜನರು ರಹಸ್ಯವಾಗಿ ಆರು ಸಾವಿರ ಕೋಟಿಗಿಂತಲೂ ಹೆಚ್ಚು ಹಣವನ್ನು ಎಚ್.ಎಸ್.ಬಿ.ಸಿ. ಬ್ಯಾಂಕಿನ ಜಿನೀವಾ ಶಾಖೆಯಲ್ಲಿ ತೊಡಗಿಸಿದ್ದಾರೆ. ಅವರ ಅನೌಪಚಾರಿಕ ನಿರಾಕರಣೆ ನಂತರವೂ ಫ್ರಾನ್ಸ್ ಸರ್ಕಾರ ಹೆಚ್ಚು ಕಡಿಮೆ ಅದನ್ನು ದೃಢಗೊಳಿಸಿದೆ. ಈ ಅಪಾದನೆಗಳು ಸ್ಪಷ್ಟವಾಗಿ ದೊಡ್ಡ ಹಿಮ ಬಂಡೆಯ ಒಂದು ತುದಿ ಮಾತ್ರ. ಆದರೆ ನಮ್ಮ ಸರ್ಕಾರ ಈ ವಿಷಯದಲ್ಲಿ ತನಿಖೆ ಪ್ರಗತಿಯಲ್ಲಿದೆ ಮತ್ತು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಹೇಳಿ ತನ್ಮೂಲಕ ಸರ್ಕಾರವೂ ಅದನ್ನು ಒಪ್ಪಿದಂತಾಗಿದೆ. ಈ ಸಮಾಜಘಾತಕಾರಿ ಆರ್ಥಿಕ ವಂಚನೆಯನ್ನು ಯು.ಪಿ.ಎ. ಸರ್ಕಾರ ಹಗುರಾಗಿ ಮತ್ತು ಸ್ಪಂದನರಹಿತವಾಗಿ ನಿರ್ವಹಿಸುತ್ತಿದೆ. ಎಂಬುದನ್ನು ಒಪ್ಪಿಕೊಂಡಿರುವುದು ಆಘಾತಕಾರಿ ಸಂಗತಿಯಾಗಿದೆ. ಕೆಲ ಜನ ಕೇಜ್ರಿವಾಲ್‌ರ ಮೇಲೆ 'ಹೊಡೆದು ಓಡಿಹೋಗುವ ತಂತ್ರ' ವನ್ನು ಅನುಸರಿಸುತ್ತಿದ್ದಾರೆ ಎಂದು ಅಪಾದಿಸಿದ್ದಾರೆ. ಉದಾಹರಣೆಗೆ ಕಳೆದ ತಿಂಗಳು ಸೋನಿಯಾಗಾಂಧಿ ಅಳಿಯ ರಾಬರ್ಟ ವಾದ್ರಾ, ವಿದೇಶಾಂಗ ಮಂತ್ರಿ ಸಲ್ಮಾನ್‌ಖುರ್ಷಿದ್ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ, ಮುಖೇಶ್ ಅಂಬಾನಿ ನೇತೃತ್ವದ ರಿಲಾಯನ್ಸ್ ಸಮೂಹ ಇವನ್ನು ಈ ಮೊದಲು ಅವರು ಬಹಿರಂಗಗೊಳಿಸಿದ್ದರು. ಆದರೆ ಅರವಿಂದ ಕೇಜ್ರಿವಾಲರನ್ನು ಅವರ ತಂಡದವರನ್ನು ಶ್ರಮದಾಯಕ ಕೆಲಸಕ್ಕಾಗಿ ಅಭಿನಂದಿಸಲೇಬೇಕು. ಯಾವುದೇ ಜವಾಬ್ದಾರಿ ಸರ್ಕಾರ ಇಂಥ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ಶೀಘ್ರಾತಿಶೀಘ್ರ ತಪ್ಪಿಸ್ಥರನ್ನು ಶಿಕ್ಷೆಗೆ ಒಳಪಡಿಸುತ್ತದೆ. ತನ್ಮೂಲಕ ಪ್ರಜಾಪ್ರಭುತ್ವದಲ್ಲಿ ಜನರ ವಿಶ್ವಾಸ ಉಳಿಯುವಂತೆ ಮಾಡುತ್ತದೆ. ಗೃಹಮಂತ್ರಿ ಸುಶೀಲ್‌ಕುಮಾರ್ ಶಿಂಧೆ ಒಪ್ಪಿರುವ ಪ್ರಕಾರ ಕಪ್ಪು ಹಣ ದೇಶದ ಅರ್ಥವ್ಯವಸ್ಥೆಯೊಂದಿಗೆ ಹಾಗೂ ಭದ್ರತೆಯೊಂದಿಗೆ ಚೆಲ್ಲಾಟವಾಡುತ್ತಿದೆ. ಸರ್ಕಾರದ ಬಳಿ ಕೆಲ ನಿರ್ದಿಷ್ಟ ಭಯೋತ್ಪಾದಕ ಗುಂಪುಗಳು ಸ್ಟಾಕ್ ಮಾರ್ಕೆಟ್‌ನಲ್ಲಿ ಹಣತೊಡಗಿಸಿದ ಕಪ್ಪುಹಣದ ಚಲಾವಣೆಯನ್ನು ಗಮನಿಸಿ ಸರ್ಕಾರ ಚಲಾವಣೆಯ ದುಷ್ಪರಿಣಾಮವನ್ನು ಗಮನಿಸಿ ತಕ್ಷಣ ದೊಡ್ಡ ಪ್ರಮಾಣದಲ್ಲಿ ಅದನ್ನು ನಿಯಂತ್ರಿಸುವ ಕಾಲಬಂದಿದೆ. ಸುಪ್ರೀಂಕೋರ್ಟ್ ಒಂದು ವರ್ಷಕ್ಕಿಂತಲೂ ಹಿಂದೆ ವಿಶೇಷ ತನಿಖಾ ಸಮಿತಿಯನ್ನು ರಚಿಸಿ ಕಪ್ಪು ಹಣದ ವಿಷಯದಲ್ಲಿ ಕಾರ್ಯಾಚರಣೆ ಮಾಡಬೇಕೆಂದು ಆದೇಶ ನೀಡಿತ್ತು. ಅದನ್ನು ಈಗ ಕೇಂದ್ರ ಸರ್ಕಾರ ಸೀಮಿತ ಸಮಯದಲ್ಲಿ ಮಾಡುವ ಕಾನೂನನ್ನು ಜಾರಿಗೊಳಿಸಬೇಕು. ರಾಷ್ಟ್ರದ ಭದ್ರತೆಯ ವಿಷಯದಲ್ಲಿ ಯಾವ ಕಾರಣಕ್ಕೂ ಒಪ್ಪಂದ ಮಾಡಿಕೊಳ್ಳಕೂಡದು.

(ಸಾಭಾರ : ಡೆಕ್ಕನ್ ಹೆರಾಲ್ಡ್ ಸಂಪಾದಕೀಯ)

ಅಂಬೇಡ್ಕರ್ ನೀಡಿದ್ದ ಚುನಾವಣಾ ಪ್ರಣಾಳಿಕೆ

– ರಘೋತ್ತಮ .ಹೊ.ಬ

ಚುನಾವಣಾ ಪ್ರಣಾಳಿಕೆ, ಹಾಗೆಂದರೆ ರಾಜಕೀಯ ಪಕ್ಷವೊಂದು ಚುನಾವಣಾ ಸಮಯದಲ್ಲಿ ತನ್ನ ಮತದಾರ ಬಂಧುಗಳಿಗೆ ನೀಡುವ ಆಶ್ವಾಸನೆ, ಭರವಸೆ ಎಂದರ್ಥ. ಒಟ್ಟಾರೆ ಅಧಿಕಾರಕ್ಕೆ ಬಂದಾಗ ಈಡೇರಿಸಬಹುದಾದ ಕಾರ್ಯಕ್ರಮ ಎನ್ನಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಬಂದಾಗ ಪ್ರತಿಯೊಂದು ಪಕ್ಷ ಯಾ ಅಭ್ಯರ್ಥಿ ಇಂತಹ ಪ್ರಣಾಳಿಕೆ ಘೋಷಿಸುವ ರೂಢಿ ಇಟ್ಟುಕೊಂಡೇ ಇರುತ್ತಾರೆ. ಕೆಲವರು ಇದಕ್ಕೆ ಅಪವಾದ ಇರಬಹುದು. ಆದರೆ ಬಹುತೇಕ ಸಂದರ್ಭಗಳಲ್ಲಿ ಅಂತಹ ಪ್ರಣಾಳಿಕೆ ಹೊರಡಿಸುವುದು ಒಂದು ರೀತಿ ಸತ್ಸಂಪ್ರದಾಯವಾಗಿದೆ. ಆಶ್ಚರ್ಯಕರವೆಂದರೆ ಬಾಬಾಸಾಹೇಬ್ ಅಂಬೇಡ್ಕರ್‌ರವರು ಕೂಡ ೧೯೫೧ರಲ್ಲಿ ತಾವೇ ಸ್ಥಾಪಿಸಿದ್ದ 'ಆಲ್ ಇಂಡಿಯಾ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್' (AISCF) ಪಕ್ಷದ ಪರವಾಗಿ ಒಂದು ಪ್ರಣಾಳಿಕೆ ಬಿಡುಗಡೆ ಮಾಡುತ್ತಾರೆ! ೨ ರೂಗೆ ಕೆಜಿ ಅಕ್ಕಿ, ಒಂದು ಸೀರೆ–ಒಂದು ರವಿಕೆ, ಕಲರ್ ಟಿವಿ, ಎಮ್ಮೆ ಲೋನು, ಹಸು ಲೋನು, ತಾಳಿಭಾಗ್ಯ, ಕುಂಕುಮ ಭಾಗ್ಯ... ಇತ್ಯಾದಿ ಅಗ್ಗದ, ರಚನಾತ್ಮಕವಲ್ಲದ ಯೋಜನೆ ಘೋಷಿಸುವ, ಯಾವುದೇ ದೂರದೃಷ್ಟಿಯಿಲ್ಲದ ಪ್ರಣಾಳಿಕೆಯ ಈ ದಿನಗಳಲ್ಲಿ ಅಂಬೇಡ್ಕರರು ಅಂದು ನೀಡಿದ್ದ ಯೋಜನೆಗಳು? ಘೋಷಿಸಿದ್ದ ಆಶ್ವಾಸನೆಗಳು? ಒಂದು ರೀತಿ ಭವ್ಯಭಾರತದ ಅದ್ಭುತ ರೂಪುಗೊಳ್ಳುವಿಕೆಗೆ ದಾರಿದೀಪದಂತಿತ್ತು ಎಂದರೆ ಯಾರಿಗಾದರು ಆಶ್ಚರ್ಯವಾಗಬಹುದು. ಆದರೆ ಅದು ನಿಜ. ದುರಂತವೆಂದರೆ ಅಂತಹ ದಾರಿದೀಪವನ್ನು ಈ ದೇಶದ ಮಾಧ್ಯಮಗಳು, ವಿಚಾರವಾದಿಗಳು, ಬುದ್ಧಿಜೀವಿಗಳು ಗುರುತಿಸಲು ಹೋಗಿಲ್ಲ ಎಂಬುದು! ತಮ್ಮ ಪಕ್ಷದ ಧ್ಯೇಯಗಳನ್ನಾಗಿ ಇಟ್ಟುಕೊಳ್ಳಲು ಹೋಗಿಲ್ಲ ಎಂಬುದು.

ಅಂದಹಾಗೆ ೧೯೫೨ರ ಸಾರ್ವತ್ರಿಕ ಚುನಾವಣಾ ಸಂದರ್ಭದಲ್ಲಿ ಅಂಬೇಡ್ಕರ್‌ರವರು ತಮ್ಮ ಪಕ್ಷದ ಪರವಾಗಿ ನೀಡಿದ್ದ ಆಶ್ವಾಸನೆಗಳು, ಯೋಜನೆಗಳು ಇಂತಿವೆ. ಮೊಟ್ಟಮೊದಲನೆಯದಾಗಿ ಅವರು ಹೇಳುವುದು ತಮ್ಮ ಪಕ್ಷ ಈ ದೇಶದ ಪ್ರತಿಯೊಬ್ಬರನ್ನು ಸಮಾನತೆ ಆಧಾರದ ಮೇಲೆ ಕಾಣುತ್ತದೆ, ಹಾಗೆಯೇ ಎಲ್ಲೆಲ್ಲಿ ಸಮಾನತೆ ನಿರಾಕರಿಸಲ್ಪಟ್ಟಿದೆಯೋ ಅಲ್ಲೆಲ್ಲಾ ಅದನ್ನು ಜಾರಿಗೊಳಿಸಲು ಕಟಿಬದ್ಧವಾಗಿದೆ ಎಂದು! ಹೌದು, ಅಂಬೇಡ್ಕರರ ಈ ಘೋಷಣೆ ಈ ದೇಶದ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಮಾರ್ಗಸೂಚಿಯಾಗಬೇಕಿತ್ತು, ಸಂವಿಧಾನವಾಗಬೇಕಿತ್ತು. ಯಾಕೆಂದರೆ ಈ ದೇಶದ ಎಲ್ಲಾ ಸಮಸ್ಯೆಗಳಿಗೂ ಮುಖ್ಯ ಕಾರಣ ಅಸಮಾನತೆ. ಅದು ಹೋಗಲಾಡಿಸಲ್ಪಟ್ಟಿತೆಂದರೆ ತನ್ನಿಂತಾನೆ ಈ ದೇಶದ ಪ್ರಜಾಪ್ರಭುತ್ವ ಯಶಸ್ಸಿನೆಡೆಗೆ ಸಾಗುತ್ತದೆ. ಮುಂದೆ ಅವರು ನೀಡುವ ಎರಡನೇ ಪ್ರಮುಖ ಆಶ್ವಾಸನೆ, "ಈ ದೇಶದ ಪ್ರತಿಯೊಬ್ಬ ನಾಗರಿಕನನ್ನು ಭಯಮುಕ್ತನನ್ನಾಗಿಸುವುದು". ಅದ್ಭುತ

ಅಂಬೇಡ್ಕರರ ಈ ಆಶ್ವಾಸನೆ. ಯಾಕೆಂದರೆ ಎಲ್ಲಿ ದೊಂಬಿಯಾಗುತ್ತದೆಯೋ, ಯಾರ ಮನೆ ಲೂಟಿಯಾಗುತ್ತದೆಯೋ, ಯಾರ ಕತ್ತರಿ ಬೀಳುತ್ತದೆಯೋ, ಯಾರ ಜೀವ ಇನ್ನೊಬ್ಬರ ಮುಂದೆ ಕಾಲಕಸವಾಗುತ್ತದೆಯೋ ಎಂದು ಜನಸಾಮಾನ್ಯರು ಪ್ರತಿನಿತ್ಯ ನರಳುವ ಈ ಕಾಲದಲ್ಲಿ ಭಯಮುಕ್ತ ವಾತವರಣ ರೂಪಿಸುವುದು? ಹೌದು, ಅಂಬೇಡ್ಕರ್‌ರವರು ಹೇಳುವುದು ಇದನ್ನೆ.

ಸಾಮಾಜಿಕ ಶಾಂತಿ ಸೌಹಾರ್ದತೆ ಕಾಪಾಡುವುದನ್ನು. ಧಾರ್ಮಿಕ ಸಹಿಷ್ಣುತೆಯನ್ನು ಎತ್ತಿಹಿಡಿವುದನ್ನು. ಪಕ್ಷ ಸಂಸದೀಯ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ಗೌರವಿಸುತ್ತದೆ ಹಾಗೂ ಅದನ್ನು ಬಲಗೊಳಿಸುವಲ್ಲಿ ಶ್ರಮಿಸುತ್ತದೆ ಎಂದು. ಒಂದು ಮಾತು ಅದೇನೆಂದರೆ ಅಂಬೇಡ್ಕರರು ರೂಪಿಸಿದ್ದ ಸಂವಿಧಾನ ಪ್ರತಿಪಾದಿಸಿದ್ದು ಸಂಸದೀಯ ಪ್ರಜಾಸತ್ತೆಯನ್ನು. ಈ ನಿಟ್ಟಿನಲ್ಲಿ ತಮ್ಮ ಪಕ್ಷದ ಪ್ರಣಾಳಿಕೆಯಾಗಿ ಅಂತಹ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸುವ ಆಸ್ವಾಸನೆಯನ್ನು ಅವರು ನೀಡುತ್ತಾರೆ.

ಇಷ್ಟೆಲ್ಲ ಹೇಳಿದ ಮೇಲೆ ಅವರು ಒಂದು ಮಾತನ್ನು ಆರಂಭದಲ್ಲೆ ಸ್ಪಷ್ಟಪಡಿಸುತ್ತಾರೆ. ಅದೇನೆಂದರೆ ತಮ್ಮ ಪಕ್ಷ ಅಂದರೆ 'ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ' (ಎಸ್.ಸಿ.ಎಫ್) ಆಗ ಜಾರಿಯಲ್ಲಿದ್ದ ಯಾವುದೇ ವಾದ ಅಥವಾ ಇಸಂಗೆ ಅಂದರೆ ಸಮಾಜದವಾದ, ಗಾಂಧಿವಾದ, ಕಮ್ಯುನಿಷ್ಟ್‌ವಾದ ಇತ್ಯಾದಿಗಳಿಗೆ ಜೋತುಬೀಳುವುದಿಲ್ಲ, ಬದಲಿಗೆ ತನ್ನದೆ ಸ್ವತಂತ್ರ ಅಸ್ತಿತ್ವ ಉಳಿಸಿಕೊಳ್ಳವ ಇಂಗಿತ ವ್ಯಕ್ತಪಡಿಸುತ್ತಾರೆ. ಪ್ರಸ್ತುತ ದಿನಗಳಲ್ಲಿ ಅಂತಹ ಸ್ವತಂತ್ರ ಅಸ್ತಿತ್ವವೇ ಅಂಬೇಡ್ಕರ್‌ವಾದವಾಗಿ ರೂಪುಗೊಂಡಿದೆ ಎಂದು ಘಂಟಾಘೋಷವಾಗಿ ಹೇಳಬಹುದು. ಹಾಗೆಯೇ ಬಾಬಾಸಾಹೇಬರಿಗೆ 'ಅಂತಹ ವಾದದ ಅಸ್ತಿತ್ವ'ದ ಸುಳಿವು ಸಿಕ್ಕಿತ್ತೆಂದು ಕಾಣುತ್ತದೆ ಅದಕ್ಕೆ ಅವರು ಬೇರೆ ಎಲ್ಲಾ ವಾದಗಳನ್ನು ಅಥವಾ ಇಸಂಗಳನ್ನು ತಿರಸ್ಕರಿಸಿದರು ಎನ್ನಬಹುದು.

ಹೀಗೆ ತಮ್ಮ ಪಕ್ಷಕ್ಕೆ ನಾನಾ ತತ್ವಗಳನ್ನು ರೂಪಿಸುವ ಅವರು ಮುಂದುವರೆದು ಆ ಪಕ್ಷದ ಪರವಾಗಿ ಹಲವಾರು ಯೋಜನೆಗಳು ಸಹ ಘೋಷಿಸುತ್ತಾರೆ. ಬಹುಶಃ ಅಂಬೇಡ್ಕರರು ಅಂದು ಘೋಷಿಸಿದ್ದ ಯೋಜನೆಗಳು ಇಂದಿಗೂ ಎಷ್ಟು ಪ್ರಸ್ತುತ, ಇಂದಿನ ರಾಜಕೀಯ ಪಕ್ಷಗಳಿಗೂ ಕೂಡ ದೇಶದ ಅಭಿವೃದ್ಧಿಯ, ಐಕ್ಯತೆಯ ದೃಷ್ಟಿಯಿಂದ ಆ ಯೋಜನೆಗಳು ಎಷ್ಟು ಅಗತ್ಯ ಎಂಬುದು ಆ ಯೋಜನೆಗಳತ್ತ ಗಮನ ಹರಿಸಿದರೆ ಅರ್ಥವಾಗುತ್ತದೆ. ಈ ನಿಟ್ಟಿನಲ್ಲಿ ಅವರ ಮೊದಲ ಯೋಜನೆ ಬೊಟ್ಟು ಮಾಡುವುದು ಈ ದೇಶದ ಇತರೆ ಹಿಂದುಳಿದ ವರ್ಗ(ಓ.ಬಿ.ಸಿ)ಗಳ ಬಗ್ಗೆ. ಹೌದು, ಪರಿಶಿಷ್ಟರ ಹಾಗೆ ಓ.ಬಿ.ಸಿ.ಗಳ ಬಗ್ಗೆ ಗಮನಹರಿಸುವ ಅಂಬೇಡ್ಕರರು ಹಿಂದುಳಿದ ವರ್ಗಗಳು ಆಡಳಿತ ವ್ಯವಸ್ಥೆಯಲ್ಲಿ ತಮ್ಮ ಪಾಲನ್ನು ಪಡೆಯುವಂತಾಗಲು ಅವರಿಗೆ ಉನ್ನತ ಶಿಕ್ಷಣ ಯೋಜನೆ ರೂಪಿಸುವ ತನ್ಮೂಲಕ ಪರಿಶಿಷ್ಟರ ಹಾಗೆ ಓ.ಬಿ.ಸಿಗಳಿಗೂ ಕೂಡ ಸರ್ಕಾರಿ ಸೇವೆ ಮತ್ತು ಮಿಲಿಟರಿ ಸೇವೆಯಲ್ಲಿ ಮೀಸಲಾತಿ ಜಾರಿಗೊಳಿಸುವ ನಿಲುವು ವ್ಯಕ್ತಪಡಿಸುತ್ತಾರೆ. ಈ ನಿಟ್ಟಿನಲ್ಲಿ ಮೀಸಲಾತಿ ಜಾರಿಗೊಳಿಸಿ ಎಂದು ಹೋರಾಡುವ ಹಿಂದುಳಿದ ವರ್ಗಗಳ ಹೋರಾಟಗಾರರನ್ನು ಕೊಮುವಾದಿಗಳು ಎಂದು

ಜರೆಯುವುದರ ಹಿಂದಿರುವುದರ ಸಂಚನ್ನು ತಮ್ಮಪಕ್ಷ (ಎಸ್.ಸಿ.ಎಫ್) ಉಗ್ರವಾಗಿ ಖಂಡಿಸುತ್ತದೆ ಎಂಬ ಎಚ್ಚರಿಕೆಯನ್ನು ಸಹ ಅವರು ನೀಡುತ್ತಾರೆ. ಮುಂದುವರೆದು ಅವರು ಸಮಾಜದಲ್ಲಿ ಮೇಲ್ಜಾತಿ ಮತ್ತು ಕೆಳಜಾತಿಗಳ ಮಧ್ಯೆ ಏರ್ಪಡುತ್ತಿರುವ ಅಸಮಾನತೆಯ ಕಂದರದ ಬಗ್ಗೆ ಪ್ರಸ್ತಾಪಿಸುತ್ತಾ ಅಂತಹ ಅಸಮಾನತೆಯ ಕಂದರವನ್ನು ದೂರಗೊಳಿಸಲು ಅಸಮಾನತೆಗೆ ಒಳಗಾದ ಪರಿಶಿಷ್ಟರಿಗೆ ಉನ್ನತ ಶಿಕ್ಷಣ ನೀಡುವ ಮತ್ತು ರಕ್ಷಣೆ, ವಿಜ್ಞಾನ ತಂತ್ರಜ್ಞಾನ, ನ್ಯಾಯಾಂಗ ಹೀಗೆ ಈ ದೇಶದ ಪ್ರತಿಯೊಂದು ಕ್ಷೇತ್ರವನ್ನು ತೆರೆದಿಡುವ ಮಾತನಾಡುತ್ತಾರೆ. ಆ ಮೂಲಕ ಜನ್ಮತಃ ಮೂಡಿಬಂದಿರುವ ಈ ಅಸಮಾನತೆಯ ಜಾಡನ್ನು ಕಿತ್ತೊಗೆಯಬಹುದೆಂದು ಅವರು ಸಂದೇಶ ರವಾನಿಸುತ್ತಾರೆ. ಒಂದಂತು ನಿಜ, ಅಂಬೇಡ್ಕರರು ಪರಿಶಿಷ್ಟರಿಗೆ ನೀಡಲು ಬಯಸಿದ್ದು ಅ..ಆ..ಇ..ಈ.. ಕಲಿಸುವ ಪ್ರಾಥಮಿಕ ಶಿಕ್ಷಣವನ್ನಲ್ಲ. ಬದಲಿಗೆ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ವಿಜ್ಞಾನಿ ಇತ್ಯಾದಿ ಈ ದೇಶದ ಭವಿಷ್ಯ ರೂಪಿಸುವ ಸ್ಥಾನ ಕಲ್ಪಿಸುವ ಐ.ಎ.ಎಸ್, ಐ.ಪಿ.ಎಸ್, ಪಿ.ಎಚ್.ಡಿ, ಇತ್ಯಾದಿ ಅತ್ಯುನ್ನತ ಶಿಕ್ಷಣವನ್ನು. ಅಂದರೆ ಅಂಬೇಡ್ಕರರ ಪ್ರಕಾರ ಈ ದೇಶದ ಪ್ರತಿಯೊಬ್ಬ ಪರಿಶಿಷ್ಟನು ಕನಿಷ್ಟ ಪಕ್ಷ ವಿಶ್ವವಿದ್ಯಾನಿಲಯ ಮಟ್ಟದ ಎಂ.ಎ, ಎಂ.ಎಸ್ಸಿ, ಇತ್ಯಾದಿ ಸ್ನಾತಕೋತ್ತರ ಪದವಿ ಪಡೆಯಲೇಬೇಕು! ಅದೇ ಅವರ ನೈಜ ಆಶಯವಾಗಿತ್ತು.

ಬಡತನ ನಿರ್ಮೂಲನೆ:-

ಅಂಬೇಡ್ಕರ್ ಪಕ್ಷ ಎಂದ ಮೇಲೆ ಅದು ಕೇವಲ ಪರಿಶಿಷ್ಟರ ಮತ್ತು ಹಿಂದುಳಿದವರ ಏಳ್ಗೆಗಾಗಿಯಷ್ಟೆ ಕಾರ್ಯಕ್ರಮ ರೂಪಿಸುತ್ತದೆ ಎಂಬ ಭಾವನೆ ಮೂಡಬಹುದು. ಆದರೆ ಅವರ ಪಕ್ಷದ ಪ್ರಣಾಳಿಕೆಯ ಮುಂದುವರಿದ ಭಾಗ ನೋಡುವುದಾದರೆ ಅದು ಸುಳ್ಳೆಂದು ಸಾಬೀತಾಗುತ್ತದೆ. ಯಾಕೆಂದರೆ ಬಾಬಾಸಾಹೇಬರು ತಮ್ಮ ಪ್ರಣಾಳಿಕೆಯ ಆ ಭಾಗದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸುವುದು ಬಡತನ ನಿರ್ಮೂಲನೆಯನ್ನು. 'ಗರೀಬಿ ಹಟಾವೋ' ಎಂಬ ಕಾರ್ಯಕ್ರಮವನ್ನು ಇಂದಿರಾ ಗಾಂಧಿಯವರ ಸರ್ಕಾರ ರೂಪಿಸಿರಬಹುದು. ಆದರೆ 'ಗರೀಬಿ' ಎಲ್ಲಿ 'ಹಟಾವೋ' ಆಗಿದೆ? ಈ ನಿಟ್ಟಿನಲ್ಲಿ ಬಡತನದ ಬಗ್ಗೆ ಅಂಬೇಡ್ಕರರು ಅಂದು ರೂಪಿಸಿದ್ದ ಯೋಜನೆಗಳು ಸಾಕಾರಗೊಂಡಿದ್ದರೆ ಸಾಕಾಗಿತ್ತು. ಬಡತನ ಖಂಡಿತ ನಿರ್ಮೂಲನೆಯಾಗಿರುತ್ತಿತ್ತು. ಯಾಕೆಂದರೆ ಅಂಬೇಡ್ಕರ್‌ರವರು ಹೇಳಿರುವ ಹಾಗೆ 'ಬಡತನದ ಸಮಸ್ಯೆ ಎಂಬುದು ಎರಡಲಗಿನ ಕತ್ತಿಯ ಹಾಗೆ'. ಒಂದು ಕಡೆ ಕೃಷಿ ಉತ್ಪನ್ನದಲ್ಲಿ ಸಮೃದ್ಧಿ ತೋರಿದರೂ ಮತ್ತೊಂದು ಕಡೆ ಏರುತ್ತಿರುವ ಜನಸಂಖ್ಯೆಗೆ ಅದು ಏನೇನು ಸಾಲುವುದಿಲ್ಲ. ಈ ನಿಟ್ಟಿನಲ್ಲಿ ಜನಸಂಖ್ಯೆಯ ನಿಯಂತ್ರಣವನ್ನವರು ಪ್ರತಿಪಾದಿಸುತ್ತಾರೆ. ಇನ್ನು ಕೈಗಾರಿಕೆಯಲ್ಲಿ ಯಥೇಚ್ಛವಾಗಿ ಉತ್ಪತ್ತಿ ಇದ್ದರೂ ಅದು ಬಡವರನ್ನು ತಲುಪದಿರುವ ಬಗ್ಗೆ ಗಮನ ಸೆಳೆಯುವ ಅವರು ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಪ್ರತಿಪಾದಿಸುತ್ತಾರೆ. ಇದೇ ಸಂದರ್ಭದಲ್ಲಿ ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟುವ ಬಗ್ಗೆಯೂ ಬಾಬಾಸಾಹೇಬರು ಇಂಗಿತ ವ್ಯಕ್ತಪಡಿಸುತ್ತಾರೆ. ಒಟ್ಟಾರೆ ಶೀಘ್ರ ಕೈಗಾರಿಕೀಕರಣ, ಕೃಷಿ ಉತ್ಪನ್ನ ಹೆಚ್ಚಿಸುವುದು, ಅದೇ ಸಮಯದಲ್ಲಿ ಜನಸಂಖ್ಯೆ ನಿಯಂತ್ರಿಸುವುದು ಬಡತನ ನಿರ್ಮೂಲನೆಯ

ಸರಳ ಪರಿಹಾರೋಪಾಯವೆಂದು ಅಂಬೇಡ್ಕರರು ಕಂಡುಕೊಳ್ಳುತ್ತಾರೆ. ಅಂದಹಾಗೆ ಕೃಷಿಉತ್ಪನ್ನ ಹೆಚ್ಚಿಸುವ ನಿಟ್ಟಿನಲ್ಲಿ ಕೃಷಿಯ ಯಾಂತ್ರೀಕರಣ, ಸಾಕಷ್ಟು ರಸಗೊಬ್ಬರ ಪೂರೈಕೆ, ಆರೋಗ್ಯಕರ ಬಿತ್ತನೆ ಬೀಜ ಒದಗಿಸಬೇಕಾದ ಅಗತ್ಯತೆ ಹೇಳುವ ಅವರು ಸಣ್ಣ ಹಿಡುವಳಿಯ ಬದಲು ಬೃಹತ್ ಕೃಷಿ ಫಾರಂಗಳನ್ನು ಸ್ಥಾಪಿಸಬೇಕಾದ ಅಗತ್ಯತೆ ಅಂಬೇಡ್ಕರ್ ಪಕ್ಷದ ಪ್ರಮುಖ ಧ್ಯೇಯವಾಗಿತ್ತು.

ಆಂತರಿಕ ಆಡಳಿತ ಮತ್ತು ವಿದೇಶಾಂಗ ನೀತಿ:-

ಸ್ವಾತಂತ್ರ್ಯ ಆಗತಾನೆ ಬಂದಿದ್ದ ಆ ಸಮಯದಲ್ಲಿ ದೇಶದಲ್ಲಿ ಆಗ ಉಂಟಾದ ಕೆಲವು ಪ್ರಮುಖ ಸಮಸ್ಯೆಗಳನ್ನು ಅಂಬೇಡ್ಕರರು ಗುರುತಿಸಿದ್ದರು. ಅವುಗಳೆಂದರೆ ಭಾಷಾವಾರು ಪ್ರಾಂತ್ಯ ರಚನೆ, ಆಡಳಿತದಲ್ಲಿ ಪಾರದರ್ಶಕತೆ, ಬೆಲೆ ಏರಿಕೆ, ಹಣದುಬ್ಬರ ಇತ್ಯಾದಿ. ಅದರಲ್ಲೂ ಕಾಂಗ್ರೆಸ್ಸಿಗರು ಅಂದು ಬಂಡವಾಳಶಾಹಿಗಳಿಂದ ಹಣಪಡೆದು ಚುನಾವಣೆ ಗೆಲ್ಲುತ್ತಿದ್ದದ್ದು, ಪ್ರತಿಫಲವಾಗಿ ಬಂಡಾವಾಳಶಾಹಿಗಳಿಗೆ ದೇಶವನ್ನು ಅಡ ಇಡುವುದನ್ನು ಪ್ರಸ್ತಾಪಿಸುವ ಅಂಬೇಡ್ಕರ್‌ರವರು ಅದಕ್ಕೆ ತಡೆಯೊಡ್ಡಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ. ಈ ನಿಟ್ಟಿನಲ್ಲಿ ತಮ್ಮ ಪಕ್ಷ ಬೃಹತ್ ಬಂಡವಾಳಿಗರಿಗೆ ಈ ದೇಶದ ಆಡಳಿತ ವ್ಯವಸ್ಥೆಯನ್ನು ಒಪ್ಪಿಸುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಎಂದು ಎಚ್ಚರಿಕೆಯ ನುಡಿಗಳನ್ನು ನುಡಿಯುತ್ತಾರೆ. ಈ ನಡುವೆ ಅಂದಿನ ನೆಹರು ಸರ್ಕಾರದ ವಿದೇಶಾಂಗ ನೀತಿಯನ್ನು ಟೀಕಿಸುವ ಅವರು ಅಕ್ಕ ಪಕ್ಕದ ದೇಶಗಳ ಜೊತೆ ಒಳ್ಳೆಯ ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳುವುದರ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ. ಪ್ರಮುಖವಾಗಿ ಕಾಶ್ಮೀರ ವಿಷಯ ಪ್ರಸ್ತಾಪಿಸುವ ಅವರು ಮುಸ್ಲಿಂ ಬಾಹುಳ್ಯ ಕಾಶ್ಮೀರವನ್ನು ಪಾಕಿಸ್ತಾನಕ್ಕೂ ಜಮ್ಮು ಮತ್ತು ಲಡಾಕ್ ಪ್ರಾಂತ್ಯಗಳನ್ನು ಭಾರತಕ್ಕೂ ಸೇರಿಸಿ ಆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬಹುದೆನ್ನುತ್ತಾರೆ. ದುರಂತವೆಂದರೆ ಕಾಶ್ಮೀರದ ಬಗ್ಗೆ ಅಂಬೇಡ್ಕರರು ಅಂದು ಸೂಚಿಸಿದ ಆ ಪರಿಹಾರ ಇನ್ನೂ ಜಾರಿಯಾಗದೆ, ಆ ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆಯಲ್ಲಾ ಎಂಬುದು.

ಅಂದಹಾಗೆ ಬಡತನ ನಿರ್ಮೂಲನೆ, ಕೃಷಿಕ್ಷೇತ್ರ ವಿಸ್ತರಿಸುವುದು, ಬೃಹತ್ ನೀರಾವರಿ ಯೋಜನೆ, ಕೈಗಾರಿಕೀರಣ ಇತ್ಯಾದಿ ಆಶ್ವಾಸನೆ ನೀಡುವ ಅಂಬೇಡ್ಕರರಿಗೆ ಅದಕ್ಕೆಲ್ಲಾ ಸಂಪನ್ಮೂಲ ಸಂಗ್ರಹದ ಅಗತ್ಯತೆಯೂ ಕಂಡಿರಬೇಕಲ್ಲವೇ? ಹೌದು ಅದಕ್ಕಾಗಿ ಅವರು ರಕ್ಷಣಾ ವೆಚ್ಚವನ್ನು ತಗ್ಗಿಸುವ- ಮಾತನ್ನಾಡುತ್ತಾರೆ. ವಿಶೇಷವಾಗಿ ಕಾಶ್ಮೀರ ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸಿಕೊಂಡರೆ ಶೇ.೫೦ ರಕ್ಷಣಾ ವೆಚ್ಚ ಉಳಿಸಬಹುದು ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತಾರೆ. ವಿಷಾದನೀಯವೆಂದರೆ ಈಗಲೂ ಕೇಂದ್ರ ಬಜೆಟ್‌ನಲ್ಲಿ ರಕ್ಷಣಾ ವೆಚ್ಚ ವರ್ಷಂಪ್ರತಿ ದ್ವಿಗುಣಗೊಳ್ಳುತ್ತಲೆ ಇದೆ. ಅಂಬೇಡ್ಕರ್‌ರವರು ಸೂಚಿಸಿದ ಪರಿಹಾರ ಸಾಧ್ಯವಾಗಿಯೇ ಇಲ್ಲ. ಸಂಪನ್ಮೂಲ ಸಂಗ್ರಹದ ಬಗ್ಗೆ ಅವರು ಸೂಚಿಸುವ ೨ನೇ ಪರಿಹಾರ ಉಪ್ಪಿನ ಕರ ವಿಧಿಸುವ ಬಗ್ಗೆ. ಹೌದು, ಸ್ವಾತಂತ್ರ್ಯ ಬಂದ ನಂತರ ಗಾಂಧಿಜೀಯವರ ಒತ್ತಾಯದ ಮೇರೆಗೆ ಉಪ್ಪಿನ ಮೇಲಿನ ತೆರಿಗೆಯನ್ನು ಹಿಂಪಡೆಯಲಾಯಿತು. ಆದರೂ ಉಪ್ಪಿನ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಾಗಿರಲಿಲ್ಲ. ಬದಲಿಗೆ ಸರ್ಕಾರದ ಬೊಕ್ಕಸಕ್ಕೆ ೧೧ಕೋಟಿ

ರೂಪಾಯಿ ನಷ್ಟವಾಯಿತು. ಈ ಬಗ್ಗೆ ಪ್ರಸ್ತಾಪಿಸುವ ಅಂಬೇಡ್ಕರ್‌ರವರು ಉಪ್ಪಿನ ಮೇಲೆ ತೆರಿಗೆ ವಿಧಿಸಿ ಆ ನಷ್ಟವನ್ನು ಭರ್ತಿ ಮಾಡುವ ಆಶ್ವಾಸನೆ ನೀಡುತ್ತಾರೆ. ಮುಂದುವರೆದ ಮದ್ಯಪಾನ ನೀಷೇಧದಿಂದ ಬೊಕ್ಕಸಕ್ಕೆ ನಷ್ಟವಾಗಿರುವ ಮತ್ತು ಅಂತಹ ನಿಷೇಧದಿಂದ ಮದ್ಯ ತಯಾರಿಕೆ ಕಳ್ಳಭಟ್ಟಿಯ ರೂಪ ಪಡೆದು, ಗೃಹ ಕೈಗಾರಿಕೆಯಾಗಿ ರೂಪುಗೊಂಡು ಹೆಂಗಸರು ಮಕ್ಕಳೆನ್ನದೆ ಮನೆಮಂದಿಯೆಲ್ಲಾ ಕುಡಿಯಲು ಪ್ರಾರಂಭಿಸಿರುವುದನ್ನು ಗುರುತಿಸುವ ಅವರು ಮದ್ಯಪಾನ ನಿಷೇಧವನ್ನು ಹಿಂಪಡೆಯಬೇಕಾದುದರ ಬಗ್ಗೆ ತಮ್ಮ ಆ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸುತ್ತಾ ಆ ಮೂಲಕ ಬೊಕ್ಕಸಕ್ಕೆ ಪ್ರತಿವರ್ಷ ೮.೭ಕೋಟಿ ರೂಪಾಯಿ ನಷ್ಟ ಉಂಟಾಗುವುದನ್ನು ತಡೆಗಟ್ಟ ಬಹುದು ಎನ್ನುತ್ತಾರೆ. ಹಾಗೆಯೇ ಸಂಪನ್ಮೂಲ ಕ್ರೋಢೀಕರಣದ ನಿಟ್ಟಿನಲ್ಲಿ ಜೀವ ವಿಮೆಯನ್ನು ರಾಷ್ಟ್ರೀಕರಿಸಬೇಕಾದ ಅಗತ್ಯತೆಯನ್ನು ಅವರು ಪ್ರಸ್ತಾಪಿಸುತ್ತಾರೆ. ಅಂದಹಾಗೆ ಅಂಬೇಡ್ಕರರ ಈ ಒತ್ತಾಯದ ಫಲವಾಗಿಯೇ ಎಲ್.ಐ.ಸಿ (ಭಾರತೀಯ ಜೀವನ್ ಭೀಮಾ ನಿಗಮ್) ಪ್ರಾರಂಭವಾದದ್ದು ಎಂಬುದು ಬಹುತೇಕರಿಗೆ ತಿಳಿದಿಲ್ಲ! ಆದರೆ ಅದು ನಿಜ.

ಒಂದು ಪ್ರಶ್ನೆ, ರಾಜಕೀಯ ಪಕ್ಷವೆಂದ ಮೇಲೆ ಅದು ಯಾರ ಜೊತೆಯಾದರು ಹೋಂದಾಣಿಕೆ ಮಾಡಿಕೊಂಡು ಚುನಾವಣೆ ಎದುರಿಸಲೇ ಬೇಕಲ್ಲವೆ? ಆದರೆ ಅಂಬೇಡ್ಕರರು ಅಂತಹ ಯಾವುದೇ ಹೊಂದಾಣಿಕೆಯನ್ನು ಖಂಡತುಂಡವಾಗಿ ನಿರಾಕರಿಸುತ್ತಾರೆ. ಅವರದೇ ಮಾತುಗಳನ್ನು ಹೇಳುವುದಾದರೆ "ನಮ್ಮ ಪಕ್ಷ ಅಂದರೆ ಎಸ್.ಸಿ.ಎಫ್, ಹಿಂದೂ ಮಹಾಸಭೆ ಅಥವಾ ಆರ್.ಎಸ್.ಎಸ್ ನಂತಹ ಯಾವುದೇ ಪ್ರತಿಕಯಾತ್ಮಕ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳವುದಿಲ್ಲ, ಸರ್ವಾಧಿಕಾರಿ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತದೆ. ಪಾರ್ಲಿಮೆಂಟರಿ ವ್ಯವಸ್ಥೆಯನ್ನು ನಾಶಗೊಳಿಸುತ್ತದೆ. ಎಂಬ ಕಾರಣಕ್ಕೆ ಕಮ್ಯುನಿಸ್ಟರ ಜೊತೆ ಕೂಡ ಹೊಂದಾಣಿಕೆ ಮಾಡಿಕೊಳ್ಳವುದಿಲ್ಲ. ಹಾಗೆಯೇ ತಾನೇ ಎಲ್ಲಾ ತನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎಂದು ವಿರೋಧ ಪಕ್ಷದ ಅಸ್ತಿತ್ವವನ್ನೆ ವಿರೋಧಿಸುವ ಕಾಂಗ್ರೆಸ್ ಪಕ್ಷದ ಜೊತೆ ಕೂಡ ತಮ್ಮ ಪಕ್ಷ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ" ಎನ್ನುತ್ತಾರೆ ಹೀಗಿದ್ದರೂ ಅಂಬೇಡ್ಕರರು ಒಂದು ಚುನಾವಣಾ ಪೂರ್ವ ಹೊಂದಾಣಿಕೆಯನ್ನು ಪ್ರತಿಪಾದಿಸುತ್ತಾರೆ. ಅದೆಂದರೆ ಪಕ್ಷಗಳ ಜೊತೆಗಿನ ಹೊಂದಾಣಿಕೆಯಲ್ಲ. ಬದಲಿಗೆ ಸಮುದಾಯಗಳ ಜೊತೆಗಿನ ಹೊಂದಾಣಿಕೆ! ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳು(ಓಬಿಸಿ)ಮತ್ತು ಪರಿಶಿಷ್ಟವರ್ಗ(ಎಸ್ಟಿ)ಗಳ ಜೊತೆ ಸಹಯೋಗದಿಂದ ಕೆಲಸ ಮಾಡಬೇಕಾದ ಅಗತ್ಯತೆಯನ್ನು ಪ್ರತಿಪಾದಿಸುವ ಅವರು ಹಿಂದುಳಿದ ವರ್ಗಗಳನ್ನು ಒಳಗೊಳ್ಳುವ ಈ ನಿಟ್ಟಿನಲ್ಲಿ ಸಾಧ್ಯವಾದರೆ ತಮ್ಮ ಪಕ್ಷದ ಹೆಸರಾದ "ಆಲ್ ಇಂಡಿಯಾ ಷಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್" ಅನ್ನು "ಆಲ್ ಇಂಡಿಯಾ ಬ್ಯಾಕ್‌ವರ್ಡ್ ಕ್ಲಾಸ್ ಫಡರೇಷನ್" ಎಂದು ಬದಲಿಸಿಕೊಳ್ಳಲು ಕೂಡ ಸಿದ್ಧ ಎಂದು ಘೋಷಿಸುತ್ತಾರೆ. ಈ ನಡುವೆ ಸಮಾನ ಮನಸ್ಕ ಪಕ್ಷಗಳು ಸೇರಿಕೊಂಡು ರಂಗಗಳನ್ನು ರಚಿಸಿಕೊಳ್ಳಬೇಕಾದ ಅಗತ್ಯತೆಯನ್ನು ಹೇಳುವ ಅಂಬೇಡ್ಕರರು ಅಂತಹ ಪಕ್ಷಗಳು ತಮ್ಮ ಸಿದ್ಧಾಂತದ ನಿಟ್ಟಿನಲ್ಲಿ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಎನ್ನುತ್ತಾರೆ. ಈ ದಿಸೆಯಲ್ಲಿ

ಅಂದಿನ ಸೋಷಿಯಲಿಸ್ಟ್ ಪಾರ್ಟಿ, ತಮಿಳುನಾಡಿನ ಪೆರಿಯಾರರ ಜಸ್ಟಿಸ್ ಪಾರ್ಟಿ ಇತ್ಯಾದಿಗಳ ಜತೆ ಕೆಲವು ಪೂರ್ವ ನಿಲುವಿನ ಶರತ್ತುಗಳ ಜೊತೆ ಒಂದು ರಂಗವನ್ನು ರೂಪಿಸಿಕೊಳ್ಳವ ಇಂಗಿತವನ್ನವರುವ್ಯಕ್ತಪಡಿಸುತ್ತಾರೆ.

ಅದೇನೆ ಇರಲಿ ೧೯೫೧ರ ಅಕ್ಟೋಬರ್ ೬ರಂದು ನವದೆಹಲಿಯ ತಮ್ಮ ನಿವಾಸದಲ್ಲಿ ನಡೆದ ತಮ್ಮ ಪಕ್ಷದ ಸಭೆಯಲ್ಲಿ ಅವರು ಬಿಡುಗಡೆಗೊಳಿಸಿದ ಆ ಪ್ರಣಾಳಿಕೆ ಎಲ್ಲ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಿಗೆ ಆದರ್ಶಪ್ರಾಯವಾಗುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ. ಯಾಕೆಂದರೆ ಅಂಬೇಡ್ಕರರು ತಮ್ಮ ಪಕ್ಷದ ಪರವಾಗಿ ಅಂದು ಘೋಷಿಸಿದ ಕನಿಷ್ಟ ಪ್ರಮಾಣದ ಯೋಜನೆಗಳು ಇಂದಿಗೂ ಕೂಡ ಜಾರಿಯಾಗಿಲ್ಲ. ಹಣದುಬ್ಬರ ನಿಯಂತ್ರಣಗೊಂಡಿಲ್ಲ, ಬಂಡವಾಳಿಗರ ಹಿಡಿತ ಕಡಿಮೆಯಾಗಿಲ್ಲ, ರಾಷ್ಟ್ರೀಕರಣಗೊಂಡಿದ್ದ ಕೈಗಾರಿಕೆಗಳು ಖಾಸಗೀಕರಣಗೊಂಡಿವೆ, ಕಪ್ಪು ಹಣ ದಂಧೆಯ ವಿರುದ್ಧ ಕ್ರಮ ಜರುಗಿಸಲಾಗಿಲ್ಲ. ಭ್ರಷ್ಟಚಾರದ ವಿರುದ್ಧವಂತೂ ಕೇಂದ್ರಸರ್ಕಾರ ಮೂಗು ಕಿವಿ ಮುಚ್ಚಿ ಕುಳಿತಿದೆ! ಒಟ್ಟಾರೆ ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯ ಮೂಲಕ ಅಂಬೇಡ್ಕರರು ಕಂಡ ಬಹುತೇಕ ಕನಸುಗಳು ನನಸಾಗದೇ ಹಾಗೆ ಉಳಿದಿವೆ. ಈ ನಿಟ್ಟಿನಲ್ಲಿ ಸಮಾಧಾನ ಪಟ್ಟುಕೊಳ್ಳವ ವಿಷಯವೆಂದರೆ ಅವರು ರೂಪಿಸಿದ ರಾಜಕೀಯ ಹೊಂದಾಣಿಕೆ ಸಿದ್ಧಾಂತ ಅಲ್ಲಲ್ಲಿ ಯಶಸ್ವಿಯಾಗಿರುವುದು. ಉದಾಹರಣೆಗೆ ಅಂಬೇಡ್ಕರರು ಪರಿಶಿಷ್ಟಜಾತಿ ಜನರು ಓಬಿಸಿಗಳ ಜೊತೆ ಹಾಗೂ ಎಸ್‌ಟಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡಬೇಕೆಂದು ಹೇಳಿದ್ದರು. ಅದರಂತೆ ಎಸ್.ಸಿ/ಎಸ್.ಟಿ/ಓಬಿಸಿ/ಧಾರ್ಮಿಕ ಅಲ್ಪಸಂಖ್ಯಾತರನ್ನೊಳಗೊಂಡ ಅಂದರೆ 'ಬಹುಜನ'ರನ್ನು ಒಳಗೊಂಡ 'ಬಹುಜನ ಸಮಾಜ ಪಕ್ಷ' ಅಸ್ತಿತ್ವಕ್ಕೆ ಬಂದಿದೆ. ಸಮಗ್ರ ಕೈಗಾರಿಕೀಕರಣವನ್ನು ಅವರು ಬಯಸಿದ್ದರು ಅದು ಕೂಡ ಸಾಧ್ಯವಾಗಿದೆ. ಆದರೆ ಸಾಧ್ಯವಾಗದ್ದೆಂದರೆ ರಕ್ಷಣಾವೆಚ್ಚದ ಕಡಿತ. ಕಡಿತವಾಗುವುದಿರಲಿ ಅದು ಇನ್ನು ಏರುತ್ತಲೇ ಇದೆ. ಹಾಗೆ ಕಾಶ್ಮೀರ ಸಮಸ್ಯೆ ಪರಿಹಾರವಾಗಿಲ್ಲ. ಅದು ಇನ್ನು ಕಗ್ಗಂಟಾಗಿಯೇ ಇದೆ.

ಒಂದಂತು ನಿಜ, ದೇಶದ ಸಮಸ್ಯೆಗಳನ್ನು ಬಗೆಹರಿಸುವ, ದೇಶದ ಜನರ ಬದುಕನ್ನು ನೆಮ್ಮದಿಯಾಗಿಡುವ ಅಪೇಕ್ಷೆ ಈ ದೇಶದ ರಾಜಕೀಯ ಪಕ್ಷಗಳಿಗಿದ್ದರೆ ಅವು ಅಂಬೇಡ್ಕರರು ತಮ್ಮ ಪಕ್ಷಕ್ಕಾಗಿ ಅಂದು ರೂಪಿಸಿದ ಆ ಪ್ರಣಾಳಿಕೆಯತ್ತ ಕಣ್ಣು ಹಾಯಿಸಬೇಕಿದೆ. ಸಾಧ್ಯವಾದರೆ ಅವು ಅಂಬೇಡ್ಕರರ ಆ ಶ್ರೇಷ್ಠ ಪ್ರಣಾಳಿಕೆಯನ್ನು ತಮ್ಮದಾಗಿಸಿಕೊಳ್ಳಲಿ.

(ಸಾಭಾರ : ಸಂವಾದ)

ಠಾಕೂರದಾಸ್ ಬಂಗ್
ಸರ್ವೋದಯದ ಅರ್ಜುನ

– ನಾರಾಯಣ ದೇಸಾಯಿ

೧೯೫೨ನೇ ಇಸಿವಿಯ ಪ್ರಾರಂಭದ ಕಾಲ. ವಾರಣಾಸಿ ಬಳಿ ಇರುವ ಸೇವಾಪೂರಿ ಎಂಬ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ಸರ್ವೋದಯ ಸಮಾಜದ ವಾರ್ಷಿಕ ಸಮ್ಮೇಳನ ಆಯೋಜಿತಗೊಂಡಿತ್ತು. ಸ್ವಾತಂತ್ರ್ಯದ ನಂತರ ಅನೇಕ ಗಾಂಧಿ ಭಕ್ತರು ಹೃದಯ ಮಂಥನ ಮಾಡಿದ ಕಾಲವದಾಗಿತ್ತು. ೩೦ ವರ್ಷಗಳ ಅಹಿಂಸಕ ಸಂಘರ್ಷಣೆಯ ನಂತರ ದೇಶದ ವಿಭಜನೆಯೊಂದಿಗೆ ಸ್ವಾತಂತ್ರ್ಯಗೊಂಡಿತ್ತು. ಅನೇಕ ಸುಪ್ರಸಿದ್ಧ ರಾಷ್ಟ್ರ ಸೇವಕರು ಅಧಿಕಾರದ ಚುಕ್ಕಾಣಿ ಹಿಡಿಯುವುದು ಸ್ವರಾಜ್ಯೋತ್ತರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕಾಗಿ ಪೈಪೂಟಿ ನಡೆಸಿದರು. ಅದೇ ಸಮಯದಲ್ಲಿ ಮೊದಲಿನಿಂದಲು ರಚನಾತ್ಮಕ ಕಾರ್ಯದಲ್ಲಿ ತೊಡಗಿದ್ದ ಗಾಂಧೀ ಜೊತೆಗಾರರಿಗೆ ಅಧಿಕಾರದಿಂದ ದೂರ ಇದ್ದು ಲೋಕಸೇವೆಯಲ್ಲಿ ದೃಢವಾಗಿ ನಿಲ್ಲಬೇಕೆಂಬ ಸಲಹೆಯನ್ನು ಆಚಾರ್ಯ ವಿನೋಬಾ ಭಾವೆಯವರು ಕೊಟ್ಟಿದ್ದರು. ಸುಮಾರು ೩ ವರ್ಷದವರೆಗೆ ಸರ್ವೋದಯ ಕಾರ್ಯಕರ್ತರು ಬಾಪು ನಂತರದ ಈ ವೇಳೆಯಲ್ಲಿ ತಾವೇನು ಮಾಡಬೇಕು ಎಂಬುದರ ಬಗ್ಗೆ ಗೊಂದಲದಲ್ಲಿ ಬಿದ್ದಿದ್ದರು.

ವಿನೋಬಾರವರು ೧ ವರ್ಷದವರೆಗೆ ಇಡೀ ದೇಶದ ತುಂಬಾ ಶಾಂತಿಯಾತ್ರೆ ಕೈಗೊಂಡು ತದನಂತರ ಪಾದಯಾತ್ರೆ ಮಾಡುವ ನಿರ್ಣಯ ತೆಗೆದುಕೊಂಡರು ಮತ್ತು ತೆಲಂಗಾಣದಿಂದ ಪಾದಯಾತ್ರೆ ಪ್ರಾರಂಭಿಸಿ ಭೂಧಾನಯಜ್ಞ ಆರಂಭಿಸಿದರು, ಸೇವಾಪೂರಿಯ ಸರ್ವೋದಯ ಸಮ್ಮೇಳನದ ನಂತರ ನಡೆದ ವಿನೋಬಾರವರ ಏಕ ವ್ಯಕ್ತಿ ಪಾದಯಾತ್ರೆಯ ನಂತರ ಆಗಬೇಕಾಗಿರುವ ಕೆಲಸಕಾರ್ಯಗಳ ಬಗ್ಗೆ ಮೂಲ್ಯಾಂಕನ ಮಾಡಿ ಮುಂದಿನ ಕಾರ್ಯದ ದಿಕ್ಕುಸೂಚಿಯನ್ನು ನಿರ್ಣಯಿಸಬೇಕಾದ ಒಂದು ಐತಿಹಾಸಿಕ ಅವಕಾಶವಾಗಿತ್ತು. ಸೇವಾಪೂರಿಯಲ್ಲಿ ನೆರದಿದ್ದ ಬಹುಸಂಖ್ಯಾತ ಕಾರ್ಯಕರ್ತರು ವಿನೋಬಾರವರ ಮಾತುಗಳನ್ನು ಕೇಳಲು ಉತ್ಸುಕರಾಗಿದ್ದರು ಹಾಗೂ ವಿನೋಬಾರ ಏಕವ್ಯಕ್ತಿಯಜ್ಞದಲ್ಲಿ ಯಾರು ಯಾರು ಸಹಯೋಗ ಕೊಡಲು ಸಿದ್ಧರಿದ್ದಾರೆ ಎಂಬುದು ತಿರ್ಮಾನವಾಗಬೇಕಿತ್ತು.

ಅನೇಕ ವ್ಯಾಖ್ಯಾನಗಳ ನಂತರ ಓರ್ವ ತರುಣ ಮಾತನಾಡುವುದಕ್ಕೆ ಎದ್ದು ನಿಂತ. ಆತನ ವ್ಯಾಖ್ಯಾನ ಕೇಳುತ್ತಲೆ ನನ್ನ ಮುಖದಿಂದ "ಆಹಾ ಈತ ಅರ್ಜುನನ ರಥದ ಗಾಲಿಯ ಕೀಲಿನಂತೆ ಇದ್ದಾನೆ" ಎಂಬ ಉದ್ಗಾರ ಬಂದಿತು. ವಿನೋಬಾರವರ ಪಾಂಚಜನ್ಯದ ನಂತರ ಎರಡನೆಯ ಶಂಖನಾದ ೩೦-೩೨ ವರ್ಷದ ಧನಂಜಯ ಪ್ರೊಫೆಸರ್ ಠಾಕೂರದಾಸ ಬಂಗರದಾಗಿತ್ತು.

ಇತಿಹಾಸದ ಇಂತಹ ತಿರುವಿನ ಕಾಲದಲ್ಲಿ ಅಧಿಕಾಂಶ ತೇಜಸ್ವಿ ಭಾರತೀಯರ ದೃಷ್ಟಿ ದಿಲ್ಲಿಯ ಮೇಲೆ ನೆಟ್ಟಿತ್ತು. ಆಗ ಎಣಿಕೆ ಮಾಡುವಷ್ಟು ಕೆಲ ತೇಜಸ್ವಿ ತರುಣರು

ಕೇವಲ ತಮ್ಮ ಗಮನ ಕೊಡುವುದಷ್ಟೆ ಅಲ್ಲ, ತಮ್ಮ ಇಡೀ ಶಕ್ತಿಯನ್ನು ಭಾರತದ ದರಿದ್ರ ನಾರಯಣನ ಸೇವೆಗಾಗಿ ಸಮರ್ಪಿತ ಮಾಡಿದರು. ಪ್ರೊಫೆಸರ್ ಠಾಕೂರ ದಾಸ್ ಬಂಗ್ ಒಂದು ವೇಳೆ ಮನಸ್ಸು ಮಾಡಿದ್ದರೆ ದೇಶದ ಮುಖ್ಯ ಪ್ರವಾಹದ ಜೀವನದಲ್ಲಿ ಬಹಳ ದೊಡ್ಡ ಸ್ಥಾನವನ್ನು ಪಡೆಯಬಹುದಾಗಿತ್ತು. ಅರ್ಥಶಾಸ್ತ್ರದ ವಿಷಯದಲ್ಲಿ ಉಚ್ಚತಮ ಪದವಿಯನ್ನು ಪಡೆದು, ೫–೬ ವಿಷಯಗಳಲ್ಲಿ ಸ್ವರ್ಣ ಪದಕ ಪಡೆದು, ಇನ್ನು ಹೆಚ್ಚಿನ ಮೇಲೆತ್ತರದ ಹಾರುವಿಕೆ ಉದ್ದೇಶದಿಂದ ಅವರು ಅಮೇರಿಕಾದ ಯಾವುದಾದರೊಂದು ವಿಶ್ವವಿದ್ಯಾಲಯವನ್ನು ಸೇರಲು ಎಲ್ಲಾ ಕಾಗದ ಪತ್ರಗಳನ್ನು ಸಿದ್ಧಮಾಡಿದರು. ವಿಸಾ ಕೂಡಾ ಸಿಕ್ಕಿತ್ತು. ತಾವು ವಿದೇಶಕ್ಕೆ ಹೊರಡುವ ಮುನ್ನ ಬಾಪುರ ಆರ್ಶಿವಾದ ಪಡೆಯಬೇಕೆಂದು ಯೋಚಿಸಿದರು. ಸೇವಾ ಗ್ರಾಮ ತಲುಪಿದರು ಮತ್ತು ಬಾಪುವಿನ ಪಾದಗಳ ಮೇಲೆ ತಲೆಯಿಟ್ಟು ತಾವು ಓದುವುದಕ್ಕಾಗಿ ಅಮೇರಿಕಾಗೆ ಹೋಗುತ್ತಿರುವುದಾಗಿಯೂ ತಮ್ಮ ಆರ್ಶಿವಾದ ಬೇಕೆಂದು ಹೇಳಿದರು. ಆಗ ಬಾಪೂ ಸಹಜವಾಗಿಯೇ ಯಾವ ವಿಷಯದ ಬಗ್ಗೆ ಓದಲು ಹೋಗುತ್ತಿದ್ದಿಯಾ ಎಂದು ಕೇಳಿದರು? ಠಾಕೂರ ದಾಸ್ ಬಂಗ್ ಅರ್ಥಶಾಸ್ತ್ರ ಅಧ್ಯಯನ ಎಂದು ಹೇಳಿದರು. ಆಗ ಬಾಪೂ ಬಹಳ ಸಹಜವಾಗಿ, "ಅರ್ಥಶಾಸ್ತ್ರ ಕಲಿಯುವುದಾಗಿದ್ದರೆ ಅಮೇರಿಕಾಕ್ಕೆ ಅಲ್ಲ, ಭಾರತದ ಹಳ್ಳಿಗಳಿಗೆ ಹೋಗಬೇಕು" ಎಂದು ಹೇಳಿದರು.

ಈ ಒಂದು ವಾಕ್ಯ ಅರ್ಥಶಾಸ್ತ್ರದ ತೇಜಸ್ವಿ ವಿದ್ಯಾರ್ಥಿ ಠಾಕೂರ ದಾಸರನ್ನು ಆಜೀವನ ಸೇವಕನನ್ನಾಗಿ ಬದಲಾಯಿಸಿಬಿಟ್ಟಿತು. ಇಂದು ಹಿಂದಿರುಗಿ ನೋಡಿದಾಗ ಸೇವಾಪೂರಿಯಲ್ಲಿ ಮೊದಲ ಭೇಟಿಯ ಸಂದರ್ಭದಲ್ಲಿ ನನ್ನ ಮನಸ್ಸಿನಲ್ಲಿ ಮೊದಲು ಅನಾಯಸವಾಗಿ ಅರ್ಜುನನೊಂದಿಗೆ ಅವರ ಹೋಲಿಕೆ ಮಾಡಿದ್ದು ಅನೇಕ ಅರ್ಥದಲ್ಲಿ ಸರಿಯಾಗಿತ್ತು. ತಮ್ಮ ಗುರಿಯ ಮೇಲೆ ಇದ್ದ ಅಚಂಚಲವಾದ ದೃಷ್ಟಿ ಸೇವಾಪೂರಿಯಿಂದ ಹೊರಟು ಯಾವ ದಾರಿಯನ್ನು ಹಿಡಿಯರ್ತೋ ಆ ದಾರಿಯಲ್ಲಿ ದೃಢವಾಗಿ ನಿಂತಿತು. ಅದು ಜೆ.ಸಿ.ಕುಮಾರಪ್ಪನವರೊಂದಿಗೆ ವ್ಯವಸಾಯ ಮಾಡುವುದಾಗಿರಬಹುದು, ಭೂಧಾನಕ್ಕಾಗಿ ಪ್ರಾರಂಭದಲ್ಲಿ ವಿಧರ್ಬದಲ್ಲಿ ಮತ್ತು ನಂತರ ದೇಶದ ಅನೇಕ ಹಳ್ಳಿಗಳಿಗೆ ಹೋಗಿದ್ದಾಗಿರಬಹುದು. ಗುರಿಯಂತು ಭಾರತದ ನೈಜ ಅರ್ಥಶಾಸ್ತ್ರವನ್ನು ಕಲಿಯುವುದು/ಕಲಿಸುವುದೇ ಆಗಿತ್ತು.

ಸೇವಾಪೂರಿ ಸಮ್ಮೇಳನದ ಕೆಲವು ದಿನ ಮೊದಲು ಡಾ॥ ರಾಮ ಮನೋಹರ ಲೋಹಿಯಾರ ಒಂದು ಟಿಪ್ಪಣಿ ಪ್ರಕಟವಾಗಿತ್ತು. ವಿನೋಬಾರವರು ಒಂದು ವರ್ಷದಲ್ಲಿ ಒಂದು ಲಕ್ಷ ಎಕೆರೆ ಜಮೀನನ್ನು ಪಡೆದಿರುವುದಾದರೆ ೫ಕೋಟಿ ಎಕರೆ ಭೂಮಿ ಪಡೆಯುವುದಕ್ಕಾಗಿ ೫೦೦ ವರ್ಷ ಬೇಕಾಗಬಹುದು ಎಂದು ಬರೆದಿದ್ದರು. ಗಣಿತಜ್ಞ ವಿನೋಬಾ ಸುತ್ತಾಡುವುದರಿಂದ ೫೦೦ ವರ್ಷ ಬೇಕಾಗಬಹುದಾದರೆ ಒಂದು ವೇಳೆ ಡಾ॥ ಲೋಹಿಯಾರ ಸಹಕಾರ ದೊರೆಯುವುದಾದರೆ ಆ ಕೆಲಸ ೨೫೦ ವರ್ಷಗಳಲ್ಲಿ ಪೂರ್ಣಗೊಳ್ಳವುದೆಂದು ಹೇಳಿದರು. ಈ ಸಾಮಾಜಿಕ ಗಣಿತವನ್ನು ಗಮನದಲ್ಲಿರಿಸಿಕೊಂಡು ಸರ್ವ ಸೇವಾ ಸಂಗ ಮುಂದಿನ ೨ ವರ್ಷಗಳಲ್ಲಿ ೨೫ಲಕ್ಷ ಎಕರೆ ಭೂಮಿಯನ್ನು ಪಡೆಯುವ ಸಾಹಸಿ ಸಂಕಲ್ಪ ಮಾಡಿದರು. ಈ ಸಂಕಲ್ಪ ಉಳಿಯಲು ಹಾಗೂ ಅದು ಪೂರ್ಣಗೊಳ್ಳಲು ಬಹು ಪ್ರಮುಖವಾದ ಸಹಾಯ ಠಾಕೂರದಾಸ ಬಂಗರದಾಗಿತ್ತು.

ಬಂಗರಲ್ಲಿ ಎಷ್ಟೊಂದು ಸರಳತೆಯಿತ್ತೊ ಅಷ್ಟೇ ಚುರುಕಾದ ಬುದ್ಧಿ ಮತ್ತು

ಅಷ್ಟೇ ಸ್ವಾತಂತ್ರ್ಯಪೂರ್ಣ ಸ್ವಾಧ್ಯಾಯ ಕೂಡಿತ್ತು. ಆರು ದಶಕಗಳ ಅನವರತ ಕರ್ಮಯೋಗದ ಜೊತೆ ಜೊತೆಯಲ್ಲಿ ಅಧ್ಯಯನವೂ ಕೂಡ ನಿರಂತರವಾಗಿತ್ತು. ಸತತವಾದ ಓಡಾಟದ ಮಧ್ಯೆಯೂ ಮತ್ತು ಅಂತಿಮ ವರ್ಷಗಳಲ್ಲಿ ಔಷಧಿಗಳ ಡಬ್ಬಿಗಳನ್ನು ಜೊತೆಗಿಟ್ಟುಕೊಂಡು ಬಂಗರು ಸಂಪೂರ್ಣ ಗಾಂಧೀ ಸಾಹಿತ್ಯದ ನೂರು ಗ್ರಂಥಗಳನ್ನು ಮೊದಲಿನಿಂದ ಕೊನೆಯವರೆಗೂ ಓದಿದರು. ಇಷ್ಟೇ ಅಲ್ಲ. ಡಾ॥ ರಾಮ ಮನೋಹರ ಲೋಹಿಯಾರ ಲಿಖಿತ ಪೂರಾಸಾಹಿತ್ಯವನ್ನು ಓದಿದ್ದರು. ಈ ಎಲ್ಲ ಸ್ವಾಧ್ಯಾಯದ ದಿನ ನಿತ್ಯದ ಅಧ್ಯಯನದ ಹೊರತಾಗಿ ಯಾವುದು ಅವರ ಎದುರಿಗೆ ಆತ್ಯಾಧುನಿಕ ಸಾಹಿತ್ಯದ ರೂಪದಲ್ಲಿ ಬರಿಸಿತೂ ಅದನ್ನು ಕೂಡ ಓದುತ್ತಿದ್ದರು. ಅರ್ಜುನನಿಗೆ ದೊರೆಯುತ್ತಿದ್ದ ಸದಾ ಸಫಲತೆ ಪ್ರಾಪ್ತವಾಗದಿದ್ದರೂ ಅನ್ಯಾಯದ ವಿರುದ್ಧ ಹೋರಾಡುವ ಅವರ ವೃತ್ತಿ ಎಂದೂ ಕಡಿಮೆಯಾಗಿರಲಿಲ್ಲ. ಭೂದಾನದ ಉಚ್ಛ್ರಾಯಕಾಲವಾಗಿರಬಹುದು, ೧೯೭೦ರ ತುರ್ತು ಪರಿಸ್ಥಿತಿ ಕಾಲವಾಗಿರಬಹುದು ಅದರಲ್ಲಿ ತತ್ವ ದರ್ಶನಕ್ಕಾಗಿ ಧನುರ್ಧಾರಿಯ ಜಿಜ್ಞಾಸೆಯಿತ್ತು.

ಭೂದಾನ ಆಂದೋಲನದಲ್ಲಿ ಬಂಗ ಸಾಹೇಬರದು ಒಂದು ವಿಶೇಷ ಪ್ರಯತ್ನ ಸಾಮೂಹಿಕ ಪಾದಯಾತ್ರೆಯದ್ದಾಗಿತ್ತು. ಈ ಕಾರ್ಯಕ್ರಮವನ್ನು ಬಹುಸ್ವಾಮದ ಮಂತ್ರವನ್ನು ಚರಿತ್ರಾರ್ಹ ಮಾಡುವಂಥದ್ದಾಗಿತ್ತು. ಎಲ್ಲಿ ನೂರಾರು ಕಾರ್ಯಕರ್ತರು ಒಟ್ಟಿಗೆ ಯಾವುದಾದರೂ ಹೋಬಳಿಯನ್ನು ತೆಗೆದುಕೊಂಡು ಅಲ್ಲಿಯ ಪ್ರತ್ಯೇಕ ಹಳ್ಳಿಯನ್ನೆ ಜಾಲಾಡುತ್ತಿದ್ದರು. ಸಾಮಾನ್ಯ ಯೋಗ್ಯತೆಯ ಕಾರ್ಯಕರ್ತರು ಒಂದರ್ಥದಲ್ಲಿ ಇದು ವಿನೋಬಾರವರಿಂದ ಸೂಚಿಸಲ್ಪಟ್ಟ ಗುಣಸೇವಕತ್ವದ ಪ್ರಕಾರವಾಗಿತ್ತು. ಬಂಗಸಾಹೇಬರ ಅವರದೇ ಆದ ಚಂದ್ರ ಮಂಡಲ ರಚಿತವಾಗುತ್ತಿತ್ತು. ಅವರ ಮಿತ್ರ ಮಂಡಲಿಯು ಪ್ರಸಿದ್ಧ ಜನರದ್ದೇ ಆಗಿರಬಹುದು. ಆದರೆ ತ್ಯಾಗ ಮತ್ತು ತಪಸ್ಸಿನಲ್ಲಿ ಅವರು ಯಾವ ರೀತಿಯಲ್ಲೂ ಕಡಿಮೆಯಾಗಿರಲಿಲ್ಲ. ನಮ್ಮ ಕೆಲವೇ ಜೊತೆಗಾರರು ಇಷ್ಟೊಂದು ತಪಸ್ಸುಮಾಡಿ ಮೌನಾಚರಣೆಯ ಕಾರ್ಯಕರ್ತರನ್ನು ತಯಾರು ಮಾಡಿರಬಹುದು. ದೇಶದ ತುಂಬಾ ಯಾರ ಕುಟುಂಬವೆಲ್ಲ ಆ ಜೀವನ ಪರ್ಯಂತ ಸಮಾಜ ಸೇವೆಯಲ್ಲಿ ತೊಡಗಿದಂಥವರು. ಅವರ ಸಹಚರಣಿ ಸುಮನತಾಯಿ ಮಗ ಅರೋರ್ ಮತ್ತು ಅಭಯ್ ತಮ್ಮ ಪತ್ನಿಯರೊಂದಿಗೆ ಸೇವಾವ್ರತಾಧಾರಿಗಳಾಗಿದ್ದಾರೆ. ಮಹಾತ್ಮ ಗಾಂಧಿಯಿಂದ ಮನೋದೃಷ್ಟಿಯನ್ನು ಪಡೆದು ಕುಮಾರಪ್ಪ, ವಿನೋಬಾ, ಜಯಪ್ರಕಾಶ್‌ಜಿಯವರೊಂದಿಗೆ ನಮ್ರತೆಯಿಂದ ಸ್ವತಂತ್ರ ಅಸ್ಮಿತೆಯನ್ನು ಖಾಯಂ ಆಗಿ ಇಟ್ಟುಕೊಂಡಿದ್ದರು. ಅವರ ಪ್ರಮುಖ ಸೇವಾ ಕ್ಷೇತ್ರ ವಿದರ್ಭವೆಂದೇ ತಿಳಿಯಬೇಕು, ಅಲ್ಲಿಯ ಸಂಸ್ಕೃತಿ ಅವರ ಜೀವನದಲ್ಲಿ ಹಾಸು ಹೊಕ್ಕಾಗಿತ್ತು. ಆದರೆ ಚಿಂತನಾ ಕ್ಷೇತ್ರ ಇಡೀ ದೇಶವಾಗಿತ್ತು. ಕೆಲವೊಂದು ಅರ್ಥದಲ್ಲಿ ಪೂರ್ಣ ಜಾಗತೀಕವಾಗಿತ್ತು. ಸಂಘಟನೆಯ ದೃಷ್ಟಿಯಿಂದ ನೋಡಿದರೆ ವಿನೋಬಾ ಮತ್ತು ಜಯಪ್ರಕಾಶರಂಥ ದಿಗ್ಗಜರ ನಿರ್ವಾಣದ ನಂತರ ಸರ್ವ ಸೇವಾ ಸಂಘವನ್ನು ಉಳಿಸಿಕೊಂಡು ಬರುವ ಕೆಲಸವನ್ನು ಸಿದ್ಧರಾಜ ಢಡ್ಡ ಮತ್ತು ಠಾಕೂರದಾಸರೇ ಮಾಡಿದರು. ತೇಜಸ್ವಿ ಜನರೊಂದಿಗೆ ನಡೆಯುವುದು, ಅವರ ನೆನಪು ಸದಾಕಾಲ ಉಳಿದು ಬಾಳುವಂತೆ ಮಾಡುವ ಪ್ರಾಣ ತುಂಬುವ ಕೆಲಸ ಅಷ್ಟೊಂದು ಸುಲಭವಲ್ಲ.

(ಅನು.ಸು.ಕೌ : ಸಾಭಾರ–ಸರ್ವೋದಯ ಪ್ರೆಸ್)

ಕತ್ತಲೆ ಎಂಬುದು ಇತ್ತಲೆ

– ಡಾ.ಬೋರೆಗೌಡ ಚಿಕ್ಕಮರಳಿ

ಸೂರ್ಯನ ಬೆಳಕಿನಲ್ಲಿ ಬದುಕುವ ಭಾಗ್ಯವನ್ನು ನಾವು ಪಡೆದಿರುವುದರಿಂದ ಕತ್ತಲೆ ಎಂಬುದು ನಮಗೆ ಇರುಳಿನ ವಿದ್ಯಮಾನವಾಗಿ ಮಾತ್ರ ಕಾಣುತ್ತಿದೆ. ಭೂಮಿ ತನ್ನ ಅರ್ಧ ಸುತ್ತಿನಲ್ಲಿ ಬೆಳಕನ್ನೂ, ಇನ್ನರ್ಧ ಸುತ್ತಿನಲ್ಲಿ ಕತ್ತಲನ್ನೂ ಅನುಭವಿಸುತ್ತದೆ; ಆ ಕತ್ತಲೂ ಸೂರ್ಯ ಮರೆಯಾಗುವುದರಿಂದ ಆದದ್ದು, ಅದು ಭೂಮಿಯ ನೆರಳಲ್ಲದೆ ಬೇರೆಯಲ್ಲ ಎಂದೂ ಭಾವಿಸುತ್ತೇವೆ. ಬೆಳಕು ಶಾಶ್ವತ, ಅದು ಇತ್ಯಾತ್ಮಕ; ಕತ್ತಲು ಮಾಯೆ, ನೇತ್ಯಾತ್ಮಕ. ಕತ್ತಲಲ್ಲಿ ಮುಳುಗಿದ ಜೀವ ಬೆಳಕನ್ನು ಮರೆತು ಮಾಯೆಯ ಕೋಲಾಹಲಕ್ಕೆ ಒಳಗಾಗಿ ಮೋಹವೇ ಮೊದಲಾದ ನಾನಾ ದುರ್ವ್ಯವಹಾರಗಳಲ್ಲಿ ತೊಡಗಿಬಿಡಬಾರದು; ಅದು ಸದಾ ಜಾಗರವಿದ್ದು ಬೆಳಕಿಗಾಗಿ ತುಡಿಯುತ್ತಿರಬೇಕು ಎಂದು ಬೆಳಕು-ಕತ್ತಲಿನ ನಡುವೆ ತತ್ತ್ವವನ್ನೂ ರೂಪಿಸುತ್ತೇವೆ. ಬೆಳಕನ್ನು ಸಾತ್ವಿಕಕ್ಕೆ, ಸತ್ಯಕ್ಕೆ, ಸದ್ವಿಚಾರಕ್ಕೆ, ಜ್ಞಾನಕ್ಕೆ ಸಂಕೇತ ಮಾಡಿಕೊಂಡು ಬೆಳಕಿನ ಬಗೆಗೆ ಪ್ರೀತಿಯನ್ನೂ, ಹಂಬಲವನ್ನೂ ಬೆಳೆಸಿಕೊಂಡಿದ್ದೇವೆ. ಕತ್ತಲನ್ನು ತಾಮಸಕ್ಕೆ, ಸುಳ್ಳಿಗೆ, ಅಸದ್ವಿಚಾರಕ್ಕೆ, ಅಜ್ಞಾನಕ್ಕೆ ಸಂಕೇತ ಮಾಡಿಕೊಂಡು ಕತ್ತಲಿನ ಬಗೆಗೆ ಭೀತಿಯನ್ನು, ತಿರಸ್ಕಾರ ಭಾವವನ್ನು ಬೆಳೆಸಿಕೊಂಡಿದ್ದೇವೆ. ಬೇಡವಾದ ಕತ್ತಲನ್ನು ಉತ್ತರಿಸಿ ಬೇಕಾದ ಬೆಳಕಿನ ಕಡೆಗೆ ನಡೆಯುವುದೆಂದರೆ ಜೀವ ಭವಸಾಗರವನ್ನು ದಾಟಿ ಮುಕ್ತಿಯ ಕಡೆಗೆ ಮುಖಮಾಡಿದಂತೆ ಎಂದೇ ತಿಳಿಯುತ್ತೇವೆ. ಆದರೆ ಸೃಷ್ಟಿಯ ವಿಚಿತ್ರ ಬೇರೆಯೇ ಆಗಿದೆ ಎಂಬುದನ್ನು ನಮಗೆ ಹೇಳಿಕೊಡುತ್ತದೆ. ಬೆಳಕು ನಿತ್ಯವೂ ಅಲ್ಲ, ಕತ್ತಲು ಮಾಯೆಯೂ ಅಲ್ಲ. 'ಮನದ ಮುಂದಣ ಆಸೆಯೇ ಮಾಯೆ ಕಣಾ' ಎಂದಂತೆ ಕತ್ತಲನ್ನು ಪರಿಭಾವಿಸುವ ನಮ್ಮ ಮನಸ್ಸಿನಲ್ಲಷ್ಟೇ ಕತ್ತಲೆಗೆ ನಾವು ಆರೋಪಿಸಿದ ನೇತ್ಯಾತ್ಮಕ ಅಂಶಗಳಿವೆ. ಶುದ್ಧ ಅಧ್ಯಾತ್ಮ ಬೆಳಕು ಕತ್ತಲುಗಳೆರಡನ್ನು ಭಗವದ್‌ಲೀಲಾ ಮಾತ್ರವಾಗಿ ತಿಳಿಯುತ್ತದೆ. ಇಡೀ ವ್ಯೋಮ ಕತ್ತಲುಮಯ ಎಂದು ವಿಜ್ಞಾನ ಹೇಳುತ್ತದೆ. ಸೂರ್ಯನಂತಹ ಅದೆಷ್ಟೋ ನಕ್ಷತ್ರಗಳು, ನಕ್ಷತ್ರಪುಂಜಗಳು ಕತ್ತಲಲ್ಲಿ ಬೆಳಕಿನ ಕಿರಣಗಳನ್ನು ಹಾಯಿಸುತ್ತವೆ; ಕತ್ತಲನ್ನು ಉತ್ತರಿಸಲಾರದೆ ಸೋತು ಕೊನೆಗೊಮ್ಮೆ ಅಳಿಯುತ್ತವೆ. ಈಗ ನಾವು ಹೇಳಬೇಕಾಗುತ್ತದೆ: ಕತ್ತಲು ಸ್ಥಾಯಿ, ಸದಾ ಇರುವಂತಹುದು; ಬೆಳಕು ಸಂಚಾರಿ, ಬಂದು ಹೋಗುವಂತಹುದು ಮಾತ್ರ ಎಂದು.

ಜಗತ್ತನ್ನು ವ್ಯಾಪಿಸಿರುವ ಅಗಾಧ ಕತ್ತಲೆಯ ನಡುವೆ ಬೆಳಕಿನ ವಲಯಗಳು ತುಂಬಾ ಚಿಕ್ಕವು ಎಂಬುದು ವಿಜ್ಞಾನ ಸತ್ಯ. ಇದರ ಸಾಮಾನ್ಯ ಪರಿಚಯ ನಮಗಾಗಬೇಕಾದರೆ ಇರುಳನ್ನೇ ಮೊರೆಹೋಗಬೇಕು. ಇರುಳಿನಲ್ಲಿ ನಕ್ಷತ್ರ ಖಚಿತ ಅಕಾಶದತ್ತ ಮುಖಮಾಡಿದಾಗ ತಿಳಿಯುತ್ತದೆ, ಕತ್ತಲು ಎಷ್ಟು ಅಪಾರ ಹಾಗೂ ಆಳ ಎಂಬುದು. ಅದರ ಅಗಾಧತೆಯ ನಡುವೆ ಬೆಳಕಿನ ಚುಕ್ಕೆಗಳು ಎಷ್ಟು ಸಣ್ಣವು ಎಂಬುದೂ ಮನವರಿಕೆಯಾಗದೆ ಇರದು. ಬರಿಗಣ್ಣಿಗೆ ಕಾಣುವ ಚುಕ್ಕೆಗಳೆಲ್ಲ ಸ್ವತಂತ್ರ ಬೆಳಕಿನ ನಕ್ಷತ್ರಗಳಾಗಿರುವುದಿಲ್ಲ; ನಕ್ಷತ್ರಗಳು ಚಿಮ್ಮಿಸುವ ಬೆಳಕನ್ನು ತಾವು ಪಡೆದು ಪ್ರತಿಫಲಸಿ ಸ್ವಯಂಪ್ರಕಾಶದಂತೆ ಕಾಣುವ ಗ್ರಹಗಳು, ಉಪಗ್ರಹಗಳು, ಕ್ಷುದ್ರಗ್ರಹಗಳು ಅವುಗಳಲ್ಲಿ ಎಷ್ಟೋ ಇರುತ್ತವೆ. ಆಕಾಶಕಾಯಗಳ ನಿಖರ ಮಾಹಿತಿಗೂ ದರ್ಶನಕ್ಕೂ ವಿಜ್ಞಾನಿಗಳು ಇರುಳಿಗಾಗಿಯೇ ಕಾಯುತ್ತಾರೆ. ಪ್ರಕಾಶಿಸುವ ಸೂರ್ಯನಿಗೂ ಆ ಪ್ರಕಾಶವನ್ನು ಪಡೆದುಕೊಳ್ಳುತ್ತಿರುವ ಭೂಮಿಯ ನಡುವೆ ಚಂದ್ರ ಬಂದಾಗ ಭೂಮಿಯ ಮೇಲೆ

ಹಗಲಿನಲ್ಲೂ ಕತ್ತಲು ಉಂಟಾಗುತ್ತದೆ. ಆ ಕತ್ತಲೆಗೆ ವರ್ಷಗಟ್ಟಲೆ ಕಾಯುತ್ತಿದ್ದ ವಿಜ್ಞಾನಿಗಳು ಆ ಕ್ಷಣಗಳಲ್ಲಿ ಸೂರ್ಯನ ಮೇಲಿನ ಹಾಗೂ ಅವನ ಸುತ್ತಣ ವಲಯದ ಸತ್ಯಗಳನ್ನು ಅರಿಯಲು ಯತ್ನಿಸುತ್ತಾರೆ. ಅಂದರೆ ಕತ್ತಲೂ ಸತ್ಯವನ್ನು ತಿಳಿಸುವ, ಅರಿವನ್ನು ವಿಸ್ತರಿಸುವ ಸಾಧನ ಅಥವಾ ಸಮಯ ಎಂದಂತಾಯಿತು. ವಸ್ತುಸ್ಥಿತಿ ಹೀಗಿರುವುದರಿಂದ ಕತ್ತಲನ್ನು ಭಯದ, ಮಿಥ್ಯಯ, ಅಜ್ಞಾನದ ಕುರುಹನ್ನಾಗಿ ಭಾವಿಸುವುದರಲ್ಲಿ ಅರ್ಥವಿಲ್ಲ ಎನಿಸುತ್ತದೆ. ಹಗಲಿನಂತೆ ಕತ್ತಲೂ ಜೀವಗಳ ಪೋಷಕ, ವಿಶ್ರಾಮಜನಕ ಎಂಬುದು ನಮಗೆ ತಿಳಿಯದ ವಿಚಾರವೇನೂ ಅಲ್ಲ. ಕತ್ತಲಿನ ನಡುವೆಯೇ ಬದುಕುತ್ತಿರುವ ನಮಗೆ ಕತ್ತಲೆ ಮಿಥ್ಯೆಯ ತೆರೆಯಾಗಿ, ಭಯಂಕರವಾಗಿ ಕಂಡುದಕ್ಕೆ ಅದರ ಆಳ-ಅಪಾರಗಳನ್ನು ತಿಳಿಯಲಾಗದ ನಮ್ಮ ಅರಿವಿನ ಮಿತಿಯೇ ಕಾರಣ ಎಂಬುದನ್ನು ಈಗಾಗಲೇ ಸೂಚಿಸಲಾಗಿದೆ. ಕತ್ತಲು ಅಜ್ಞಾನದ ತಾಮಸ ಪ್ರವೃತ್ತಿಯ ಸಂಕೇತ ಎಂಬ ಪ್ರತಿಮಾದೃಷ್ಟಿಯನ್ನು ಇಟ್ಟುಕೊಂಡು ಈಗ ಒಂದಿಷ್ಟು ಚಿಂತಿಸೋಣ. ಕತ್ತಲನ್ನು ಹೀಗೆ ಪ್ರತಿಮೀಕರಿಸುವ ಭಾವಲಹರಿಗೆ ಪ್ರೇರಣೆ ಕತ್ತಲಲ್ಲಿಯೇ ವನರಾಜಿ, ವೈವಿಧ್ಯಮಯವಾದ ಜೀವರಾಶಿ, ಜಲರಾಶಿ, ನಿರಭ್ರನೀಲ ಆಕಾಶ ಈ ಎಲ್ಲವೂ ಇರುಳಿನಲ್ಲಿ ಕತ್ತಲು ಆವರಿಸುತ್ತಿದ್ದಂತೆ ನೋಡನೋಡುತ್ತಲೇ ಕಾಣೆಯಾಗುತ್ತದೆ. ವಿಶ್ವಗರ್ಭವನ್ನು ವ್ಯಾಪಿಸಿರುವ ಕತ್ತಲು ಈ ಎಲ್ಲತನವನ್ನು ತನ್ನಲ್ಲಿ ಒಳಕೊಂಡು ಇದಾವುದೂ ನಮ್ಮ ನೋಟಕ್ಕೆ ದಕ್ಕದಂತೆ ಮಾಡಿಬಿಡುತ್ತದೆ. ಇದ್ದೂ ಇಲ್ಲದಂತಾಗುವ ಕತ್ತಲಿನ ಈ ವಿದ್ಯಾಮಾನ ತನ್ನೊಳಗೇ ಅಡಗಿರುವ ಅಂತರಾತ್ಮವನ್ನು ಅರಿಯಲೀಯದ ವಿಷಯಸುಖದ ಸೆಳವಿಗೆ, ಅಂದರೆ ಅಜ್ಞಾನದ ಪರಿಣಾಮಕ್ಕೆ ಪ್ರತೀಕವಾದದು ಸಹಜವೇ ಆಗಿದೆ. ಅಂತರಾತ್ಮವನ್ನು ಜಾಗೃತಗೊಳಿಸಿಕೊಳ್ಳಲಾಗದ ಮನುಷ್ಯ ವಿಷಯ ಸುಖದ ಸೆಳವಿಗೆ ಸಿಕ್ಕಿ ಆ ಸುಖವನ್ನು ಪಡೆದುಕೊಳ್ಳವುದಕ್ಕೋಸ್ಕರ ಪಾಶವಿಕೃತ್ಯದಲ್ಲಿ ತೊಡಗುತ್ತಾನೆ. ಅವನ ಈ ಅಕೃತ್ಯಗಳಿಗೆ ಹಗಲಿಗಿಂತ ಕತ್ತಲು ಸೂಕ್ತ ಸನ್ನಿವೇಶಗಳನ್ನು ಒದಗಿಸಿಕೊಡುತ್ತದೆ. ಮನುಷ್ಯನ ಈ ವಿನಾಶಕಾರಿ ಕ್ರಿಯೆಗೆ ಅವನ ಅಜ್ಞಾನವೇ, ಅಂದರೆ ತಾಮಸ ಪ್ರವೃತ್ತಿಯೇ ಕಾರಣ. ಹೀಗಾಗಿ ಮನುಷ್ಯನ ತಾಮಸ ಪ್ರವೃತ್ತಿಗೆ ಕತ್ತಲು ಸಂಕೇತವಾಗುತ್ತದೆ. ಕೆಳಗೆ ಪ್ರಸಿದ್ಧರಾದ ನಮ್ಮ ಪುರಾಣಲೋಕದ ರಾವಣ, ಕಂಸ, ದುರ್ಯೋಧನ, ದುಶ್ಯಾಸನ, ಶಕುನಿ ಮೊದಲಾದವರಿಗೆ ನಮ್ಮ ಮಾಧ್ಯಮಲೋಕ ಕಪ್ಪು ವಸ್ತ್ರಗಳನ್ನು ಧರಿಸಿದ್ದು ಅವರನ್ನಾವರಿಸಿದ ಅಜ್ಞಾನವೆಂಬ ಕತ್ತಲನ್ನು ಸೂಚಿಸುವುದಕ್ಕಾಗಿಯೇ.

ವಿಶ್ವವನ್ನೆಲ್ಲ ಕತ್ತಲು ಆವರಿಸಿದೆ ಎಂಬ ಮಾತಿಗೆ ಮತ್ತೆ ಬರೋಣ. ಮಾನವ ಇತಿಹಾಸವನ್ನು ಅವಲೋಕಿಸಿದರೆ ಅವನು ಗೈದಿರುವ ಅಕೃತ್ಯಗಳ ಸರಮಾಲೆಯೇ ನಮ್ಮೆದುರಿಗೆ ನಿಲ್ಲುವುದು ತಿಳಿದ ವಿಚಾರವೇ ಆಗಿದೆ. ವರ್ತಮಾನ ಇದಕ್ಕೆ ಹೊರತೇನೂ ಅಲ್ಲ. ನಿಸರ್ಗವನ್ನು ದೋಚುವ, ನೀತಿ ನಿಯಮಾದಿಗಳನ್ನು ಮೀರುವ, ಧನ ಕನಕಾದಿ ವಸ್ತುಸಂಚಯನದಲ್ಲಿ ಅನುರಕ್ತರಾಗಿರುವ ಜನರೇ ಭೂತ ವರ್ತಮಾನಗಳೆರಡರಲ್ಲೂ ವಿಜೃಂಭಿಸುತ್ತಿರುತ್ತಾರೆ. ಈ ಕೋಲಾಹಲದ ನಡುವೆಯೇ ಬದುಕನ್ನು ನೇರ್ಪುಗೊಳಿಸುವುದಕ್ಕಾಗಿ ಜೀವಮಾನವನ್ನು ಮುಡಿಪಾಗಿರಿಸಿದ ಮಾನವ ನಕ್ಷತ್ರಗಳು ಆಗಾಗ ಮಿನುಗುತ್ತಾರೆ. ಅವರ ಪ್ರಭಾವಲಯ ಆವರಿಸಿದ ಪ್ರದೇಶ, ಆವರಿಸಿದಷ್ಟು ಕಾಲ ಬೆಳಕು ಕೋರೈಸುತ್ತದೆ. ಮರುಕ್ಷಣ ತಮಂಧ ಆವರಿಸಿಕೊಳ್ಳುತ್ತದೆ. ಈ ಅನುಭವದಲ್ಲಿ ನಲುಗಿದ ಅಮಾಯಕ ಬೆಳಕೆಂಬುದು ಅತ್ತತ್ತಲೆ ಬರೀ ಕತ್ತಲು ಮಾತ್ರ ಇತ್ತಲೇ ಎಂದು ಉದ್ಗರಿಸಲೇಬೇಕಾದ ವಿಷಾದಯೋಗಕ್ಕೆ ಸರಿಯುತ್ತಾನೆ.

* * *

ಕಾರ್ಯಕ್ಷೇತ್ರ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಇಂದು ಗಾಂಧಿ (ವಿದೇಶಿಯನೊಬ್ಬನ ಟಿಪ್ಪಣಿಗಳು)

– ಥಾಮಸ್ ವೆಬರ್

(ಕಳೆದ ಸಂಚಿಕೆಯಿಂದ...)

ನಾನು ಸೂಚಿಸುತ್ತಿರುವಂತೆ ಒಂದು ವೇಳೆ ವೇದಿಕೆಯ ಮೇಲಿಂದ ಗಾಂಧಿ ಕಣ್ಮರೆಯಾಗುತ್ತಿದ್ದಾರೆ ಎಂದೆನಿಸಿದರೆ ಮತ್ತು ಹೆಚ್ಚು ಹೆಚ್ಚಾಗಿ ಶೈಕ್ಷಣಿಕ ಆಸಕ್ತಿಗೆ ಮಾತ್ರ ಸೀಮಿತವಾಗುತ್ತಿದ್ದಾರೆ ಎಂದೆನಿಸಿದರೆ ಗಾಂಧಿಯನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನ ಕಷ್ಟಸಾಧ್ಯವಾಗಿದೆ ಎಂದು ಯೋಚಿಸಬೇಕಾಗುತ್ತದೆ. ನನಗೆ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಭಾರತದಲ್ಲಿ, ವಿದ್ಯಾವಂತರು ಗಾಂಧಿ ವಿಷಯದ ಪತ್ರಿಕೆಗಳನ್ನು ಸಾಕಷ್ಟು ಉಪಯುಕ್ತಕರವಾಗುವಂತೆ ಮಾಡುತ್ತಿಲ್ಲ. ಪ್ರತಿಯೊಂದು ವಿಶ್ವವಿದ್ಯಾನಿಲಯ ಅಥವಾ ಗಾಂಧೀಕೇಂದ್ರ ತನ್ನದೆಯಾದ ಒಂದು ಪತ್ರಿಕೆ ಇರಬೇಕೆಂದು ಬಯಸುತ್ತಿರುವಂತೆ ತೋರುತ್ತದೆ. ತತ್ಪರಿಣಾಮವಾಗಿ ಕಡಿಮೆ ಗುಣಮಟ್ಟದ ಲೇಖನಗಳು ಪ್ರಕಟವಾಗುತ್ತವೆ. ಅವು ಈಗಾಗಲೆ ಚರ್ವಿತಚರ್ವಣವಾಗಿರುವ ವಿಷಯಗಳನ್ನೆ ಪ್ರಸ್ತುತ ಪಡಿಸುತ್ತವೆ ಮತ್ತು ಅದು ಕೂಡಾ ಕಾಲಾವಕಾಶವನ್ನು ಕೊಟ್ಟು ಕೊಟ್ಟು ಗಾಂಧಿ ವಿಷಯವನ್ನು ಪ್ರಕಟ ಪಡಿಸುವಲ್ಲಿ ಒಂದು ಸ್ಪರ್ಧೆಯೇ ಇರುತ್ತದೆ. ಇಂತಹ ಸ್ಪರ್ಧೆಯ ಕಾರಣದಿಂದಾಗಿ ಗಾಂಧಿ ವಿಚಾರ ಬಹಳ ತೆಳುವಾಗಿ ಸಾದರಗೊಳ್ಳತ್ತದೆ.

ಒಂದು ಕಾಲದಲ್ಲಿ ಮಹಾತ್ಮರ ಬಗ್ಗೆ ಯಾವ ಕೆಟ್ಟವಿಷಯವನ್ನು ಹೇಳುವಂತಿರಲಿಲ್ಲ ಆಟನ್ ಬರೊರವರ ಚಾರಿತ್ರಿಕ ಫಿಲ್ಮ್ ಬಗ್ಗೆಯಾಗಲಿ ಅವರ ಬಗ್ಗೆಯಾಗಲಿ ಏನು ಮಾತಾನಾಡುವಂತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಏಕೆಂದರೆ ಗಾಂಧಿಯುಗದ ಪ್ರಾರಂಭಿಕ ಕಾಲದಲ್ಲಿ ಯಾವುದೇ ಪ್ರಕಾರದ ವಿಮರ್ಶಾತ್ಮಕ ಸಂಶೋಧನೆ ನಡೆಯದೆ ಇದದ್ದು ಇದಕ್ಕೆ ಕಾರಣವಾಗಿರಬಹುದು. ಈಗ ಕಿತ್ತು ಅಂಟಿಸುವ ಕೆಲಸ ನಡೆದಿದೆ. ಇದೊಂದು ವೈಖರಿಯೇ ಆಗಿದೆ ಗಾಂಧಿ ಬಗ್ಗೆ ಬರೆದ ಲೇಖನ ಪ್ರಕಟಗೊಳ್ಳುವಂತೆ ಮಾಡಲು ಹೆಚ್ಚು ಜನರು ಓದುವಂತೆ ಮಾಡಲು ಈ ಕಿತ್ತು ಅಂಟಿಸುವ ಚಾಳಿ ಜಾರಿಗೆ ಬಂದಿದೆ. ಗಾಂಧಿಯ ಲೈಂಗಿಕತೆ, ಅಥವಾ ಅವರೊಬ್ಬ ಕೆಟ್ಟ ಗಂಡ, ಅಥವಾ ತಂದೆ, ವರ್ಣವ್ಯವಸ್ಥೆಯನ್ನು ಒಪ್ಪುವವ ಮತ್ತು "ಮಹಾತ್ಮರ ರಹಸ್ಯ" ಎಂಬ ಬರೆಯಲಾದ ವಿಷಯಗಳನ್ನು ಸುಳ್ಳಾಗಿ ಮಾಡುವುದು ವೈಖರಿಯಾಗಿದೆ.

ಗಾಂಧಿ ಕೇಂದ್ರಗಳು ಮತ್ತು ಆಶ್ರಮ

ನಾನು ಇತ್ತೀಚೆಗೆ ಭಾರತಕ್ಕೆ ಬಂದಿದ್ದೆ. ಆಗ ಸಾಬರಮತಿಯ ಆಶ್ರಮದ

ಪವಿತ್ರ ಭೂಮಿಯ ಮೇಲೆ ನಡೆದಾಡುವ ಅವಕಾಶ ಸಿಕ್ಕಿತ್ತು. ಅಲ್ಲಿಯ ಐತಿಹಾಸಿಕ ಸಾಹಿತ್ಯ ಭಂಡಾರದಲ್ಲಿ ಕುಳಿತು ಕೆಲಸ ಮಾಡುವ ಅವಕಾಶವು ನನಗೆ ದೊರೆತಿತ್ತು. ೧೯೮೭ ರಿಂದ ನಾನು ಸಾಬರಮತಿ ಆಶ್ರಮಕ್ಕೆ ಪದೆ ಪದೆ ಬಂದಿದ್ದೇನೆ. ಆ ಸಮಯದಲ್ಲಿ ನಾನು ಗಾಂಧೀಜಿಯವರ ಗಾಂಧಿಯಾತ್ರೆಯ ಪುನರ ಅನುಕರಣೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಸಾಬರಮತಿ ಮತ್ತು ಸೇವಾಗ್ರಾಮ ಆಶ್ರಮಗಳಿಗೆ ಭೇಟಿಕೊಟ್ಟಗಲೆಲ್ಲಾ ೨೦ನೇ ಶತಮಾನದಲ್ಲಿ ಮತ್ತು ನಂತರ ಏನಾಗಬಹುದು ಮತ್ತು ಗಾಂಧಿ ವಿಚಾರದ ಪ್ರಸಾರ ಕಾರ್ಯದಲ್ಲಿ ಅವುಗಳ ಪಾತ್ರವೇನಿರಬಹುದು ಎಂದೆಲ್ಲಾ ಕುರಿತು ಯೋಚನೆ ಮಾಡಿದ್ದೇನೆ.

ಸೇವಾಗ್ರಾಮ ಆಶ್ರಮ ಬಹಳ ಹೆಚ್ಚಿನ ಪಾತ್ರ ನಿರ್ವಹಿಸಬೇಕಿದೆ. ಅದು ಭಾರತದ ಅತ್ಯಂತ ಪ್ರಸಿದ್ಧವಾದ ಐತಿಹಾಸಿಕ ಕೇಂದ್ರವಾಗಿದೆ. ಅಲ್ಲದೆ ವಸ್ತುಸಂಗ್ರಾಲಯ ಮತ್ತು ಪವಿತ್ರ ಯಾತ್ರಾಸ್ಥಳವೂ ಆಗಿದೆ. ನನ್ನ ವಿಶೇಷ ಕಾಳಜಿ ಏನೆಂದರೆ ಆ ಆಶ್ರಮವನ್ನು ಇನ್ನು ಹೆಚ್ಚು ಸಮಾಧಾನ ತರುವಂತಹ ತಾಣವಾಗಿ ಮಾಡುವುದು ಹೇಗೆ ಎಂಬುದಾಗಿದೆ. ಅಲ್ಲಗೆ ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಿಗೆ ಬರಬೇಕಾಗಿತ್ತು. ಗಾಂಧಿ ವಿಚಾರದ ಸಂಶೋಧನೆ ಮಾಡಲು ವಿಶ್ವ ವಿದ್ಯಾನಿಲಯಕ್ಕಿಂತ ಮೀರಿದ ವ್ಯವಸ್ಥೆ ಬೇಕಿದೆ. ಆಶ್ರಮದ ಹೃದಯ ಅಲ್ಲಿಯ ಐತಿಹಾಸಿಕ ಸಾಹಿತ್ಯ ಸಂಗ್ರಹಾಲಯ. ಸಾಬರಮತಿ ಆಶ್ರಮ ಉತ್ಕೃಷ್ಟವಾದ ಸಾಹಿತ್ಯವನ್ನು ಒಳಗೊಂಡಿದೆ. ಅಲ್ಲಿ ಗಾಂಧೀಜಿ ಬರೆದ ಕಾಗದಗಳು ಮತ್ತು ಇತರ ದಾಖಲೆಗಳಿವೆ. ಆದರೆ ಆ ಸಂಗ್ರಹ ಪೂರ್ಣವಾಗಿಲ್ಲ. ದಿಲ್ಲಿಯಲ್ಲಿರುವ ನೆಹರು ಸ್ಮಾರಕ ಪುಸ್ತಕಾಲಯದಲ್ಲಿ ಗಾಂಧೀಜಿಗೆ ಸಂಬಂಧಿಸಿದ ಸಾಹಿತ್ಯವಿದೆ. ಸಂಬಂಧಿಸಿದ ಎಲ್ಲಾ ಸಂಸ್ಥೆಗಳು ಒಂದು ಗೂಡಿ ಒಂದೆ ಸ್ಥಳದಲ್ಲಿ ಏಕಕಾಲಕ್ಕೆ ಎಲ್ಲಾ ಮಾಹಿತಿ ದೊರೆಯುವಂತೆ ಮಾಡಲಾರವೆ?

ಅಂತಿಮ ತಿರ್ಮಾನದ ರೀತಿಯಲ್ಲಿ ಹೇಳುವುದಾದರೆ ನನಗೆ ತೋರುವುದೇನೆಂದರೆ ಜನತೆಗೆ ಕ್ರೀಯಾಶೀಲ ಗಾಂಧೀಯನ್ನು ಕಡಿಮೆ, ಆಡಳಿತ ಶಾಹಿಗಾಂಧೀಯನ್ನೆ ಹೆಚ್ಚು ಪ್ರಮಾಣದಲ್ಲಿ ಬಿಂಬಿಸುವ ರೀತಿಯೊಂದಿದೆ ಎಂದು ಅನಿಸುತ್ತದೆ. ಈ ಬೆಳವಣಿಗೆಯ ಪರಿಣಾಮಗಳೇನು ಎಂದು ಆಲೋಚಿಸಬೇಕಾದ ಕಾಲ ಬಂದಿದೆ. ಗಾಂಧಿಯನ್ನು ಚಳುವಳಿ ಕ್ಷೇತ್ರದಿಂದ ಶೈಕ್ಷಣಿಕ ಕ್ಷೇತ್ರಕ್ಕೆ ವರ್ಗಾಯಿಸುವುದು, ಕಾಲಧರ್ಮವಾಗಿದ್ದಿರಬಹುದು. ಗಾಂಧೀ ವಿಚಾರಕ್ಕೆ ಬದ್ಧರಾಗಿದ್ದವರಲ್ಲಿ ಅನೇಕರು ತಮ್ಮ ಜೀವನವನ್ನು ಸೇವೆಗಾಗಿ ಮುಡಿಪಾಗಿಟ್ಟಿದ್ದರು. ಹೊಸದಾಗಿ ಪ್ರಾರಂಭವಾದ ಸಂಸ್ಥೆಗಳಲ್ಲಿ ಇದು ಸಾಮಾನ್ಯವಾಗಿ ಕಂಡು ಬರುವ ವಸ್ತು ಸ್ಥಿತಿ. ತಮ್ಮ ನಾಯಕ ಹೋದ ನಂತರ ಆ ಸಂಸ್ಥೆಗಳು ಹೆಚ್ಚು ಆಡಳಿತಶಾಹಿಯಾಗುತ್ತವೆ. ಮತ್ತು ಉದ್ಯೋಗಕೊಡುವ ಅವಕಾಶ ಸೃಷ್ಟಿಸುತ್ತವೆ. ಇದು ಸಾಮಾನ್ಯವಾಗಿ ಪ್ರಬಲವಾದ ರೀತಿಯಾಗಿದೆ. ಗಾಂಧೀವಾದ ಈ ಹೊಸ ವಸ್ತು ಸ್ಥಿತಿಯನ್ನು ಎದುರಿಸಬೇಕಾಗಿದೆ ಎಂದು ಒಪ್ಪಿಕೊಂಡರೂ ಅದೊಂದು ಸಕಾರತ್ಮಕ ಬೆಳವಣಿಗೆಯಾಗಿರಬಹುದು. ಅದರಲ್ಲಿಯ ಸಕಾರತ್ಮಕ ಬೆಳವಣಿಗೆಯನ್ನು ಇನ್ನಿಷ್ಟು ವೃದ್ಧಿಗೊಳಿಸಿ ಇನ್ನು ಅನುಷ್ಠಾನ

ಸುಲಭವಾದ ಮತ್ತು ಅರ್ಥವತ್ತಾದ ಗಾಂಧೀ ಸಂಸ್ಥೆಗಳು ಭಾರತದಲ್ಲಿ ಇರುವಂತೆ ಮಾಡಬಹುದುಲ್ಲವೆ? ಇಲ್ಲೊಂದು ಪ್ರಶ್ನೆಯನ್ನು ಹಾಕಿಕೊಳ್ಳಲೇಬೇಕು, ಅದೇನೆಂದರೆ ಭಾರತದಲ್ಲಿಯ ಪ್ರತಿಯೊಬ್ಬನು ತನ್ನದೇ ಆದ ಗಾಂಧೀ ಬೇಕೆಂದು ಬಯಸುತ್ತಾನೆ. ಗಾಂಧೀ ಆಶ್ರಮಗಳು ಒಂದು ಕಡೆ ಮುಚ್ಚುತ್ತವೆಯಾದರೆ ಇನ್ನೊಂದು ಕಡೆ ವಿಶ್ವವಿದ್ಯಾನಿಲಯಗಳು ಗಾಂಧೀ ಕೋರ್ಸ್‌ಗಳನ್ನು ಪ್ರಾರಂಭಿಸುತ್ತವೆ. ಪ್ರತಿಯೊಂದು ವಿಶ್ವವಿದ್ಯಾನಿಲಯವು ಗಾಂಧೀ ಕೇಂದ್ರ ಹೊಂದಿ ಗಾಂಧೀ ಬಗ್ಗೆ ಪತ್ರಿಕೆಯೊಂದನ್ನು ಹೊರಡಿಸಲು ಇಷ್ಟು ಪಡುವಂತೆ ತೋರುತ್ತದೆ. ಒಂದಡೆ ಸ್ಥಾನೀಯ ಸರ್ವೋದಯ ಕಾರ್ಯಕತರು ಕಣ್ಮರೆಯಾಗುತ್ತಿದ್ದರೆ. ಅಧಿಕಾರಿಗಳು ಗಾಂಧೀ ಹೆಸರನ್ನು ಜಪಿಸುತ್ತ ಸಮೃದ್ಧರಾಗುತ್ತಿದ್ದಾರೆ. ಗಾಂಧೀ ಸಿದ್ಧಾಂತವನ್ನು ಪ್ರಮಾಣ ಪತ್ರಕ್ಕಾಗಿ ಅಥವಾ ಆ ಸಿದ್ಧಾಂತವನ್ನೆ ಬಲ್ಲವರಾಗಿದ್ದೇವೆಯೆ? ಇಂಥ ಪ್ರಯತ್ನಗಳನ್ನು ವ್ಯವಹಾರ ಯೋಗ್ಯಮಾಡುವ ಆಸಕ್ತಿ ನಿಜವಾಗಿಯೂ ಇದೆಯೆ? ಜಾಗತೀಕವಾಗಿ ಶ್ರೇಷ್ಠ ಮಟ್ಟದ ಕೇಂದ್ರಗಳು ಮತ್ತು ಪತ್ರಿಕೆಗಳು ವೃದ್ಧಿಯಾಗುವಂತೆ ನಾವು ಸಹಕರಿಸಬೇಡವೆ? ಗಾಂಧೀ ಕುರಿತಾದ ಈ ಶೈಕ್ಷಣಿಕ ಅಭಿರುಚಿ ಗಾಂಧಿ ಸಿದ್ಧಾಂತದ ಆಚರಣೆಗೆ ನಮ್ಮನ್ನು ಒಯ್ಯತ್ತದೆ ಎಂದು ಗೊತ್ತಾದರೆ ಅದು ಆಗ ಗೊತ್ತಾಗುವವರೆಗೆ ಉದಾಹರಣೆಗೆ ಸಾಬರಮತಿ ಆಶ್ರಮದಲ್ಲಿ ಸೊಗಸಾದ ಗಾಂಧೀ ಸಂಶೋಧನಾ ಕೇಂದ್ರವನ್ನು ಮತ್ತು ಗಾಂಧೀ ಮಾರ್ಗದಂಥ ಅತ್ಯುತ್ತಮ ಪತ್ರಿಕೆಯನ್ನು ಪ್ರಕಟಿಸಲು ಪರಸ್ಪರ ಸಹಕರಿಸಲು ಅವಕಾಶವಿದೆಯೇ ಎಂದು ಕಂಡು ಹಿಡಿಯಲು ಅದಕ್ಕಾಗಿ ಈಗ ಇರುವಂಥ ಸ್ಪರ್ಧೆಯನ್ನು ತಪ್ಪಿಸಬಾರದೇಕೆ? ಗಾಂಧೀ ಕೇಂದ್ರಗಳನ್ನು ಕೋರ್ಸ್‌ಗಳನ್ನು ಪತ್ರಿಕೆಗಳನ್ನು ಹೊರಡಿಸುವ ಬಗ್ಗೆ ಜಿದ್ದಾ ಜಿದ್ದಿ ಏಕೆ? ಕೆಲವೇ ಕೆಲವು ಉತ್ಕೃಷ್ಟವಾದ ಗುಣಾತ್ಮಕ ಉದಾಹರಣೆಗಳು ಗಾಂಧೀ ಸಂದೇಶವನ್ನು ಹರಡಲು, ಗಾಂಧೀ ಸಂಶೋಧನೆ ಹೆಚ್ಚು ಗೌರವಾನ್ವಿತ ಮಾಡಲು ಹೆಚ್ಚು ಪರಿಣಾಮಕಾರಿ ಮಾಡಲು ಸಾಕಾಗಬಹುದಲ್ಲವೇ? ಅಂದರೆ ಇದರ ಅರ್ಥ ಸ್ಪರ್ಧಾತ್ಮಕ ಕ್ರಿಯೆಗಿಂತ ಸಹಕಾರತ್ವ ಬೇಕು. ಕೆಲವು ಗುಣಾತ್ಮಕ ಉದಾಹರಣೆಗಳು ಗಾಂಧೀ ಸಂದೇಶ ಸಾರುವುದಕ್ಕೆ, ಗಾಂಧೀ ಸಂಶೋಧನೆ ಗೌರವಾದರಕ್ಕೆ ಪಾತ್ರವಾಗುವಂತೆ ಮಾಡಲು ಇನ್ನು ಹೆಚ್ಚು ಪ್ರಭಾವಶಾಲಿಯಾಗುವಂತೆ ಖಂಡಿತವಾಗಿ ಮಾಡಬಹುದಾಗಿದೆ. ಇದರ ಅರ್ಥ ಗಾಂಧೀ ಕೋರ್ಸ್‌ಗಳು ಪತ್ರಿಕೆಗಳು ಮತ್ತು ಸಂಶೋಧನಾ ಕೇಂದ್ರಗಳ ಬಗ್ಗೆ ಸಹಕಾರತ್ಮಾಕ ನಿಲುವು ಇರಬೇಕೆ ಹೊರತು ಸ್ಪರ್ಧಾತ್ಮಕ ನಿಲುವು ಅಲ್ಲ.

* * *

ಜನಪದ ನಿಲಯದ ಅಂತರಂಗದಲ್ಲಿ.. ೧೧೨

– ಸುರೇಂದ್ರ ಕೌಲಗಿ



ಕಳೆದ ವರ್ಷ ಜೂನ್ ಮಾಹೆಯಲ್ಲಿ ರಕ್ತದೊತ್ತಡ ಹೆಚ್ಚಾಗಿ ಆಸ್ಪತ್ರೆ ಸೇರಬೇಕಾಯಿತು. ಈ ಒಂದು ವರ್ಷದ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿದೆಯಾದರೂ ಇನ್ನು ಸ್ವತಂತ್ರವಾಗಿ ಓಡಾಡುವುದಕ್ಕೆ ಆಗಲೀ ಪ್ರಯಾಣ ಮಾಡುವುದಕ್ಕೆ ಆಗಲಿ ದೂರದ ಪ್ರದೇಶಕ್ಕೆ ಹೋಗುವುದಕ್ಕೆ ಆಗುವಷ್ಟು ಆರೋಗ್ಯದಲ್ಲಿ ಸುಧಾರಣೆಯಾಗಿಲ್ಲ. ಆದರೆ ಮೊದಲಗಿಂತ ಪರಿಸ್ಥಿತಿ ಉತ್ತಮವಾಗಿದೆ. ಈ ಮೊದಲು ಕಡಿಮೆ ರಕ್ತದೊತ್ತಡದಿಂದ ಬಳಲಿದ್ದೆ. ಈ ಎರಡು ಅನಾರೋಗ್ಯದ ಸಂದರ್ಭದಲ್ಲಿ ಗಿರಿಜಮ್ಮನವರು ನನಗೆ ಮಾಡಿದ ಸೇವೆ ಅಸಾಧಾರಣವಾದದು. ಅವರ ಸೇವೆ ನನಗೆ ದೊರೆಯದೆ ಹೋಗಿದ್ದರೆ ಇಂದು ನಾನು ಬದುಕಿರುತ್ತಿದ್ದೆನೊ ಇಲ್ಲವೊ ಎಂಬ ಸಂಶಯ ಕಾಡುತ್ತದೆ. ಸಂಶಯವೇನು ಬಂತು ಖಂಡಿತವಾಗಿಯೂ ಬದುಕಿರುತ್ತಿರಲಿಲ್ಲ. ಸ್ವತಃ ಅವರ ಆರೋಗ್ಯವೂ ಅಷ್ಟಕ್ಕೆ ಅಷ್ಟೆ. ಅವರಿಗೇನೆ ಒಬ್ಬರ ಸೇವೆಯ ಅಗತ್ಯವಿರುವಾಗ ನನ್ನ ಸೇವೆಯನ್ನು ಮಾಡಿದ್ದು ವಿಶೇಷ ಸಂಗತಿ, ವೈದ್ಯರು ಹೇಳಿದ ಔಷಧಿಗಳನ್ನು ಕೊಡುವುದರಲ್ಲಾಗಲಿ, ಸಮಯ ಸಮಯಕ್ಕೆ ಉಟೋಪಚಾರದ ವ್ಯವಸ್ಥೆಯನ್ನು ಮಾಡುತ್ತಿದ್ದದ್ದನ್ನು ನೆನೆದಾಗ ಕನ್ನಡದ ಹಿರಿಯ ಸಾಹಿತಿ ಕಡೆಂಗೋಡ್ಲು ಶಂಕರ ಭಟ್ಟರ ಕಥೆಯೊಂದನ್ನು ೧೯೫೦ರ ದಶಕದಲ್ಲಿ ಓದಿದ್ದು ನೆನಪಾಗುತ್ತದೆ. ಶಂಕರಭಟ್ಟರು ಸಹ ತಮ್ಮ ಹೆಂಡತಿ ಬಗ್ಗೆ ಬರೆದಿದ್ದಾರೆ ಆ ಕಥೆಯ ಶೀರ್ಷಿಕೆ (ಹೊಡೆಯುವ ಗಡಿಯಾರ) ಯಾವ ರೀತಿ ಗಡಿಯಾರ ಸಮಯವನ್ನು ಕರಾರುವಕ್ಕಾಗಿ ತೋರಿಸುತ್ತದೊ ಅದೇ ರೀತಿ ಮಾಡಬೇಕಾದ ಸೇವೆಯನ್ನು ಸಮಯಕ್ಕನುಸಾರ ಕರಾರುವಕ್ಕಾಗಿ ಗಿರಿಜಮ್ಮನವರು ಮಾಡುತ್ತಿದ್ದರೆ. ಔಷಧೋಪಚಾರದ ಸೇವೆಯ ಭಾಗ ಒಂದಾದರೆ ದೇಹಕ್ಕೆ ಸಂಬಂಧಿಸದ ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಸೇವೆಯ ಭಾಗ ಇನ್ನೊಂದು. ಯಾವ ಸಂಕೋಚವೂ ಇಲ್ಲದೆ ತೊಳೆಸುವುದು, ಮೂತ್ರಕ್ಕೆ ಪ್ಯಾನ್ ಕೊಡುವುದು, ಸ್ನಾನ ಮಾಡಿಸುವುದು, ಬಟ್ಟೆತೊಡಿಸುವುದು ಇತ್ಯಾದಿ ಎಲ್ಲವನ್ನು ಸತತವಾಗಿ ಒಂದು ವರ್ಷ ಮಾಡಿದ್ದಾರೆ. ಇದೇ ಹೊತ್ತಿಗೆ ಸಂಸ್ಥೆಯ ಇತರ ಕೆಲಸಗಳ ಬಗ್ಗೆಯೂ ಗಮನ ಕೊಟ್ಟಿದ್ದಾರೆ. ಆಚಾರ್ಯ ವಿನೋಬಾ ಭಾವೆಯವರು ಹೇಳುವಂತೆ ಏಕಾಗ್ರತೆ ಸುಲಭ, ಅನೇಕಾಗ್ರತೆ ತುಂಬಾ ಕಷ್ಟ. ಅಂಥ ಏಕಾಗ್ರತೆಯನ್ನು ಅನೇಕಾಗ್ರತೆಯನ್ನು ಮೈಗೂಡಿಸಿಕೊಂಡಿರುವ ಗಿರಿಜಮ್ಮನವರು ತಮ್ಮ ಪಾಲಿನ ಕರ್ತವ್ಯವನ್ನು ಯಾವ ಲೋಪವು ಉಂಟಾಗದಂತೆ ನಿರ್ವಹಿಸಿದರು. ಸಂಸ್ಥೆಗೆ ಭೇಟಿಕೊಡಲು ಬರುವು ಅತಿಥಿಗಳ ಊಟೋಪಚಾರ ವ್ಯವಸ್ಥೆ ಆಗಿರಬಹುದು, ಮೊಮ್ಮಗನ ಸ್ನಾನ ಮಾಡಿಸುವುದಾಗಿರಬಹುದು, ದತ್ತು ಕೇಂದ್ರದಲ್ಲಿರುವ ಅನಾಥಮಕ್ಕಳ ಯೋಗಕ್ಷೇಮದ ವಿಷಯವಾಗಿರಬಹುದು, ಕೆಲಸಗಾರರ ಊಟ ತಿಂಡಿಯ

ವಿಷಯವಾಗಿರಬಹುದು, ಹೊಸ ಜೀವನದಾರಿಯಲ್ಲಿಯ ವಿಷಯವಾಗಿರಬಹುದು, ಎಲ್ಲದರ ಬಗ್ಗೆ ಸಕರಾತ್ಮಕ ಆಲೋಚನೆ ಮಾಡುವುದನ್ನು ಸಹಜಮಾಡಿಕೊಂಡಿದ್ದಾರೆ. ಟ್ರಸ್ಟ್‌ನಲ್ಲಿರುವ ಎಲ್ಲರ ಹಿತಚಿಂತಕರಾಗಿದ್ದಾರೆ. ಸ್ವಂತ ಹೆಂಡತಿಯ ಬಗ್ಗೆ ಬರೆಯುವುದು ಬಲು ಕಷ್ಟ ಆದರೂ ಅವರು ತಮ್ಮ ಅನಾರೋಗ್ಯದ ಪರಿಸ್ಥಿತಿಯಲ್ಲಿಯೂ ನನಗೆ ಮಾಡಿದ ಸೇವೆಯನ್ನು ಸ್ಮರಿಸದಿದ್ದರೆ ಘೋರ ಅಪರಾಧವಾಗುತ್ತದೆ. "ಬೇರೆಯವರನ್ನು ಸಂತೋಷ ಪಡಿಸುವುದೆ ನನ್ನ ಜೀವನದ ಗುರಿ" ಎಂದು ಹೇಳುವ ಗಿರಿಜಮ್ಮ ಅದನ್ನು ಕಾಯಾವಾಚಾಮನಸಾ ಪಾಲಿಸುತ್ತಾರೆ. ಸ್ವಂತ ಕುಟುಂಬದ ಸಮಸ್ಯೆಯ ನಿರ್ವಹಣೆ ಎಷ್ಟು ಮುಖ್ಯವೂ ಅಷ್ಟೆ ಮುಖ್ಯ ಅವರಿಗೆ ಮನೆಗೆಲಸದಲ್ಲಿ ನೆರವಾಗುವ ರತ್ನಾಳ ಸಂಸಾರದ ಸಮಸ್ಯೆ ನಿರ್ವಹಣೆ. ಮದುವೆಗಿಂತ ಮೊದಲು ಕೂಡ ಸರಳವಾಗಿದ್ದವರು. ಆಡಂಬರದ ಜೀವನ ಇಲ್ಲವೆ ಇಲ್ಲ. ತಿಂಗಳಿಗೆ ಹತ್ತು ರೂಪಾಯಿ ಸಂಸ್ಥೆ ಕೊಟ್ಟ ಅನುದಾನದಲ್ಲಿ ಮೈಸೂರಿನಲ್ಲಿ ಶಿಶುವಿಹಾರದ ಅಧ್ಯಾಪಕೀಯ ಪ್ರಶಿಕ್ಷಣ ಮುಗಿಸಿದವರು. ಬಡತನದ ಕಷ್ಟ ಜೀವನ ಅವರಿಗೆ ಚಿರಪರಿಚಯ ವಿರುವುದರಿಂದ ಕಷ್ಟದಲ್ಲಿ ಇರುವವರ ಭಾವನೆಗೆ ಸ್ಪಂದಿಸುತ್ತಾರೆ. ಮದುವೆಗೆ ಸಿದ್ಧರಾಗುವಾಗ ನಾನೆಷ್ಟು ಓದಿದ್ದೇನೆ, ನನ್ನ ಕೆಲಸವೇನು, ಸಂಬಳವೆಷ್ಟು ಇತ್ಯಾದಿ ಯಾವುದನ್ನು ವಿಚಾರಿಸದೆ ಕೇವಲ ತಮ್ಮ ಒಪ್ಪಿಗೆಯ ಮೇಲೆ ಮದುವೆಯಾದರು. ಮದುವೆ ಸರಳವಾಗಿ ಕೆಲವೇ ಕೆಲ ಆಪ್ತರ ಮಧ್ಯ ಒಂದೇ ಘಂಟೆಯಲ್ಲಿ ಮುಕ್ತಾಯವಾಯಿತ್ತು. ಆಧುನಿಕ ಮದುವೆಯ ಆಡಂಬರ ಲವಲೇಷವಿರಲಿಲ್ಲ. ಮದುವೆ ಸಂದರ್ಭದಲ್ಲಿ ತೊಡಿಸಲಾಗಿದ್ದ ಚಿನ್ನದ ಒಂದು ಜೊತೆ ಬಳೆ ಮುಂದೆ ಇಬ್ಬರು ಸೇರಿ ಜನಪದ ಸೇವಾ ಟ್ರಸ್ಟ್ ಪ್ರಾರಂಭಿಸಿದಾಗ ಬಂದ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವದಕ್ಕಾಗಿ ಸಾಲ ಪಡೆಯಲು ನೆರವಾಗುತ್ತಿತ್ತು. ಆ ಬಳೆ ಅವರ ಕೈಯಲ್ಲಿ ಇರುತ್ತಿದ್ದಕ್ಕಿಂತಲೂ ಹೆಚ್ಚಾಗಿ ಬ್ಯಾಂಕಿನಲ್ಲಿ ಅಡವಾಗಿರುತ್ತಿತ್ತು. ಈಗಲೂ ಅವರು ಅತ್ಯಂತ ಸರಳವಾದ ಹತ್ತಿಬಟ್ಟೆಯ ಸೀರೆಯನ್ನು ಧರಿಸುತ್ತಾರೆ ವಿನಃ ಬೆಲೆಯುಳ್ಳ ಸೀರೆಯನ್ನಲ್ಲ. ಅವರ ಮೈಮೇಲೆ ಒಂದು ಗುಂಜಿ ಚಿನ್ನವು ಇಲ್ಲ. ತೊಟ್ಟಿರುವ ಮಂಗಳಸೂತ್ರವು ದಾರದಲ್ಲಿ ಪೋಣಿಸಿದ ಕರಿಮಣಿ ಮತ್ತು ತಾಳಿಯದ್ದಾಗಿದೆ. ವರ್ಷದಲ್ಲಿ ಎರಡು ಸಲವಾದರು ಹೊಸದಾರದಲ್ಲಿ ಕರಿಮಣಿಪೋಣಿಸುವ ಕೆಲಸ ಇದ್ದದ್ದೇ. ಮನೆಯ ವವ್ಯಹಾರವನ್ನೆಲ್ಲ ಅವರೆ ಚಾಕಚಕ್ಯತೆಯಿಂದ ನಿರ್ವಹಿಸಿದ್ದಾರೆ. ಇಲ್ಲಿ ಕವಿ ಅಂಬಿಕಾತನಯದತ್ತರ ಕವನವೊಂದರ ಸಾಲು ನೆನಪಾಗುತ್ತದೆ. ಅದು ಇಂತಿದೆ :- ನಾನು ಬಡವಿ, ಆತ ಬಡವ ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕ್ಕೂ ಇದಕೂ ಎದಕೂ. ಕವನದ ಈ ಸಾಲಿನ ಅರ್ಥದಂತೆಯೆ ಅವರು ನಮ್ಮ ಸಂಸಾರದ ಜೀವನದ ರಥವನ್ನು ಎಳೆದಿದ್ದಾರೆ ಮತ್ತು ನನ್ನ ಚಾರಿತ್ರ್ಯದ ಮೇಲೂ ಅಂಕುಶ ಇಟ್ಟವರು. ಟ್ರಸ್ಟನ್ನು ಪ್ರಾರಂಭಿಸಿದಾಗ ನನ್ನ ಮದುವೆಯಾಗಿದ್ದರೂ ನನ್ನ ದೃಷ್ಟಿ ಅತ್ತಿತ್ತ ಹೋದಾಗ, ಹೊಡೆಯುವ ಗಡಿಯಾರದಂತೆ ನನ್ನನ್ನು ಎಚ್ಚರಿಸಿ ನಾನು ಇಟ್ಟುಕೊಂಡಿರುವ ಸಿದ್ಧಾಂತ ಮತ್ತು ಗುರಿಯ ಬಗ್ಗೆ ಜ್ಞಾಪಿಸುತ್ತಿದ್ದರು. ಅವರು ನೀಡಿದ ನೈತಿಕ ಬಲದಿಂದಲೇ ಕಳೆದ ೫೨ ವರ್ಷಗಳಿಂದ ಟ್ರಸ್ಟ್ ಅಖಂಡವಾಗಿ ನಡೆದುಕೊಂಡು ಬಂದಿದೆ. ೧೯೬೦ರ ದಶಕದಲ್ಲಿ ನಮ್ಮದು ಪೂರ್ಣ ಬಡತನದ ಜೀವನವಾಗಿದ್ದರೂ ನನಗೆ ಬಡತನದ ಶಾಖ ತಟ್ಟದಂತೆ ನೋಡಿಕೊಂಡ ಆದರ್ಶ ಗೃಹಿಣಿಯವರು.

(ಮುಂದುವರಿಯುವುದು...)

ಖಾದಿ ವಿಚಾರ

ಖಾದಿ ತೊಟ್ಟ ಯಾರನ್ನೇ ಕೇಳಿ ನೋಡಿ. ಮೈಮೇಲಿರಿಸಿಕೊಳ್ಳಲು ಅದಕ್ಕಿಂತ ಹಿತವಾದ ವಸ್ತ್ರ ಇನ್ನೊಂದಿಲ್ಲ ಅಂತ ಹೇಳುವರು. ಇದು ಅಕ್ಷರಶಃ ಸತ್ಯ.

ನಮ್ಮ ದೇಶದ ಅತ್ಯಂತ(ವಸ್ತ್ರಧಾರಿ) ಶ್ರಮಜೀವಿಗಳ ಪೈಕಿಯಾದ ರಾಜಕಾರಣಿಗಳನ್ನು ಕೇಳಿ ನೋಡಿ. ಅಷ್ಟು ಹಿತವಾಗಿಲ್ಲದಿದ್ದರೆ, ಎಷ್ಟೋ ಒಳ್ಳೆಯ ವಿಚಾರಗಳನ್ನು ಬಿಟ್ಟು ಬಿಟ್ಟಿರುವ ಅವರು ಏಕೆ ಖಾದಿ ಧರಿಸುವರು?

ಉದ್ಯೋಗ ಕಲ್ಪಿಸುವುದರಲ್ಲಿ ಕೃಷಿಯ ನಂತರ ಖಾದಿಯದೇ ಸ್ಥಾನ. ಈಚೆಗಿನ ಒಂದು ಉದಾಹರಣೆ, ಸನ್ ೧೯೮೦-೮೫ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಹಳ್ಳಿಗಳಲ್ಲಿ ಅನೇಕ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡರು. ನೆನಪಿಡಿ, ಆಗ ರೈತರ ಆತ್ಮಹತ್ಯೆ ಅಷ್ಟಾಗಿ ಇರಲಿಲ್ಲ ಮತ್ತು ಯಾವತ್ತೂ ಆತ್ಮಹತ್ಯೆ ಮಾಡಿಕೊಳ್ಳುವ ರೈತಾಪಿ ಜನಗಳಲ್ಲಿ ಪುರುಷರೇ ಹೆಚ್ಚು. ಈ ಮಹಿಳೆಯರು ಖಾದಿ ನೂಲುತ್ತಿದ್ದರು. ಖಾದಿ ಮಾರಾಟ ಸರಿಯಾಗಿ ನಡೆಯದೇ ಇದ್ದುದರಿಂದ ಖಾದಿ ಮತ್ತು ಗ್ರಾಮೋದ್ಯೋಗ ಸಮಿತಿ ಆ ಪ್ರದೇಶದಲ್ಲಿ ನೂಲು ಕೊಳ್ಳುವುದನ್ನು ನಿಲ್ಲಿಸಿತು. ಹೀಗಾಗಿ ಆ ಮಹಿಳೆಯರಿಗೆ ಸಿಗುತ್ತಿದ್ದ ಕನಿಷ್ಠ ಹಣವೂ ಸಿಗದೆ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಂಡರು. ಕಳೆದ ಶತಮಾನದ ೩೦ ದಶಕದಲ್ಲಿ ಸ್ವಾತಂತ್ರ್ಯ ಆಂದೋಲನದ ಬಿಸಿ ಏರಿದ್ದಾಗ, ಖಾದಿಯಿಂದ ಲಕ್ಷಾಂತರ ಜನರ ಜೀವನ ಸಾಗುತ್ತಿತ್ತು. ಸ್ವಾತಂತ್ರ್ಯದ ನಂತರವೂ ಮೂರು ನಾಲ್ಕು ದಶಕಗಳು ಗ್ರಾಮೀಣ ಹಾಗೂ ಗುಡಿ ಕೈಗಾರಿಕೆ, ಖಾದಿ, ಕೈಮಗ್ಗ ಇತ್ಯಾದಿಗಳು ಜನರ ಜೀವನದಲ್ಲಿ ಹಾಸು ಹೊಕ್ಕಾಗಿದ್ದವು. ಬಡತನ, ಕಷ್ಟ, ಹಿಂಸೆಗಳು ಇರಲಿಲ್ಲವೆಂದಲ್ಲ. ಆದರೆ ಗ್ರಾಮಿಣ ಸಮುದಾಯಗಳ ಸಾಮುದಾಯಿಕ ಭಾವನೆಗಳು ಸಾಕಷ್ಟು ಉಳಿದಿದ್ದವು. ಎಲ್ಲ ವ್ಯವಹಾರಗಳೂ ಹಣದ ಮೂಲಕವೇ ಆಗುತ್ತಿರಲಿಲ್ಲ.

ಇಂದು ಎಲ್ಲ ವ್ಯವಹಾರಗಳೂ ಹಣದ ಮಾಧ್ಯಮದಿಂದಲೇ ಆಗುತ್ತಿವೆ. ಕೆಲವು ತರಹದ ಕೆಲಸಗಳಲ್ಲಿ ಅಪಾರ ಹಣ ಸಂಪಾದನೆ, ಮಿಕ್ಕಂತೆ ಹಣವೂ ಇಲ್ಲ ಮಾನ್ಯತೆಯೂ ಇಲ್ಲ. ರೂಪಾಯಿ ಬೆಲೆ ಕುಸಿಯುತ್ತಾ ಹಣದುಬ್ಬರ ಹೆಚ್ಚುತ್ತಲೇ ಇದೆ. ಬಲಶಾಲಿ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ನಿಗದಿಸಿದ ಬೆಲೆಗೆ ಅವರ ವಸ್ತುಗಳನ್ನು ನಾವು ಕೊಂಡುಕೊಳ್ಳಲೇ ಬೇಕಾಗಿದೆ. ಸರಕಾರ ಮತ್ತು ಸಮುದಾಯಗಳ ಒತ್ತಾಸೆ ಇಲ್ಲದೆ ಎಲ್ಲ ರೀತಿಯ ಅವಶ್ಯಕ ಉತ್ಪಾದನೆಗಳು, ಆಹಾರವೂ, ಎಣ್ಣೆ, ಬೇಳೆ, ಕಾಳು, ಹಣ್ಣುಗಳು ಎಲ್ಲವೂ ಕಡಿಮೆಯಾಗಿ ಅವುಗಳ ಆಮದು ಹೆಚ್ಚಾಗಿ, ಬೆಲೆಗಳು ಗಗನಕ್ಕೇರಿವೆ. ಬೇಳೆಕಾಳುಗಳು ಬಡವರ ಕೈಗೆಟುಕುವಂತಿಲ್ಲ. ಆಮದಾದ, ರಿಫೈನ್ಡ್ ಎಣ್ಣೆಗಳಿಂದ ಜನರ ಆರೋಗ್ಯ ಕೆಡುತ್ತಿದೆ. (ರಿಫೈನ್ಡ್ ಎಣ್ಣೆ ಬಳಕೆಗೂ ಹೃದಯದ ಕಾಯಿಲೆಗಳಿಗೂ ನೇರ ಸಂಬಂಧ ಇದೆ) ಮೊದಲಾದರೆ, ಧಾನ್ಯಗಳ ಸಂಸ್ಕರಣೆ ಹಾಗೂ ಎಣ್ಣೆ ಉತ್ಪಾದನೆ ಹಳ್ಳಿಗಳಲ್ಲೇ ಆಗುತ್ತಿದ್ದು, ಉಪ ಉತ್ಪನ್ನಗಳಾದ ಹೊಟ್ಟು, ಹಿಂಡಿ, ಹುಲ್ಲು ಮುಂತಾದವು ಜಾನುವಾರಗಳಿಗೆ ಆಹಾರವಾಗಿ ಸಿಗುತ್ತತ್ತು. ಈಗ ಹಳ್ಳಿಗಳಲ್ಲಿ ಜಾನುವಾರಗಳೂ ನಶಿಸಿವೆ. ಅವುಗಳನ್ನು ನೋಡಿಕೊಳ್ಳಬೇಕಾದವರು ಕೂಲಿಗಳಾಗಿ ವಲಸೆ ಹೋಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಏನೂ ಸುಧಾರಣೆ ಅಥವಾ ವ್ಯವಸ್ಥೆ ಮಾಡದೆ, ಸರಕಾರ ನಗರಗಳ ಐಷಾರಾಮಿ ಕಟ್ಟಡಗಳ ಕೆಲಸಕ್ಕೆ ಸುಲಭವಾಗಿ ಕೂಲಿಗಳು ಸಿಗುವಂತೆ ಏರ್ಪಾಡು ಮಾಡಿದೆ.

ಅಂತರಾಷ್ಟ್ರೀಯ ಮಾರುಕಟ್ಟೆಯ ನಿಯಮಗಳು ನಾವು ಏನು ಬೆಳೆಯಬಹುದು ಅದನ್ನು ಯಾವ ಬೆಲೆಗೆ ಮಾರಬೇಕು ಮತ್ತು ಬೇರೆ ದೇಶಗಳಿಂದ ಏನೇನು ಕೊಂಡುಕೊಳ್ಳಲೇಬೇಕು ಎಂದು ನಿರ್ಧರಿಸುತ್ತವೆ. ಇದರಲ್ಲಿ ನಮ್ಮ ಜನರ ಹಿತದ ಚಿಂತನೆ ಎಳ್ಳಷ್ಟೂ ಇಲ್ಲ.

ಸರ್ವೋದಯ ಆಂದೋಲನದ ಮುನ್ನಡೆ

ಕಳೆದ ಮಾರ್ಚ ತಿಂಗಳಲ್ಲಿ ಚಿತ್ರದುರ್ಗ ಸರ್ವೋದಯ ಮಿತ್ರ ಮಂಡಳಿ ೨೨-೩-೨೦೧೩ ರಿಂದ ೨೪-೩-೨೦೧೩ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಸಹಕಾರದೊಂದಿಗೆ ಡಾ.ಆರ್.ಕೃಷ್ಣಮೂರ್ತಿಯವರ ನೇತೃತ್ವದಲ್ಲಿ ಕಣ್ಣಿನ ಉಚಿತ ನೇತ್ರ ಚಿಕಿತ್ಸೆಯನ್ನು ಏರ್ಪಡಿಸಿತ್ತು. ಡಾ.ಭೀಮಾರೆಡ್ಡಿಯವರು ಶಿಬಿರದ ಸಮಸ್ತ ಖರ್ಚುವೆಚ್ಚವನ್ನು ವಹಿಸಿಕೊಂಡಿದ್ದರು. ಸಾಧ್ಯವಾದಲ್ಲಿ ಇಂತಹ ಶಿಬಿರವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಲು ಆಲೋಚಿಸಲಾಗಿದೆ

ಶಿಬಿರದ ಉದ್ಘಾಟನೆಯನ್ನು ಹಿರಿಯ ಸರ್ವೋದಯ ಕಾರ್ಯಕರ್ತರು ಮತ್ತು ಮಂಗಳೂರು ಸರ್ವೋದಯ ಮಿತ್ರ ಮಂಡಳಿಯ ನಾಯಕರು ಆದ ಶ್ರೀ ನಾಮದೇವ ಶೆಣೈ ಉದ್ಘಾಟಿಸಿದರು. ಸರ್ವೋದಯ ಮಿತ್ರರಾದ ಯಶ್ವಂತರವರು ಹಾಜರಿದ್ದರು.

ಮಂಡಳಿಯ ಅಧ್ಯಕ್ಷರಾದ ಡಿ.ಎಲ್.ಭೀಮಾರೆಡ್ಡಿಯವರೂ ನಡೆಸಿಕೊಟ್ಟರು. ಶ್ರೀ.ಎಮ್ ತಿಮ್ಮಾರೆಡ್ಡಿ, ಉಪಾಧಕ್ಷ್ಯ ಎಸ್.ಜಿ ದೀಲಿಪಕುಮಾರ ಮತ್ತು ಕಾರ್ಯದರ್ಶಿ ಮೋಹನಾಥ ರೆಡ್ಡಿ ಶಿಬಿರದ ನೇತೃತ್ವ ವಹಿಸಿದರು.

* * *

ಇತ್ತೀಚಿಗೆ ಅಸ್ಸಾಂ ರಾಜ್ಯದಲ್ಲಿ ಗಲಭೆ ಉಂಟಾದ ಸಂದರ್ಭದಲ್ಲಿ ಸರ್ವಸೇವಾಸಂಘದ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿ ಶಾಂತಿಯನ್ನೆಲೆಗೊಳಿಸಲು ಪ್ರಯತ್ನಿಸಲಾಯಿತು. ಅಲ್ಲಿಯ ಜನರ ಸಹಾಯಕ್ಕೆ ಅಪೀಲ್ ಮಾಡಿದ ಕಾರಣವಾಗಿ ೪.೧೪.೭೦೦ ರೂಪಾಯಿಗಳ ಸಂಗ್ರಹವಾಯಿತು. ಅದರಲ್ಲಿ ೧.೨೫೦೦೦ ರೂಪಾಯಿಗಳನ್ನು ಆಸ್ಸಾಂಗೆ ಕಳುಹಿಸಲಾಯಿತು.

ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಯುವಕರ ಪಾಲುಗಾರಿಕೆ ನಿಶ್ಚಿತ ಮಾಡುವುದಕ್ಕಾಗಿ ಮತ್ತು ಅವರನ್ನು ಸಕ್ರಿಯಗೊಳಿಸಲು ಪಟ್ನಾದಲ್ಲಿ ಐದು ದಿವಸಗಲ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ೬೦ ಯುವಕರು ಭಾಗವಹಿಸಿದ್ದರು. ಅವರಲ್ಲಿ ೨೫ಜನ ಯುವತಿಯರಿದ್ದರು.

ಉತ್ತಾರಖಂಡದಲ್ಲಿ ಚಿಪ್ಕೊ ಆಂದೋಲನದಿಂದ ಕೆಲಸ ಪ್ರಾರಂಭವಾಯಿತು. ಪ್ರಾಕೃತಿಕ ಸಂಪನ್ಮೂಲಗಳನ್ನು ಉಳಿಸುವುದು ಮದ್ಯಪಾನ ನಿಷೇದ ಗ್ರಾಮಸ್ವರಾಜ್ಯ ಇತ್ಯಾದಿ ಕೆಲಸಗಳನ್ನು ಕೈಎತ್ತಿಕೊಳ್ಳಲಾಗಿತ್ತು. ನದಿ ಉಳಿಸಿ ಯಾತ್ರೆಯನ್ನು ಆಯೋಜನೆ ಮಾಡಲಾಗಿತ್ತು. ಪ್ರವಾಹದ ಕಾರಣದಿಂದ ಮನೆ ಕಳೆದು ಕೊಂಡವರಿಗೆ ಮನೆಕಟ್ಟಿಸಿ ಕೊಡುವ ಕೆಲಸ ನಡೆಯುತ್ತಿದೆ.

ಇತ್ತೀಚೆಗೆ ಕೈಗೊಳ್ಳಲಾದ ಸರ್ವಸೇವಾ ಸಂಘದ ಬೈಲಾ ತಿದ್ದುಪಡಿ ಪ್ರಕಾರ

ಲೋಕ ಸೇವಕರು ವರ್ಷಕ್ಕೆ ೨೫ರೂಪಾಯಿ ಕೊಡಬೇಕಾಗುತ್ತದೆ. ಸರ್ವೋದಯ ಮಿತ್ರರು ಹತ್ತು ರೂಪಾಯಿ ಅದರಲ್ಲಿ ಜಿಲ್ಲಾ ಅಥವಾ ಪ್ರಾಥಮಿಕ ಸರ್ವೋದಯ ಮಂಡಲಕ್ಕೆ ಐದುರೂಪಾಯಿ ಪ್ರದೇಶ ಸಮಂಡಲಕ್ಕೆ ೧೦ ರೂಪಾಯಿ ಸರ್ವಸೇವಾ ಸಂಘಕ್ಕೆ ೧೦ ರೂಪಾಯಿ ಸಂದಾಯವಾಗುವುದು ಅದೇ ರೀತಿ ಸಮಿತ್ರರು ಕೊಟ್ಟ ಶುಲ್ಕದಲ್ಲಿ ಪ್ರಾಥಮಿಕ ಅಥವಾ ಜಿಲ್ಲಾ ಮಂಡಲಕ್ಕೆ ೬ ರೂಪಾಯಿ. ಪ್ರದೇಶ ಸರ್ವೋದಯ ಮಂಡಲಕ್ಕೆ ೨ ರೂಪಾಯಿ ಸರ್ವ ಸೇವಾಸಂಘಕ್ಕೆ ೨ ರೂಪಾಯಿ ಸಂದಾಯವಾಗುತ್ತದೆ.

ಈ ಹೊಸ ಶುಲ್ಕ ೨೦೧೩ ಏಪ್ರಿಲ್ ೧ರಿಂದ ಜಾರಿಗೆ ಬಂದಿದೆ. ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುವ ಕನಿಷ್ಟ ೫ ಲೋಕಸೇವಕರ ಸಂಘಟಿತ ಘಟಕವನ್ನು ಪ್ರಾಥಮಿಕ ಸರ್ವೋದಯ ಮಂಡಲವೆಂದು ಕರೆಯಲಾಗುವುದು. ಪ್ರತಿಯೊಂದು ಹಳ್ಳಿಯಲ್ಲಿ ಲೋಕ ಸೇವಕರಿರಬೇಕು ಮತ್ತು ಪ್ರಾಥಮಿಕ ಸರ್ವೋದಯ ಮಂಡಲವಿರಬೇಕೆಂಬುದು ನಮ್ಮ ಗುರಿಯಾಗಿದೆ. ಯಾವ ಜಿಲ್ಲೆಯಲ್ಲಿ ಹತ್ತು ಲೊಕ ಸೇವಕರಿದ್ದಾರೊ ಮತ್ತು ಕನಿಷ್ಟ ೧೫ ಸರ್ವೋದಯ ಮಿತ್ರರಿದ್ದಾರೊ ಅಲ್ಲಿ ಜಿಲ್ಲಾ ಸರ್ವೋದಯ ಮಂಡಲ ರಚಿಸಬಹುದು. ಆದರೆ ಮಂಡಲಿಯ ಪದಾಧಿಕಾರಿ ಲೋಕಸೇವಕರೇ ಆಗಿರಬೇಕು.

ಹತ್ತು ಲಕ್ಷ ಅಥವಾ ಅದಕ್ಕೊ ಮಿಗಿಲಾಗಿ ಜನಸಂಖ್ಯೆ ಇರುವ ಮಹಾ ನಗರದಲ್ಲಿ ಜಿಲ್ಲಾ ಸರ್ವೋದಯ ಮಂಡಲಕ್ಕೆ ಇರುವ ನಿಯಮಗಳ ಅನುಸಾರ ನಗರ ಸರ್ವೋದಯ ಮಂಡಲ ರಚಿಸಬಹುದು. ಅದಕ್ಕೆ ಜಿಲ್ಲಾ ಸರ್ವೋದಯ ಮಂಡಲದ ಸ್ಥಾನ ಪ್ರಾಪ್ತವಾಗುವುದು.

ಸರ್ವಸೇವಾ ಸಂಘದ ಮುಂದಿನ ಕಾರ್ಯಕಾರಿ ಸಮಿತಿ ಸಭೆ ಹಾಲಪುಂಜಿ, ಕೇರಳದಲ್ಲಿ ೨೦೧೩ ಆಗಸ್ಟ್ ೨೩-೨೪ ರಂದು ನಡೆಯುವುದು. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ, ಶ್ರೀ ಕೆ.ಜಿ ಜಗದೀಶರವರನ್ನು ಸಂಪರ್ಕಿಸಿ-೯೪೪೭೦೮೬೫೪೯. ಇಲ್ಲವೇ ಕರ್ನಾಟಕ ಸರ್ವೋದಯ ಮಂಡಲ ಸಂಪರ್ಕಿಸಿ. ಶ್ರೀ ಸುರೇಂದ್ರ ಕೌಲಗಿ ೯೧೪೧೭೦೦೮೧೨

ಇತ್ತೀಚಿಗೆ ಅಖಿಲ ಭಾರತ ಮದ್ಯಪಾನ ನಿಷೇದ ಪರಿಷತ್ತಿನ ಕಾರ್ಯಕಾರಿಣಿ ಮತ್ತು ಸಾಧಾರಣ ಸಭೆಯಲ್ಲಿ ಡಾ॥ ಎಸ್.ಎನ್ ಸುಬ್ಬರಾವ್‌ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಆರ್. ಯೋಗಾನರಸಿಂಹರಾವ್;
ಶ್ರೀ ಉದಯ ಸೊಂಡೂರು – ಬೆಂಗಳೂರು
ಶ್ರೀ ಹೆಚ್.ಎಂ.ಶಿವಣ್ಣ – ಹಾಸನ
ಶ್ರೀ ಕೆ.ವೆಂಕಟರಾಜು – ಚಾಮರಾಜನಗರ
ಶ್ರೀಮತಿ ವಿ. ಇಂದುಮತಿ ವಿಜೇಂದ್ರ – ಮದ್ರಾಸ್
ಶ್ರೀ ಯು.ಎಸ್.ರವಿಕುಮಾರ್ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಡಾ॥ ಚಿದಾನಂದ ಮೂರ್ತಿ – ಬೆಂಗಳೂರು
ಶ್ರೀ ಎಂ.ಮಹಾದೇವಪ್ಪ – ಮೈಸೂರು.
ಶ್ರೀ ಹೆಚ್.ಎನ್.ಗೋಪಾಲಯ್ಯ – ಕೆ.ಆರ್.ಪೇಟೆ,
ಶ್ರೀ ಜೆ.ಕೆ. ಪವನ್; ಪ್ರೊ॥ ವೈ.ಜಿ.ಸಂಪತ್‌ಕುಮಾರ್;
ಡಾ॥ ಬಿ.ಟಾಂಬಟ್ – ಹಾಸನ
ಶ್ರೀ ಹೆಚ್.ಬಿ.ವಿಜಯಪ್ರಕಾಶ್; ಶ್ರೀ ಶಿವಶಂಕರಪ್ಪ – ತುಮಕೂರು
ಶ್ರೀ. ಎಸ್.ಸುರೇಶ್; ಶ್ರೀ ಕೆ.ಟಿ.ಸತ್ಯಣ್ಣ
ಶ್ರೀ ಎಂ.ಕಿರಣ್ ಕುಮಾರ್ – ಚಿತ್ರದುರ್ಗ
ಶ್ರೀ ಎಮ್.ಎನ್.ಚೇತನ್; ಶ್ರೀ ಎನ್.ಮೋಹನ್ ಕುಮಾರ್;
ಶ್ರೀ ಲಿಂಗರಾಜು – ಮಂಡ್ಯ
ಶ್ರೀ ಎಫ್.ಪ್ರಶಾಂತ್ ಕುಮಾರ್; ಶ್ರೀ ಹೆಚ್.ಮಂಜುನಾಥ – ದಾವಣಗೆರೆ
ಶ್ರೀ ಬಿ.ಸಿ.ವಿಜಯಕುಮಾರ್ – ಬಸರಾಳು
ಶ್ರೀ ಎಂ.ಪುಟ್ಟಲಿಂಗಮೂರ್ತಿ – ಶಿವಮೊಗ್ಗ
ಶ್ರೀಮತಿ ಪಿ.ಪಿ.ಗಾಯತ್ರಿ – ಕೊಡಗು
ಶ್ರೀ ಎಚ್.ಆರ್.ಮಹಾದೇವಸ್ವಾಮಿ – ಚಾಮರಾಜನಗರ
ಶ್ರೀಮತಿ ಅಬೀದಾ ಬೇಗಂ – ರಾಮನಗರ
ಶ್ರೀ ಆರ್.ನಂಜುಂಡ – ಚನ್ನರಾಯಪಟ್ಟಣ
ಶ್ರೀ ಲಕ್ಷ್ಮೀನಾರಯಣರೆಡ್ಡಿ – ಬೆಂಗಳೂರು
ಡಾ॥ ಅಶೋಕ್‌ರೆಡ್ಡಿ – ಚಳ್ಳಕೆರೆ
ಶ್ರೀ ಕುಮಾರಸ್ವಾಮಿ – ನಾಗಮಂಗಲ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.